ಸಂವಾದ

ಮಾಸ ಪತ್ರಿಕೆ

ಸ್ವಾಭಿಮಾನದ ರಥ ಚಲಿಸುತ್ತಿದೆ...

ಸಂಪುಟ-1 ಸಂಚಿಕೆ-1
ನವೆಂಬರ್ 2002



ರೂ. 10/-

ಸಂವಾದ

ಮಾಸ ಪತ್ರಿಕೆ

ಸಂಪುಟ 1 ಸಂಚಿಕೆ 1
ನವೆಂಬರ್ 2002

ಸಂಪಾದಕ :
ಇಂದೂಧರ ಹೊನ್ನಾಪುರ

ನೆರವು :
ಕೆ.ಸಿ. ಶಿವರಾಂ
ಡಾ॥ ಎಂ. ಶಿವಲಿಂಗಯ್ಯ
ಸುಬ್ಬು ಹೊಲೆಯಾರ್

ವಿಳಾಸ : ಸ್ಫೂರ್ತಿಧಾಮ
ಬಾಬಾಸಾಹೇಬ್ ಅಂಬೇಡ್ಕರ್
ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143
ಹೇರೋಹಳ್ಳಿ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - 560 091
ದೂರವಾಣಿ : 3287943 / 3281667

PRINTED AND PUBLISHED BY
S. R. GOVINDU
ON BEHALF OF
SPOORTHIDHAMA,
PB NO. 9143, HEROHALLI
VISHWANEEDAM POST
BANGALORE - 560 091
PHONE : 3287943, 3281667
EDITOR :
INDUDHARA HONNAPURA

ಒಳ ಪುಟಗಳಲ್ಲಿ

- ಅಂತರಂಗ 3
- ಸಂಸ್ಕೃತಿಯೊಂದಕ್ಕೆ ಶ್ರದ್ಧಾಂಜಲಿ 4
- ತಲೆ ಮೇಲೆ ತೂಗುವ ಕತ್ತಿ 7
- ಅವಲೋಕನ 8
- ಮಹಾತ್ಮಪುಲೆ 10



- ಝೂನ್ ಎಂದರೆ !? 13
- ಬ್ರಾಹ್ಮಣವಾದದ ವಿರುದ್ಧ ಧರ್ಮಯುದ್ಧ 14
  ○ ಬಾಬು ಜಗಜೀವನ ರಾಂ

- ಜಾತೀಯತೆ, ಅಸ್ಪೃಶ್ಯತೆ ಮತ್ತು ಕಾನೂನು 16
  ○ ಪ್ರೊ. ಕಾಂಚ ಐಲಯ್ಯ
- ದಲಿತ ಚಳವಳಿ : ಹೆಜ್ಜೆ ಗುರುತು ಹುಡುಕುತ್ತಾ 18
- ಬೇಕು; ವೃತ್ತಿ ವಿಮುಖತೆ ಪೌರಕಾರ್ಮಿಕರಿಗೆ 22
- ದಲಿತರ ಮೇಲೆ ಆರ್ಥಿಕ ಸುಧಾರಣೆಗಳ ದುಷ್ಪರಿಣಾಮಗಳು 24
- ಸ್ಫೂರ್ತಿಧಾಮ : ಪರ್ಯಾಯಗಳ ಹುಡುಕಾಟದಲ್ಲಿ 29
- ಲಂಪಟ ಆರ್ಯರೂ; ನಾಗರಿಕ ಮೂಲನಿವಾಸಿಗಳೂ... 30
- ಬೌದ್ಧ ಧರ್ಮ ; ಜೀವನ ಮಾರ್ಗ 32
- ನನ್ನ ಈ ನೆಲದಲ್ಲಿ 33
- ಜಾತ್ಯಾತೀತರ ಮುಂದಿರುವ ಸವಾಲುಗಳು 34
- ಮೇರಾ ಭಾರತ್ ಮಹಾನ್ 36

ಇಲ್ಲಿನ ಲೇಖನಗಳಲ್ಲಿ ವ್ಯಕ್ತಪಡಿಸಲಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವುಗಳಾಗಿವೆ.

ಅಂತರಂಗ

ಭಾರತದ ಹೃದಯಕ್ಕೆ ಮತ್ತೆ ಬೆಂಕಿ ಬಿದ್ದಿದೆ. ಅಕ್ಟೋಬರ್ 16ರಂದು ಹರಿಯಾಣದ ಝಜ್ಜರ್‌ನಲ್ಲಿ ಐವರು ದಲಿತರನ್ನು ಮತಾಂಧ ಹಿಂದೂಗಳು ಕಲ್ಲಿನಿಂದ ಹೊಡೆದು ಬರ್ಬರವಾಗಿ ಕೊಲೆ ಮಾಡಿದ್ದಾರೆ. ಬಿಹಾರ್‌ನಲ್ಲಿ ನಿಷೇದಿತ ರಣವೀರ ಸೇನೆ ಹೊಸ ಪೋಷಾಕಿನೊಂದಿಗೆ ಬಹಿರಂಗವಾಗಿ ದಲಿತರ ಮೇಲೆ ಯುದ್ಧ ಸಾರಿದೆ. ಸಂವಿಧಾನದ ಅನ್ವಯ ದೇಶ ಆಳುವ ಪ್ರತಿಜ್ಞೆ ಮಾಡಿದ್ದ ವಾಜಪೇಯಿ-ಅದ್ವಾನಿಗಳು ಹಿಂದೂ ಪುಂಡರ ಅಟ್ಟಹಾಸ ಕಂಡು ಪುಳಕಿತರಾಗಿದ್ದಾರೆ. ದೇಶದ ಆತ್ಮ ಸತ್ತು ಬಿದ್ದಿದೆ.

ಕರ್ನಾಟಕದ ಕಂಬಾಲಪಲ್ಲಿ, ನಾಗಲಾಪಲ್ಲಿಗಳು ಇನ್ನೂ ದಲಿತರ ಮನಸ್ಸಿನಲ್ಲಿ ದುಃಸ್ವಪ್ನಗಳಾಗಿ ಕಾಡುತ್ತಿರುವಾಗಲೇ ಝಜ್ಜರ್ ಘಟನೆ ಸಿಡಿಲಿನಂತೆ ಬಂದೆರಗಿದೆ. ಕಂಬಾಲಪಲ್ಲಿ-ನಾಗಲಾಪಲ್ಲಿಗಳಲ್ಲಿ ಪರಸ್ಪರ ದ್ವೇಷಾಸೂಯೆಗಳಾದರೂ ಬಹಳ ಕಾಲದಿಂದ ಹೊಗೆಯಾಡುತ್ತಿದ್ದವು. ಆದರೆ ಝಜ್ಜರ್ ಘಟನೆಗೆ ಅಂಥ ವ್ಯಯಕ್ತಿಕ ದ್ವೇಷಾಸೂಯೆಗಳಾವುವೂ ಇರಲಿಲ್ಲ.

ಅಕ್ಟೋಬರ್ 16ರಂದು ಗುರುಗಾಂವ್-ಝಜ್ಜರ್ ಹೆದ್ದಾರಿಯಲ್ಲಿ ದಲಿತರ ಗುಂಪೊಂದು ಸತ್ತ ಹಸುವಿನ ಚರ್ಮವನ್ನು ಸುಲಿಯುತ್ತಿತ್ತು. ಅದು ಅವರ ಕಸುಬು. ಮತಾಂಧ ಹಿಂದೂ ಪುಂಡರುಗಳು ಅದನ್ನು ಜೀವಂತ ಹಸುವಿನ ಚರ್ಮ ಸುಲಿಯುತ್ತಿದ್ದಾರೆಂದು ಸುದ್ದಿ ಹಬ್ಬಿಸಿದರು. ಕ್ಷಣ ಮಾತ್ರದಲ್ಲಿ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ವಿಶ್ವ ಹಿಂದೂ ಪರಿಷತ್, ಆರೆಸ್ಸೆಸ್ ಹಾಗೂ ಭಜರಂಗಿಗಳು ಗುಂಪು ಗೂಡಿದರು. ಹೆದರಿದ ದಲಿತರು ಆಶ್ರಯಕ್ಕಾಗಿ ಹತ್ತಿರವೇ ಇದ್ದ ಪೊಲೀಸ್ ಠಾಣೆಗೆ ನುಗ್ಗಿದರು.

ರಕ್ಷಣೆ ಕೋರಿ ಠಾಣೆಗೆ ಬಂದ ಅಸಹಾಯಕ ದಲಿತರಿಗೆ ಪೊಲೀಸರು ರಕ್ಷಣೆ ಕೊಡುವ ಬದಲು ಜಾತಿವಾದಿ ರಾಕ್ಷಸರ ಕೈಗೆ ಅವರನ್ನು ಒಪ್ಪಿಸಿದರು. ಸಂಘ ಪರಿವಾರದ ರಕ್ತ ಪಿಪಾಸುಗಳು ದಲಿತರನ್ನು ಕಲ್ಲು ಇಟ್ಟಿಗೆಗಳಿಂದ ಹೊಡೆದು ಬರ್ಬರವಾಗಿ ಹತ್ಯೆ ಮಾಡಿದರು. ಪೊಲೀಸರು ಕೊಲೆಗೆಡುಕರಿಗೆ ರಕ್ಷಣೆ ನೀಡಿದರು. ಇನ್ನು ಬೀಭತ್ಸವೆಂದರೆ, ಪೊಲೀಸರ ಕಣ್ಣೆದುರೇ ನಡೆದ ಐವರು ದಲಿತರ ಬರ್ಬರ ಹತ್ಯೆ ಕುರಿತು ತನಿಖೆಗೆ ಆಜ್ಞಾಪಿಸುವ ಬದಲು ಚರ್ಮ ಸುಲಿಯುತ್ತಿದ್ದ ಹಸುವಿನ ಮರಣೋತ್ತರ ಪರೀಕ್ಷೆಗೆ ಅಲ್ಲಿನ ಅಧಿಕಾರಿಗಳು ಆದೇಶಿಸಿದರು.

ಸಂಘ ಪರಿವಾರದ ಮತಿಭ್ರಷ್ಟ ನಾಯಕನೊಬ್ಬನ ಅಣಿಮುತ್ತಿನಂತೆ ಐವರು ದಲಿತರ ಜೀವಕ್ಕಿಂತ ಒಂದು ಹಸುವಿನ ಜೀವ ಅಮೂಲ್ಯವಂತೆ! ಎಂಥ ಅನಾಗರಿಕ ಜನರ ನಡುವೆ ನಾವು ಬದುಕಿದ್ದೇವೆ! ಎಂಥ ಅಧಃಪತನ!

ಭಾರತದ ಸಧ್ಯದ ಸಾಮಾಜಿಕ ಸಂದರ್ಭದಲ್ಲಿ ದಲಿತರು ಎಡಬಿಡಂಗಿಗಳಾಗುತ್ತಿದ್ದಾರೆ. ಅಂಬೇಡ್ಕರ್ ಚಿಂತನೆಗಳೊಂದಿಗೆ ಮುನ್ನಡೆಯಲೂ ಆಗದೆ, ಮತಾಂಧ ಹಿಂದೂಗಳೊಂದಿಗೆ ಸ್ಪರ್ಧಿಸಲೂ ಆಗದೆ ಇಕ್ಕಟ್ಟಿನಲ್ಲಿ ಬಿದ್ದಿದ್ದಾರೆ. ಕೇಸರೀಕರಣ-ಜಾಗತೀಕರಣದ ಆಮಿಷಗಳತ್ತ ಒಂದು ಕಡೆ ಆಕರ್ಷಿತರಾಗುತ್ತಿದ್ದರೆ ಇನ್ನೊಂದು ಕಡೆ ಹಿಂದೂ ಧರ್ಮದ ಹೊರಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಎರಡನೆಯಕ್ಕಿಂತ ಮೊದಲನೇ ಆಕರ್ಷಣೆಯೇ ಅವರಿಗೆ ಹೆಚ್ಚು ಅಪ್ಯಾಯಮಾನವಾಗಿ ಈಗ ಕಾಣುತ್ತಿರುವಂತಿದೆ.

ಇಲ್ಲಿ ಗಂಭೀರವಾಗಿ ಪರಿಗಣಿಸಬೇಕಾದ ಅಂಶವೊಂದಿದೆ. ದಲಿತರು ಎಂದಾದರೂ ಹಿಂದೂಗಳಾಗಿ ಪರಿವರ್ತಿತವಾಗಲು ಸಾಧ್ಯವೆ? ಹಿಂದೂ ಧರ್ಮದಲ್ಲಿ ದಲಿತರಿಗೆ ಗೌರವಯುತ ಸ್ಥಾನ ಸಿಗಲು ಸಾಧ್ಯವೆ? ಅಂಥ ಅಂಶಗಳೇನಾದರೂ ಹಿಂದೂ ಧರ್ಮದಲ್ಲಿ ಇವೆಯೆ? ಇದಕ್ಕೆ ಉತ್ತರ ಬೇಕಾದರೆ ಅಂಬೇಡ್ಕರ್ ಅವರನ್ನು ಅಭ್ಯಾಸ ಮಾಡಲೇ ಬೇಕಾಗುತ್ತದೆ. ಅಸಮಾನತೆಯೇ ಮೌಲ್ಯವಾಗಿರುವ ಹಿಂದೂ ಸಮಾಜದೊಳಗೆ ದಲಿತರಿಗೆ ಸೂಜಿಮೊನೆಯಷ್ಟಾದರೂ ಗೌರವಯುತ ಸ್ಥಾನವಿದ್ದಿದ್ದರೆ ಅಂಬೇಡ್ಕರ್ ಬೌದ್ಧ ಮತಾವಲಂಬಿಯಾಗುತ್ತಿದ್ದರೆ? ಹಿಂದೂಗಳೊಂದಿಗೆ ಚೌಕಾಶಿಗೆ ಪ್ರಯತ್ನಿಸುತ್ತಿರುವ ದಲಿತರು ಕೊಂಚ ಯೋಚಿಸಬೇಕು.

ಕೇಸರೀಕರಣ ಹಾಗೂ ಜಾಗತೀಕರಣದ ಈ ಹೊತ್ತಿನಲ್ಲಿ ದಲಿತರ ಮೇಲೆ ಹಿಂದೆಂದೂ ಇಲ್ಲದಷ್ಟು ಪ್ರಮಾಣದಲ್ಲಿ ಹಲ್ಲೆ ದೌರ್ಜನ್ಯಗಳಾಗುತ್ತಿವೆ. ಸರ್ಕಾರದ ಅಧಿಕೃತ ಅಂಗ ಸಂಸ್ಥೆಯಾದ ಪರಿಶಿಷ್ಟ ಜಾತಿ/ವರ್ಗಗಳ ಆಯುಕ್ತರು ನೀಡಿರುವ ವರದಿಯಲ್ಲಿ 2000-2001ರ ಅವಧಿಯಲ್ಲಿ ದಲಿತರ ಮೇಲೆ 23,742 ದೌರ್ಜನ್ಯ ಪ್ರಕರಣಗಳು ನಡೆದಿವೆ. ಅವುಗಳಲ್ಲಿ 1034 ಪ್ರಕರಣಗಳು ದಲಿತ ಮಹಿಳೆಯರ ಮೇಲೆ ನಡೆದ ಅತ್ಯಾಚಾರಗಳು, 3241 ದಲಿತರ ಹತ್ಯೆಗಳು. ಅಂದರೆ ನಿತ್ಯ ಮೂರು ಅತ್ಯಾಚಾರ ಪ್ರಕರಣಗಳು ಹಾಗೂ ಒಂಭತ್ತು ಹತ್ಯೆ ಪ್ರಕರಣಗಳು ನಡೆಯುತ್ತಿವೆ. ಇದು ಸರ್ಕಾರದ ಅಧಿಕೃತ ಅಂಕಿ ಅಂಶ. ಸರ್ಕಾರದ ಕಣ್ಣಿಗೆ ಕಾಣದ ಇನ್ನೆಷ್ಟು ಪ್ರಕರಣಗಳು ಇರಬಹುದು ಊಹಿಸಿ?

ಹಿಂದೂ ಧರ್ಮದ ಕಪಿಮುಷ್ಟಿಯಲ್ಲಿ ಸಿಲುಕಿರುವ ದಲಿತರಿಗೆ ಇದಕ್ಕಿಂತ ಬೇರಾವ ಬಹುಮಾನ ಸಿಗಲು ಸಾಧ್ಯ? ಹಿಂದೂ ಧರ್ಮ ಕೊಲೆಗೆಡುಕರ ಧರ್ಮವೆಂದು ಸಾಬೀತಾದ್ದರಿಂದಲೇ ಅಂಬೇಡ್ಕರ್ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ದಲಿತರೆಲ್ಲರಿಗೂ ತನ್ನ ದಾರಿ ಹಿಡಿಯುವಂತೆ ಮನವಿ ಮಾಡಿದರು. ಆದರೆ ಹಿಂದೂಗಳೊಂದಿಗೆ ಚೌಕಾಶಿಯಲ್ಲೇ ಕಾಲಕಳೆಯುತ್ತಿರುವ ದಲಿತರಿಗೆ ಇನ್ನೂ ಬುದ್ಧಿ ಬಂದಿಲ್ಲ!

★ ★ ★ ★ ★

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗುತ್ತಿದೆ. ಸಮಾಜದಲ್ಲಿ ಸ್ವಾಭಿಮಾನ, ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹಂಬಲಿಸುವ ಎಲ್ಲರ ವೇದಿಕೆಯಾಗಬೇಕೆಂಬುದು 'ಸಂವಾದ'ದ ಆಸೆ. ಎಲ್ಲ ಜನ ವರ್ಗದ ಸಂಕಟ-ನೋವು ಮತ್ತು ಪರಿಹಾರಗಳಿಗೆ ತನ್ನನ್ನು ತೊಡಗಿಸಿಕೊಳ್ಳಲು ಪತ್ರಿಕೆ ಇಚ್ಛಿಸುತ್ತದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನ ವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ಅಭಿವ್ಯಕ್ತಿ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ತಮ್ಮೆಲ್ಲರ ಪಾಲ್ಗೊಳ್ಳುವಿಕೆಯೇ ಪತ್ರಿಕೆಯ ಯಶಸ್ಸು! ತಾವೆಲ್ಲ ಲೇಖನ-ಪ್ರತಿಕ್ರಿಯೆಗಳನ್ನು ಕಳುಹಿಸುವ ಮೂಲಕ ಸಹಕರಿಸಬೇಕೆಂದು ಕೋರುತ್ತೇವೆ.

○ ಇಂದೂಧರ ಹೊನ್ನಾಪುರ
ಸಂಪಾದಕ

ಸಂಸ್ಕೃತಿಯೊಂದಕ್ಕೆ ಶ್ರದ್ಧಾಂಜಲಿ



ಗುಜರಾತ್ ಕೋಮು ದಳ್ಳುರಿಯ ರುದ್ರ ನರ್ತನ

> ಗುಜರಾತು ಮೋಹನದಾಸ ಕರಮಚಂದ ಗಾಂಧಿಯನ್ನು ಬಹಳ ಹಿಂದೆಯೆ ತೊರೆದಾಗಿದೆ; ಆ ರಾಜ್ಯದ ರಾಜಕೀಯ ಆತ್ಮದಲ್ಲಿ ಗಾಂಧಿ ಹಂತಕರ ಪ್ರೇತ ಹೊಕ್ಕಾಗಿದೆ. ಈ ಬಾರಿ ಆ ದುರುಳರು ಗಾಂಧಿಯನ್ನು ಮತ್ತೊಮ್ಮೆ ಹತ್ಯೆಗೈದಿರುವುದಷ್ಟೆ ಅಲ್ಲ, ರಕ್ಕಸ ಖುಷಿಯ ಕೇಕೆ ಹಾಕುತ್ತಾ ಕೊಳಕು ನುಡಿಗಳನ್ನು ಕಿರುಚುತ್ತ ಆತನ ಶವದ ಮೇಲೆ ಕುಣಿದಾಡಿದ್ದಾರೆ. ಇದಕ್ಕೆ ಎದುರಾಗಿ, ರಾಜ್ಯದ ನಾಝಿವಾದಿ ಸರ್ಕಾರದ ವಿರುದ್ಧ ದಿಟ್ಟ ಸಾರ್ವಜನಿಕ ನಿಲುವೊಂದನ್ನು ತಳೆಯುವುದು ಬಿಟ್ಟು ಗಾಂಧಿವಾದಿಗಳು ನಿಷ್ಪ್ರಯೋಜಕ ಶಾಂತಿ ಮೆರವಣಿಗೆಗಳನ್ನು ಏರ್ಪಡಿಸಿದರು. ಇಂಥ ಸನ್ನಿವೇಶದಲ್ಲಿ, ನಗರದ ಸರ್ವ ಪ್ರಥಮ ಆಶ್ರಯಧಾಮವಾಗಬೇಕಿದ್ದ ಸಬರಮತಿ ಆಶ್ರಮ ತನ್ನ ಆಸ್ತಿ ಪಾಸ್ತಿ ರಕ್ಷಣೆಗೆಂದು ಬಾಗಿಲು ಹಾಕಿಕೊಂಡು ತಣ್ಣಗೆ ಕುಳಿತಿರುವುದು ಅಚ್ಚರಿಯ ಸಂಗತಿಯೇನಲ್ಲ.
>
> O ಆಶೀಷ್ ನಂದಿ
>
> ಸಂಗ್ರಹ-ಅನುವಾದ : ಜಶವಂತ ಜಾಧವ   ಕೃಪೆ : ನೀನಾಸಂ ಮಾತುಕತೆ

ನಾನು ಗುಜರಾತನ್ನು ಮೊದಲ ಸಲ ಕಂಡಿದ್ದು 1960ರ ದಶಕದಲ್ಲಿ, ಹದಿಹರೆಯದ ವಿದ್ಯಾರ್ಥಿಯಾಗಿ. ಅಂದು, ಈ ರಾಜ್ಯ ಎಂದಾದರೂ ಒಮ್ಮೆ ಕೋಮು ದಳ್ಳುರಿಯಲ್ಲಿ ಬೇಯಬಹುದು ಎಂದು ಕಲ್ಪಿಸಿಕೊಳ್ಳಲು ಆಗದಂತಹ ಸನ್ನಿವೇಶವಿತ್ತು. ಅಲ್ಲಿ ಆ ಮೊದಲು ಸಣ್ಣಪುಟ್ಟ ಕೋಮುಘರ್ಷಣೆಗಳಾಗಿದ್ದುದು ಹೌದು; ಜನ ಅವುಗಳನ್ನು ನೆನಪಿಸಿಕೊಳ್ಳುತ್ತಿದ್ದುದೂ ಹೌದು. ಆದರೆ ಅವು ಮುಂದೆ ಹೀಗೆ ಭೀಕರ ದಾವಾಗ್ನಿಯ ರೂಪು ತಳೆಯಬಹುದೆನ್ನುವುದು ಯಾರ ಕಲ್ಪನೆಗೂ ಹೊಳೆಯದ ಮಾತಾಗಿತ್ತು. ನಾನು ಗಮನಿಸಿದಂತೆ, ಅಹಮದಾಬಾದಿನ ಹಲವು ಹಿಂದುಗಳು ಮುಸ್ಲಿಮರ ಬಗ್ಗೆ ಸಂಶಯ ಹಾಗೂ ಭಯಗಳನ್ನಿಟ್ಟುಕೊಂಡಿದ್ದರಾದರೂ ಅವು ಬಹುಪಾಲು ಗುಜರಾತಿಯಲ್ಲದ ಮುಸ್ಲಿಮರ ಅಹಮದಾಬಾದಿನ ಬೃಹತ್ ಜವಳಿ ಉದ್ಯಮದಲ್ಲಿ ಕಾರ್ಮಿಕರಾಗಿ ಬಂದು ಸೇರಿಕೊಂಡಿದ್ದ ಮುಸ್ಲಿಮರ ಬಗ್ಗೆಯಾಗಿದ್ದವು. ಅದೇ ವ್ಯಾಪಾರಿ ವರ್ಗದ ಗುಜರಾತಿ ಮುಸ್ಲಿಮರನ್ನು ಈ ಹಿಂದುಗಳು ಗುಜರಾತಿನ ಪರಿಸರದ ಅವಿಭಾಜ್ಯವಾದ ಅಂಶವೆಂದೆ ಪರಿಗಣಿಸಿಕೊಂಡಿದ್ದರು. ಇವರಿಬ್ಬರ ನಡುವೆ ಸಾಮಾಜಿಕವಾಗಿ ಸ್ಪಷ್ಟವಾದೊಂದು ದೂರವಿದ್ದರೂ ಸಹಿತ ಅದು ಪ್ರಸ್ತಾಪಿಸಿದ ವರ್ಗದ ಮುಸ್ಲಿಮರ ವಿಷಯದಲ್ಲಾದಂತೆ ಸಂಶಯ ಭಯಗಳಿಗೆ ಎಡೆಮಾಡಿಕೊಟ್ಟಿರಲಿಲ್ಲ.

ಈಗ, ಹಿನ್ನೋಟದಲ್ಲೊಮ್ಮೆ ನೋಡಿದರೆ, ಅಂದಿನ ಅಹಮದಾಬಾದ್ ಕೊಚ್ಚಿನ್ ನಗರವನ್ನು ತುಂಬಾ ಹೋಲುತ್ತಿತ್ತು. ಧಾರ್ಮಿಕ ಹಾಗೂ ಜನಾಂಗೀಯ ಸಹಬಾಳ್ವೆಯ ಅತ್ಯುಜ್ವಲ ಪ್ರತೀಕವಾಗಿರುವ ಕೇರಳದ ಆ ಪುರಾತನ ಪಟ್ಟಣವನ್ನು ತುಂಬ ನೆನಪಿಸಿಕೊಡುವಂತಿತ್ತು. ಪ್ರಾಯಶಃ ಅವೆರಡರ ನಡುವಿದ್ದ ಒಂದೇ ಒಂದು ವ್ಯತ್ಯಾಸವೆಂದರೆ, ಜೈನ್-ಬನಿಯಾ ಮನೋಧರ್ಮ ಪ್ರಾಬಲ್ಯದ ಅಹಮದಾಬಾದಿನಲ್ಲಿ ಮುಸ್ಲಿಮರ ಬಗ್ಗೆ ಅವರು ತಾಮಸ ತತ್ವದ ಪ್ರತಿನಿಧಿಗಳು ಎಂಬ, ತುಸು ಅಸಹಜವೆ ಆದ, ಅಸಹಿಷ್ಣುತೆಯ ಭಾವನೆಯಿತ್ತು. ಇನ್ನೊಂದೆಡೆ, ಆ ನಗರದಲ್ಲಿ ಆಗಷ್ಟೆ ಸ್ಥಾಪನೆಯಾಗುತ್ತಿದ್ದ ಆಧುನಿಕ ಸಂಸ್ಥೆಗಳಲ್ಲಿ ಹೊರರಾಜ್ಯಗಳಿಂದ ಬಂದು ಹೇರುತ್ತಿದ್ದ ಪಶ್ಚಿಮೀಕೃತ ಅನ್ಯರ ಬಗ್ಗೆಯೂ ಅಂಥದೇ ಅಸಹಿಷ್ಣುತೆಯ ಭಾವನೆಯೊಂದು ಬೆಳೆಯುತ್ತಿದ್ದು, ಅದು ಮೊದಲನೆಯದರ ತೀಕ್ಷ್ಣತೆಯನ್ನು ತುಸು ಮುಕ್ಕಾಗಿಸಿಟ್ಟಿತ್ತು. ಸಾಂಪ್ರದಾಯಿಕ ಅಹಮದಾಬಾದ್ ಹೀಗೆ ಮೇಲ್ಕಂಡ ಎರಡೂ ವರ್ಗಗಳನ್ನು ಒಂದೇ ದೂರದಲ್ಲಿಟ್ಟಿತ್ತು.

ಆದರೆ, 1969ರ ಕೋಮುಗಲಭೆ ಈ ನಗರ ಪರಿಸರವನ್ನು ಮೂಲಭೂತವಾಗಿ ಬದಲಿಸಿತು; ಆಗ ಮಸುಕು ಮಸುಕಾಗಿದ್ದ ಈ ಬದಲಾವಣೆಗಳು ಈಗ ಸ್ಫುಟವಾಗಿ ಗೋಚರಿಸತೊಡಗಿವೆ. ದಕ್ಷಿಣ ಏಷಿಯಾದ ಎಲ್ಲ ಗಲಭೆಗಳಂತೆಯೆ ಈ ಗಲಭೆಯೂ ಸಹ ವ್ಯವಸ್ಥಿತವಾಗಿ ಸೃಷ್ಟಿಯಾದುದಾಗಿತ್ತು; ರಾಷ್ಟ್ರೀಯ ಸ್ವಯಂ ಸೇವಕ ಸಂಘ ಅದನ್ನು ಅಸಾಧಾರಣ ಸಂಘಟನಾ ಸಾಮರ್ಥ್ಯದೊಂದಿಗೆ ನಡೆಸಿತು. ಈ ಹಿಂಸೆ ಹಾಗೂ ಆರ್.ಎಸ್.ಎಸ್ ಮತ್ತು ವಿಶ್ವ ಹಿಂದೂ ಪರಿಷತ್ ಯೋಜಿಸಿದ ದ್ವೇಷಾಂದೋಲನಗಳು ದೊಡ್ಡ ದೊಡ್ಡ ಲಾಭಗಳನ್ನು ತಂದಿತ್ತವು. ಅವುಗಳಿಂದಾಗಿ, ಮುಸ್ಲಿಮರು ಮಿಶ್ರಜನ ವಸತಿ ಪ್ರದೇಶಗಳನ್ನು ತೊರೆದು ಏಕಜನಾಂಗವಸತಿ ವಲಯಗಳನ್ನು ಕಟ್ಟಿಕೊಳ್ಳುವಂತೆ ಆಯಿತು; ಎರಡೂ ಕೋಮುಗಳಲ್ಲಿ ಮಾಫಿಯಾ ಶಕ್ತಿಗಳು ಬೆಳೆದು ಪ್ರಬಲಗೊಳ್ಳುವಂತಾಯಿತು; ಈ ಹಿಂಸ್ರಕ ತಂಡಗಳು ಸದಾಕಾಲ ಹಿಂದು-ಮುಸ್ಲಿಮರ ನಡುವೆ ಗಲಭೆಗಳನ್ನೆಬ್ಬಿಸುತ್ತಾ, ಆ ಗಲಭೆಗಳ ಹೊತ್ತಿನಲ್ಲಿ ತಾವು ಹಿಂದೂಗಳ ರಕ್ಷಕರೆಂದೊ

ಮುಸ್ಲಿಮರ ರಕ್ಷಕರೆಂದೊ ವೇಷಹೊತ್ತು ಮೆರೆದಾಡುವಂತಾಯಿತು.

ಆದರೆ, ನಿರುದ್ಯೋಗಿ ಮುಸ್ಲಿಮ ಯುವಕರಲ್ಲಿ ಇಂಥ ಅಪರಾಧಿ ವರ್ಗದ ಬೆಳವಣಿಗೆ ಬೇರೆ ಕೋಮುಗಳಲ್ಲಿನ ಪ್ರಮಾಣಕ್ಕಿಂತ ಅತಿ ಹೆಚ್ಚಾಗಿತ್ತು. ಇದಕ್ಕೆ ಕಾರಣ ಇಲ್ಲದಿರಲಿಲ್ಲ. ಹಿಂದೂ-ಮುಸ್ಲಿಮ ಸಮುದಾಯಗಳ ನಡುವೆ ಮೊದಲೆ ಇದ್ದ ಸಾಮಾಜಿಕ ಅಂತರ ಆ ವೇಳೆಗಾಗಲೇ ಇನ್ನೊಂದು ಆಯಾಮವನ್ನು ಪಡೆದುಕೊಳ್ಳಲಾರಂಭಿಸಿತು. ವೃತ್ತಿ ಹಾಗೂ ವಸತಿಗಳ ವಿಷಯದಲ್ಲಿ ಭೇದಭಾವಕ್ಕೀಡಾಗಿದ್ದ ಮುಸ್ಲಿಮ ನಿರುದ್ಯೋಗಿಗಳಲ್ಲಿ ಹಲವು ಯುವಕರು ಈಗ, ಜಗತ್ತಿನ ಯಾವುದೆ ಕೊಳೆಗೇರಿಗಳ ಯುವಕರಂತೆ, ಕಳ್ಳಭಟ್ಟಿ ತಯಾರಿಕೆ, ಮಾದಕದ್ರವ್ಯ ಮಾರಾಟ, ಹಫ್ತಾ ವಸೂಲಿ ಹಾಗೂ ಚಿಲ್ಲರೆ ಕಳ್ಳತನ, ಸುಲಿಗೆಗಳಂತಹ ಚಟುವಟಿಕೆಗಳಲ್ಲಿ ವಿಶೇಷವಾಗಿ ತೊಡಗಿಕೊಂಡರು. ಇಂಥವರು ಸಹಜವಾಗಿಯೆ ಬೀದಿಕಾಳಗಗಳನ್ನು ಸ್ವಾಗತಿಸುವಂಥವರಾಗಿದ್ದರು. ಈ ಮಧ್ಯೆ ಅಹಮದಾಬಾದಿನ ಪ್ರಖ್ಯಾತ ಜವಳಿ ಉದ್ದಿಮೆ ಕುಸಿದು ಬಿದ್ದದ್ದು ನಗರದ ರಾಜಕೀಯ ಸಂಸ್ಕೃತಿ ಕೂಡ ಆ ಔದ್ಯಮಿಕ ಕುಸಿತದಿಂದ ಬೇರಾರಿಗಿಂತಲೂ ಮುಸ್ಲಿಮರೆ ಹೆಚ್ಚು ಸಂಕಷ್ಟಕ್ಕೊಳಗಾಗುವಂತಹ ಸನ್ನಿವೇಶಕ್ಕೆ ಕಾರಣವಾಯಿತು.

(ಇತ್ತೀಚಿನ ಗಲಭೆಗಳಿಗೆ ಕಾರಣವಾದ ಗೋಧ್ರಾ ದುರ್ಘಟನೆ ಭಾಗಶಃ ಮೇಲೆ ವಿವರಿಸಿದ ಪ್ರಕ್ರಿಯೆಯದೆ ಒಂದು ಅಂಗವಾಗಿದೆ. ಅದು, ಸಂಘ ಪರಿವಾರದವರು ವಾದಿಸುವಂತೆ, ಐಎಸ್‌ಐನ ಸಂಚೆಂದೇನೂ ಅನಿಸುವುದಿಲ್ಲ. ಹಾಗೆಯೆ, ರಾಜಕೀಯ ಸೂಕ್ತತೆಯನ್ನೆ ನೆಚ್ಚಿಕೊಳ್ಳುವ ಸೆಕ್ಯುಲರ್ ವಾದಿಗಳು ಕೆಲವರು ಹೇಳುತ್ತಿರುವಂತೆ ಅದು ಕರಸೇವಕರ ಅವಹೇಳನಕ್ಕೆ ಪ್ರತಿಯಾಗಿ ಮುಸ್ಲಿಮರು ಕೈಗೊಂಡ ಸೇಡಿನ ಕ್ರಿಯೆಯೆಂದೂ ಅನಿಸುವುದಿಲ್ಲ. ಇನ್ನು ಕೆಲವರು ಗೋಧ್ರಾದಲ್ಲಿ ನಡೆದದ್ದು ಅಷ್ಟೇನೂ ಮುಖ್ಯವಾದ ಘಟನೆಯೆ ಅಲ್ಲವೆಂದೂ ಬಾಲಿಶವಾಗಿ ವಾದಿಸುತ್ತಿದ್ದಾರೆ; ಈ ವಾದದ ಬಗ್ಗೆ ಸದ್ಯಕ್ಕೆ ನಾನು ಏನನ್ನೂ ಹೇಳಬಯಸುವುದಿಲ್ಲ. ಆದರೆ ಒಂದಂತೂ ದಿಟ; ಗೋಧ್ರಾ ಹತ್ಯಾಕಾಂಡ ಈಚಿನ ಬಹಳಷ್ಟು ಕೋಮು ಗಲಭೆಗಳ ಮೂಲ ಸ್ವರೂಪದ ಒಂದು ಸೂಚಿಯೆಂಬಂತಿದೆ-ಮೊದಲು ಯಾರೊ ಒಬ್ಬರು ಇನ್ನೊಬ್ಬರನ್ನು ಉದ್ದೇಶಪೂರ್ವಕವಾಗಿ ಕೆಣಕುತ್ತಾರೆ. ಅದನ್ನು ವಿರೋಧಿಸಿ ಏಕಕೋಮು ವಸತಿ ಪ್ರದೇಶಗಳು ಹಾಗೂ ಕೊಳೆಗೇರಿಗಳ ಹತಾಶ ಮತಿಭ್ರಷ್ಟ ಯುವಕರು ಪ್ರತಿದಾಳಿ ನಡೆಸುತ್ತಾರೆ, ಇದನ್ನೆ ಕಾಯುತ್ತಿದ್ದಂತೆ ಇನ್ನೊಂದು ಕಡೆಯವರು ವ್ಯವಸ್ಥಿತವಾದ ದೊಡ್ಡ ಪ್ರಮಾಣದ ದೊಂಬಿಗಳನ್ನು ಆರಂಭಿಸುತ್ತಾರೆ. ಹಿಂಸೆಯ ಸರಣಿ ಹೀಗೆಯೆ ಮುಂದುವರೆಯುತ್ತದೆ).

ಗುಜರಾತಿನಲ್ಲಿ 1969ರ ಕೋಮುಗಲಭೆ ಬಿತ್ತಿದ ವಿಷಬೀಜ ಉದ್ದಕ್ಕೂ ರಕ್ಕಸ ಫಲಗಳನ್ನು ನೀಡುತ್ತಾ ಬಂದಿದೆ. ಅದು ಪ್ರತಿ ವರ್ಷ ನೀಡುವ ಹೊಸ ಫಸಲಿನಲ್ಲಿ

ಕಳೆದು ಹತ್ತು ದಿನಗಳ ಕಾಲ ನರಮೇಧ ಹಾಗೂ ಭೀತಿಗಳಿಂದ ಕಲಕಿಹೋದ ಗುಜರಾತನ್ನು ಕಂಡು ನನ್ನ ಮನ ಭೀಭತ್ಸಭಾವದಲ್ಲಿ ಅದ್ದಿಹೋಗಿದೆ... ಅಹಮದಾಬಾದಿನಲ್ಲಿ ಸುಮಾರು 52,000 ಗಂಡಸರು, ಹೆಂಗಸರು ಮತ್ತು ಮಕ್ಕಳು ಇಪ್ಪತ್ತೊಂಬತ್ತು ತಾತ್ಕಾಲಿಕ ಪರಿಹಾರ ಕೇಂದ್ರಗಳಲ್ಲಿ ಮೈಮುದುಡಿ ಜೀವ ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದಾರೆ. ಅವರ ಆ ಮಾತುಗಳು ನಾರುವ ಗಾಯಗಳಿಂದ ಸೋರುವ ಕೀವಿನ ರಾಶಿಯಂತೆ ಭಾಸವಾಗುತ್ತವೆ. ಅವರು ವಿವರಿಸುವ ಹಿಂಸಾಕೃತ್ಯಗಳು ಎಷ್ಟು ಭೀಕರವಾದುವೆಂದರೆ ಅವುಗಳನ್ನು ಇಲ್ಲಿ ನಮೂದಿಸುವಲ್ಲಿ ನನ್ನ ಲೇಖನಿ ನಿತ್ರಾಣಗೊಂಡು ನಡುಗುತ್ತದೆ... ಶಸ್ತ್ರಸಜ್ಜಿತ ಸುಸಂಘಟಿತ ಯುವ ಪುಂಡರ ಗುಂಪುಗಳು ಇಲ್ಲಿ ಅಸಹಾಯಕ ಹೆಂಗಸರು ಹಾಗೂ ಮಕ್ಕಳ ಮೇಲೆ ನಿರ್ದಯವಾಗಿ ಅತ್ಯಾಚಾರಗಳನ್ನು ನಡೆಸಿವೆ. ಕಳೆದ ಒಂದು ಶತಮಾನದಲ್ಲಿ ನಮ್ಮ ದೇಶ ಅನೇಕ ಕಳಂಕಪ್ರಾಯ ಕೋಮುಗಲಭೆಗಳನ್ನು ಕಂಡಿದೆ. ಆದರೆ ಈ ಗಲಭೆಗಳ ಅನಾಗರೀಕತೆ ಇನ್ನೆಲ್ಲವುಗಳನ್ನು ಅಣಕಿಸುವಂತಿದೆ...

ಭೀಕರ ಕೋಮು ಘರ್ಷಣೆಗಳು ಮತ್ತು ದೊಂಬಿ ಹಿಂಸೆಗಳು ಸೇರಿರಲೇಬೇಕು. ಅದರ ಪೂರ್ಣಾಕಾರದ ಫಲವೊಂದು ಕಂಡುಬಂದದ್ದು ರಾಮ ಜನ್ಮಭೂಮಿ ಚಳುವಳಿಯ ದಿನಗಳಲ್ಲಿ. ಅದರ ಮಹಾಸಾರಥಿ ಲಾಲ್ ಕೃಷ್ಣ ಅದ್ವಾನಿ ಗುಜರಾತಿನಲ್ಲಿ ಇಟ್ಟ ಪ್ರತಿ ಹೆಜ್ಜೆಯ ಹಿಂದೆ ಹಿಂದೆಯೆ ಹಿಂಸಾಸರಣಿಯೊಂದು ರೂಪುಗೊಂಡಿತು. ಆ ಮೊದಲನ ಗಲಭೆಗಳಲ್ಲಿ ಪುರುಷರಷ್ಟೆ ಭಾಗಿಗಳೂ ಬಲಿಗಳೂ ಆಗಿದ್ದರೆ, ಈ ಹಿಂಸಾಕಾಂಡದಲ್ಲಿ ಮೊತ್ತ ಮೊದಲ ಬಾರಿಗೆ ಮಹಿಳೆಯರು ಹಾಗೂ ಮಕ್ಕಳನ್ನು ಪೂರ್ವೋದ್ದೇಶಿತ ಹಾಗೂ ನ್ಯಾಯಬದ್ಧ ಗುರಿಗಳಾಗಿ ಬಳಸಿಕೊಳ್ಳಲಾಯಿತು. ಇಲ್ಲಿಂದ ಮುಂದೆ ಗಲಭೆಗಳು ಹೆಚ್ಚು ಹೆಚ್ಚು ಬರ್ಬರವಾಗತೊಡಗಿದವು.

ಗುಜರಾತ್ ಕಳೆದ ಒಂದು ದಶಕದಲ್ಲಿ ಈ ಪರಂಪರೆಯನ್ನು ಪರಿಪಾಲಿಸಿಕೊಂಡು ಬಂದಿದೆ. ಪ್ರಸಕ್ತ ಗಲಭೆಗಳಲ್ಲಿ ಹೆಂಗಸರು ಹಾಗೂ ಮಕ್ಕಳ ಮೇಲೆ ದಾಳಿ ನಡೆಸಲಾಗಿದೆ ಮಾತ್ರವಲ್ಲ ಬಹಳಷ್ಟು ಕಡೆ ಅವರನ್ನು ಕಲ್ಪನೆಗೂ ನಿಲುಕದಂತಹ ನಿರ್ದಯ ಹಿಂಸಾಸುಖಿ ರೀತಿಯಲ್ಲಿ ಕೊಲ್ಲಲಾಗಿದೆ. ಗಲಭೆಗಳನ್ನು ಪ್ರಚೋದಿಸಿದ ಗೋಧ್ರಾ ಹತ್ಯಾಕಾಂಡದಲ್ಲೂ ಸಹ ಬಲಿಯಾದವರಲ್ಲಿ ಹೆಂಗಸರು ಮತ್ತು ಮಕ್ಕಳೆ ಹೆಚ್ಚಾಗಿದ್ದರು.

ಈಚಿನ ಗಲಭೆಗಳನ್ನು ಪ್ರತ್ಯಕ್ಷ ಕಂಡವರಲ್ಲಿ ಐಎಸ್‌ಐ ಅಧಿಕಾರಿ ಹರ್ಷಮಂದರ್ ಒಬ್ಬರು; ಆ ಘಟನೆಗಳ ಕುರಿತು ಅವರು ಬರೆದ ವರದಿಯೊಂದರ ಕೆಲವು ಭಾಗಗಳು ಹೀಗೆ ಹೇಳುತ್ತವೆ:

ಕಳೆದ ಹತ್ತು ದಿನಗಳ ಕಾಲ ನರಮೇಧ ಹಾಗೂ ಭೀತಿಗಳಿಂದ ಕಲಕಿಹೋದ ಗುಜರಾತನ್ನು ಕಂಡು ನನ್ನ ಮನ ಬೀಭತ್ಸಭಾವದಲ್ಲಿ ಅದ್ದಿಹೋಗಿದೆ. ಅಹಮದಾಬಾದಿನಲ್ಲಿ ಸುಮಾರು 52,000 ಗಂಡಸರು, ಹೆಂಗಸರು ಮತ್ತು ಮಕ್ಕಳು ಇಪ್ಪತ್ತೊಂಬತ್ತು ತಾತ್ಕಾಲಿಕ ಪರಿಹಾರ ಕೇಂದ್ರಗಳಲ್ಲಿ ಮೈಮುದುಡಿ ಜೀವ ಕೈಯಲ್ಲಿ ಹಿಡಿದುಕೊಂಡು ಕುಳಿತಿದ್ದಾರೆ. ಅಪರಿಚಿತರ ಎದುರು ಅವರು ತಮ್ಮ ನೋವನ್ನು ಬಹಿರಂಗವಾಗಿ ಪ್ರಕಟಿಸುವುದಿಲ್ಲ. ಆದರೆ ನಾವು ಅವರೊಡನೆ ಕುಳಿತು ಒಂದೆರಡು ಮಾತನಾಡಿದ ಮೇಲೆ ಅವರು ಬಾಯಿ ತೆಗೆಯುತ್ತಾರೆ, ತಮ್ಮ ದುಃಖ ತೋಡಿಕೊಳ್ಳುತ್ತಾರೆ. ಅವರ ಆ ಮಾತುಗಳು ನಾರುವ ಗಾಯಗಳಿಂದ ಸೋರುವ ಕೀವಿನ ರಾಶಿಯಂತೆ ಭಾಸವಾಗುತ್ತದೆ. ಅವರು ವಿವರಿಸುವ ಹಿಂಸಾಕೃತ್ಯಗಳು ಎಷ್ಟು ಭೀಕರವಾದುವೆಂದರೆ ಅವುಗಳನ್ನು ಇಲ್ಲಿ ನಮೂದಿಸುವಲ್ಲಿ ನನ್ನ ಲೇಖನಿ ನಿತ್ರಾಣಗೊಂಡು ನಡುಗುತ್ತದೆ...ಶಸ್ತ್ರಸಜ್ಜಿತ ಸುಸಂಘಟಿತ ಯುವ ಪುಂಡರ ಗುಂಪುಗಳು ಇಲ್ಲಿ ಅಸಹಾಯಕ ಹೆಂಗಸರು ಹಾಗೂ ಮಕ್ಕಳ ಮೇಲೆ ನಿರ್ದಯವಾಗಿ ಅತ್ಯಾಚಾರಗಳನ್ನು ನಡೆಸಿವೆ. ಕಳೆದ ಒಂದು ಶತಮಾನದಲ್ಲಿ ನಮ್ಮ ದೇಶ ಅನೇಕ ಕಳಂಕಪ್ರಾಯ ಕೋಮುಗಲಭೆಗಳನ್ನು ಕಂಡಿದೆ. ಆದರೆ ಈ ಗಲಭೆಗಳ ಅನಾಗರೀಕತೆ ಇನ್ನೆಲ್ಲವುಗಳನ್ನು ಅಣಕಿಸುವಂತಿದೆ...

ಒಂದು ಕಡೆ, ಗಲಭೆಕೋರರ ಕೈಗೆ ಸಿಕ್ಕಿದ ಎಂಟು ತಿಂಗಳ ಗರ್ಭಿಣಿಯೊಬ್ಬಳು ತನ್ನನ್ನು ಉಳಿಸುವಂತೆ ಅವರನ್ನು ಅಂಗಲಾಚಿದಳು. ಅವರೊ, ಆಕೆಯ ಹೊಟ್ಟೆಯನ್ನು ಬಗೆದು, ಭ್ರೂಣವನ್ನು ಹೊರಗೆಳೆದು ಆಕೆಯ ಎದುರೆ ಅದನ್ನು ಕೊಚ್ಚಿಹಾಕಿದರು. ಇನ್ನೊಂದು ಕಡೆ, ಹತ್ತೊಂಬತ್ತು ಸದಸ್ಯರ ತುಂಬು ಕುಟುಂಬವೊಂದನ್ನು ಸುತ್ತುವರೆದ ದುಷ್ಕರ್ಮಿಗಳು ಅವರ ಮನೆಯ ತುಂಬ ನೀರು ನುಗ್ಗಿಸಿದರು; ನಂತರ ನೀರಿಗೆ ಗರಿಷ್ಠ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಹರಿಸಿ ಅವರಿಗೆ ಮರಣಾಘಾತ ನೀಡಿದರು. ಮತ್ತೊಂದೆಡೆ, ಜುಹಾಪುರ ನಿರಾಶ್ರಿತರ ಕೇಂದ್ರದಲ್ಲಿಯ ಆರು ವರ್ಷ ವಯಸ್ಸಿನ ಹುಡುಗನೊಬ್ಬ ಹೇಳಿಕೊಂಡಂತೆ, ಪುಂಡರು ಆತನ ತಾಯಿ ಹಾಗೂ ಆರು ಜನ ಸಹೋದರ-ಸಹೋದರಿಯರನ್ನು ಆತನ ಕಣ್ಣೆದುರೆ ಜಜ್ಜಿ ಕೊಂದರು;

ತಾಳಲಾಗದ ಆಘಾತದಿಂದ ಮೂರ್ಛೆಬಿದ್ದ ಅವನನ್ನು ಆ ಪಾತಕಿಗಳು ಸತ್ತನೆಂದೆ ಭ್ರಮಿಸಿದ್ದರಿಂದಷ್ಟೇ ಆತ ಉಳಿದುಕೊಂಡ. ಇನ್ನೊಂದು ಘಟನೆಯಲ್ಲಿ, ಅಹಮದಾಬಾದಿನ ಅತ್ಯಂತ ಗಲಭೆ ಪೀಡಿತ ವಸತಿ ಪ್ರದೇಶಗಳಲ್ಲೊಂದಾದ ನರೋದ-ಪತಿಯಾದಿಂದ ಪಾರಾಗಿ ತೆರಳುತ್ತಿದ್ದ ಕುಟುಂಬವೊಂದಕ್ಕೆ ಪೋಲೀಸ್ ಕಾನ್‌ಸ್ಟೇಬರಲ್ಲೊಬ್ಬ ಸುರಕ್ಷಿತ ದಾರಿಯನ್ನು ತೋರಿಸಿಕೊಟ್ಟ; ಅವರು ಅತ್ತ ನಡೆದರೆ ಅಲ್ಲಿ ಕಂಡದ್ದು ರಕ್ಷಣೆಯ ಬದಲು ಪುಂಡರ ಗುಂಪೊಂದಾಗಿತ್ತು; ಕುಟುಂಬದ ಹೆಂಗಸೊಬ್ಬಳು ಹಾಗೂ ಆಕೆಯ ಮೂರು ತಿಂಗಳ ಹಸುಗೂಸನ್ನು ಎಳೆದು ಬೇರ್ಪಡಿಸಿದ ಆ ಗುಂಪು ಇಬ್ಬರ ಮೇಲೂ ಸೀಮೆಎಣ್ಣೆ ಸುರಿದು ಅವರನ್ನು ಸುಟ್ಟುಹಾಕಿತು.

ಈ ಮೊದಲೆ ಲಿಂಗಾಧಾರಿತ ಶೋಷಣೆಗೆ ತುತ್ತಾಗಿರುವ ಸ್ತ್ರೀಯರನ್ನು ಕೋಮುವಾದಿ ಹಿಂಸೆಯ ಗುರಿಗಳನ್ನಾಗಿ ಇಷ್ಟು ವ್ಯಾಪಕವಾಗಿಯೂ ಹೃದಯ ವೇಧಕವಾಗಿಯೂ ಬಳಸಿಕೊಂಡ ಗಲಭೆಗಳ ಉದಾಹರಣೆ ಇನ್ನೊಂದಿಲ್ಲ. ಎಳೆಯ ಹುಡುಗಿಯರನ್ನು, ಬೆಳೆದ ಹೆಂಗಸರನ್ನು, ಎಷ್ಟೊ ಕಡೆ ಅವರ ಕುಟುಂಬದ ಸದಸ್ಯರ ಸಮ್ಮುಖದಲ್ಲಿಯೆ ಸಾಮೂಹಿಕ ಅತ್ಯಾಚಾರಕ್ಕೀಡುಮಾಡಲಾಯಿತು; ನಂತರ ಅವರನ್ನು ಜೀವಂತ ದಹಿಸಿಯೊ, ಬಡಿಗೆ-ಸುತ್ತಿಗೆಗಳಿಂದ ಜಜ್ಜಿಯೊ, ಅಥವಾ ಒಂದು ಪ್ರಕರಣದಲ್ಲಿಯಂತೆ ಸ್ಕ್ರೂ ಡ್ರೈವರ್‌ನಿಂದ ಇರಿದು ತಿವಿದು ಕೊನೆಗಾಣಿಸಲಾಯಿತು.

ಗುಜರಾತು ಮೋಹನದಾಸ ಕರಮಚಂದ ಗಾಂಧಿಯನ್ನು ಬಹಳ ಹಿಂದೆಯೆ ತೊರೆದಾಗಿದೆ; ಆ ರಾಜ್ಯದ ರಾಜಕೀಯ ಆತ್ಮದಲ್ಲಿ ಗಾಂಧಿ ಹಂತಕರ ಪ್ರೇತ ಹೊಕ್ಕಾಗಿದೆ. ಈ ಬಾರಿ ಆ ದುರುಳರು ಗಾಂಧಿಯನ್ನು ಮತ್ತೊಮ್ಮೆ ಹತ್ಯೆಗೈದಿರುವುದಷ್ಟೆ ಅಲ್ಲ, ರಕ್ಕಸ ಖುಷಿಯ ಕೇಕೆ ಹಾಕುತ್ತಾ ಕೊಳಕು ನುಡಿಗಳನ್ನು ಕಿರುಲುತ್ತ ಆತನ ಶವದ ಮೇಲೆ ಕುಣಿದಾಡಿದ್ದಾರೆ. ಇದಕ್ಕೆ ಎದುರಾಗಿ, ರಾಜ್ಯದ ನಾಝಿವಾದಿ ಸರ್ಕಾರದ ವಿರುದ್ಧ ದಿಟ್ಟ ಸಾರ್ವಜನಿಕ ನಿಲುವೊಂದನ್ನು ತಳೆಯುವುದು ಬಿಟ್ಟು ಗಾಂಧಿವಾದಿಗಳು ನಿಷ್ಪ್ರಯೋಜಕ ಶಾಂತಿ ಮೆರವಣಿಗೆಗಳನ್ನು ಏರ್ಪಡಿಸಿದರು. ಇಂಥ ಸನ್ನಿವೇಶದಲ್ಲಿ, ನಗರದ ಸರ್ವಪ್ರಥಮ ಆಶ್ರಯಧಾಮವಾಗಬೇಕಿದ್ದ ಸಬರಮತಿ ಆಶ್ರಮ ತನ್ನ ಆಸ್ತಿ ಪಾಸ್ತಿ ರಕ್ಷಣೆಗೆಂದು ಬಾಗಿಲು ಹಾಕಿಕೊಂಡು ತಣ್ಣಗೆ ಕುಳಿತಿದ್ದು ಅಚ್ಚರಿಯ ಸಂಗತಿಯೇನಿಲ್ಲ.

ಗುಜರಾತಿನ ಮಧ್ಯಮ ವರ್ಗ ಮುಟ್ಟಿರುವ ಅಧೋಗತಿಗೆ ಆ ರಾಜ್ಯದ ಪ್ರಸಕ್ತ ಮುಖ್ಯಮಂತ್ರಿ ನರೇಂದ್ರ ಮೋದಿ ಅತಿ ನಿಚ್ಚಳ ನಿದರ್ಶನವಾಗಿದ್ದಾರೆ. ಅವರು ನಿರ್ಲಜ್ಜವಾಗಿ ಗಲಭೆಗಳನ್ನು ಯೋಜಿಸಿದರು ಮಾತ್ರವಲ್ಲ, ಅವುಗಳನ್ನು ಅತ್ಯಂತ ಅನಾಗರೀಕವಾಗಿ ಸಮರ್ಥಿಸಿದರು ಕೂಡ. ಹತ್ತು ವರ್ಷಗಳಿಗಿಂತಲೂ ಹಿಂದೆ ನಾನು ಹಾಗೂ ನನ್ನ ಸಹವರ್ತಿಯೊಬ್ಬ ಸೇರಿ ಮೋದಿಯವರನ್ನು ಸಂದರ್ಶಿಸಿದ್ದೆವು. ಆಗ ಅವರು

ಗುಜರಾತಿನಲ್ಲಿ 1969ರ ಕೋಮುಗಲಭೆ ಬಿತ್ತಿದ ವಿಷಬೀಜ ಉದ್ದಕ್ಕೂ ರಕ್ಕಸ ಫಲಗಳನ್ನು ನೀಡುತ್ತಾ ಬಂದಿದೆ. ಅದು ಪ್ರತಿ ವರ್ಷ ನೀಡುವ ಹೊಸ ಫಸಲಿನಲ್ಲಿ ಭೀಕರ ಕೋಮು ಘರ್ಷಣೆಗಳು ಮತ್ತು ದೊಂಬಿ ಹಿಂಸೆಗಳು ಸೇರಿರಲೇಬೇಕು. ಅದರ ಪೂರ್ಣಾಕಾರದ ಫಲವೊಂದು ಕಂಡುಬಂದದ್ದು ರಾಮ ಜನ್ಮಭೂಮಿ ಚಳುವಳಿಯ ದಿನಗಳಲ್ಲಿ, ಅದರ ಮಹಾಸಾರಥಿ ಲಾಲ್ ಕೃಷ್ಣ ಅದ್ವಾನಿ ಗುಜರಾತಿನಲ್ಲಿ ಇಟ್ಟ ಪ್ರತಿ ಹೆಜ್ಜೆಯ ಹಿಂದೆ ಹಿಂದೆಯೆ ಹಿಂಸಾಸರಣಿಯೊಂದು ರೂಪುಗೊಂಡಿತು. ಆ ಮೊದಲಿನ ಗಲಭೆಗಳಲ್ಲಿ ಪುರುಷರಷ್ಟೆ ಭಾಗಿಗಳೂ ಬಲಿಗಳೂ ಆಗಿದ್ದರೆ, ಈ ಹಿಂಸಾಕಾಂಡದಲ್ಲಿ ಮೊತ್ತ ಮೊದಲ ಬಾರಿಗೆ ಮಹಿಳೆಯರು ಹಾಗೂ ಮಕ್ಕಳನ್ನು ಪೂರ್ವೋದ್ದೇಶಿತ ಹಾಗೂ ನ್ಯಾಯಬದ್ಧ ಗುರಿಗಳಾಗಿ ಬಳಸಿಕೊಳ್ಳಲಾಯಿತು. ಇಲ್ಲಿಂದ ಮುಂದೆ ಗಲಭೆಗಳು ಹೆಚ್ಚು ಹೆಚ್ಚು ಬರ್ಬರವಾಗತೊಡಗಿದವು.

ಇನ್ನೂ ಅತಿ ಸಾಮಾನ್ಯ ಮಟ್ಟದ ಆರ್‌ಎಸ್‌ಎಸ್ ಪ್ರಚಾರಕನಾಗಿದ್ದು, ಬಿಜೆಪಿಲ್ಲೊಂದಿಷ್ಟು ಪ್ರಾಮುಖ್ಯ ಗಳಿಸಲು ಹೆಣಗಾಡುತ್ತಿದ್ದರು. ಆ ದೀರ್ಘ ಸಂದರ್ಶನ ಬೇರೆ ಬೇರೆ ಪ್ರಶ್ನೆಗಳನ್ನೂ, ಘಟ್ಟಗಳನ್ನೂ ದಾಟಿ ಬೆಳೆಯುತ್ತಿದ್ದಂತೆ ನನಗೆ ಒಂದು ಸಂಗತಿ ಸಂದೇಹಾತೀತವಾಗಿ ಕಾಣತೊಡಗಿತ್ತು; ಮೋದಿಯವರದ್ದು ಮನೋವಿಜ್ಞಾನ ಯಾವುದನ್ನು ಫ್ಯಾಸಿಸ್ಟ್ ಎಂದು ಪರಿಗಣಿಸುತ್ತದೆಯೊ ಅಂಥ ವ್ಯಕ್ತಿತ್ವವಾಗಿತ್ತು. ಫ್ಯಾಸಿಸ್ಟ್ ಪದವನ್ನು ನಾನು ಬೈಗುಳದ ಇಲ್ಲ ಟೀಕೆಯ ಮಾತಾಗಿ ಬಳಸುತ್ತಿದ್ದೇನೆಂದು ಯಾರೂ ತಿಳಿಯಬಾರದು. ನಾನು ಮನಃಶಾಸ್ತ್ರದ ವಿದ್ಯಾರ್ಥಿ; ನನಗೆ ಫ್ಯಾಸಿಸ್ಟ್ ಎನ್ನುವುದು, ಇತರ ಪರಿಭಾಷಾತ್ಮಕ ಪದಗಳಂತೆಯೆ, ನಿರ್ದಿಷ್ಟ ವ್ಯಕ್ತಿತ್ವ ವರ್ಗವೊಂದನ್ನು ನಿರ್ದೇಶಿಸುವ ಪದ, ಮನೋರೋಗಿಗಳ ಮಾದರಿಯೊಂದನ್ನು ಸೂಚಿಸುವ ಶಬ್ದ ಮಾತ್ರ. ಆ ಹಿಂಸಾರಾಧಕ ವ್ಯಕ್ತಿತ್ವ ಮಾದರಿಯ ಎಲ್ಲ ಗುಣ-ಲಕ್ಷಣಗಳೂ ಮಾನ್ಯ ಮೋದಿಯವರಲ್ಲಿ ಹೇರಳವಾಗಿ ತುಂಬಿಕೊಂಡಿದ್ದವು. ಅವರ ಆ ಸಂದರ್ಶನ ನನ್ನನ್ನು ಆಮೂಲಾಗ್ರವಾಗಿ ಅಲ್ಲಾಡಿಬಿಟ್ಟಿತು. ಭೇಟಿ ಪೂರೈಸಿ ಹೊರಬರುತ್ತಿದ್ದಂತೆ ತೋಡಿಕೊಂಡಿದ್ದೆ; ನಾವು ಮಾತನಾಡಿಸಿದ ವ್ಯಕ್ತಿ ಮನೋವಿಜ್ಞಾನ ನಿರ್ವಹಿಸುವಂತಹ ಫ್ಯಾಸಿಸ್ಟ್ ವ್ಯಕ್ತಿತ್ವದ ಸರ್ವ ವಿವರ ಪೂರ್ಣ ಪ್ರತ್ಯಕ್ಷ ನಿದರ್ಶನದಂತೆಯೂ ಮುಂದಿನ ದಿನಗಳಲ್ಲಿ ಕೊಲೆ ಗಡುಕನಾಗಿ, ಅದರಲ್ಲೂ ಕೊಲೆಗಡುಕನಾಗಿ ಬೆಳೆಯುವಂತೆಯೂ ಕಂಡನೆಂದು ಹೇಳಿಕೊಂಡಿದ್ದೆ.

ಇಂತಹ ವ್ಯಕ್ತಿಯೊಬ್ಬ ಗುಜರಾತ್ ರಾಜ್ಯದ ಮುಖ್ಯಮಂತ್ರಿಯ ಪಟ್ಟಕ್ಕೇರಿರುವುದು ಆತನ ಕಥೆಯನ್ನಷ್ಟೆ ಅಲ್ಲ, ನಮ್ಮ ದೇಶದ ಪ್ರಜಾಪ್ರಭುತ್ವ ಹಾಗೂ ರಾಜಕಾರಣ ಕಳೆದ ಐವತ್ತು ವರ್ಷಗಳಲ್ಲಿ ಅನುಸರಿಸಿಕೊಂಡು ಬಂದ ಹಾದಿಯ ಕಥೆಯನ್ನೂ ಹೇಳುತ್ತದೆ. ಇಷ್ಟಾದ ಮೇಲೆ, ದೇಶದ ಭವಿಷ್ಯತ್ತಿನ ಬಗ್ಗೆ, ನನಗಂತೂ ಭೀತಿ, ಆತಂಕಗಳ ಹೊರತು ಇನ್ನಾವ ಭಾವನೆಗಳು ಮೂಡುತ್ತಿಲ್ಲ. ಹಿಂದೊಮ್ಮೆ ಭೌಗೋಳಿಕವಾಗಿ ಇಬ್ಭಾಗಗೊಂಡು, ಈಗ ಸಂಘ ಪರಿವಾರದ ದುಸ್ಸಾಹಸಗಳಿಂದ ಮತ್ತೊಮ್ಮೆ, ಈ ಬಾರಿ ಮನಸುಗಳ ಸ್ತರದಲ್ಲಿ, ಛಿದ್ರಗೊಂಡ ಭಾರತ ಬರಲಿರುವ ಸವಾಲುಗಳನ್ನು ಹೇಗೆ ಎದುರುಸುವುದೊ ಗೊತ್ತಿಲ್ಲ. ●

ಅಂಬೇಡ್ಕರ್ ನುಡಿ

ಪೀಡಿತ ಪ್ರಜೆಗಳೇ! ದುರ್ಭರವಾದ ಜೀವನವನ್ನು ಪ್ರತಿಬಿಂಬಿಸುವ ನಿಮ್ಮ ಮುಖಗಳನ್ನು ನೋಡುತ್ತಿದ್ದರೆ, ವಿಷಾದಮಯವಾದ ನಿಮ್ಮ ಮಾತುಗಳನ್ನು ಕೇಳುತ್ತಿದ್ದರೆ ನನ್ನ ಎದೆ ಚೂರು ಚೂರಾಗುತ್ತಿದೆ. ಶತಮಾನಗಳ ನಿಮ್ಮ ದೈನ್ಯ ಸ್ಥಿತಿಗೆ ಕಣ್ಣೀರು ಸುರಿಸುತ್ತಾ ಬಂದಿರುವಿರೇ ಹೊರತು ನಿಮ್ಮ ನಿಸ್ಸಹಾಯಕತೆಗೆ, ದೌರ್ಭಾಗ್ಯಕ್ಕೆ ನಾಚಿಕೆ ಪಡುತ್ತಿಲ್ಲ. ನೀವು ಈ ವಿಧವಾಗಿ ಬದುಕುವುದಕ್ಕಿಂತ ಗರ್ಭದಲ್ಲಿಯೇ ಸತ್ತು ಹೋಗಿದ್ದರೆ!! ಬಡತನ, ದಾಸ್ಯ, ಅಮಾನುಷ ಜೀವನಗಳನ್ನು ಇನ್ನೂ ಏಕೆ ದ್ವಿಗುಣ ಮಾಡಿಕೊಳ್ಳುತ್ತಿರುವಿರಿ? ದುಃಖಪೂರಿತವಾದ, ನಿಕೃಷ್ಟವಾದ ನಿಮ್ಮ ಜೀವನ ಪ್ರಪಂಚಕ್ಕೆ ಭಾರವಲ್ಲವೇ? ನೀವು ನೂತನ ಜೀವನವನ್ನು ಅಪ್ಪಿಕೊಳ್ಳದಿದ್ದಲ್ಲಿ, ನಿಮ್ಮಲ್ಲಿ ನೀವೇ ಚೈತನ್ಯ ಸೃಷ್ಟಿಸಿಕೊಳ್ಳದಿದ್ದಲ್ಲಿ ಈ ಭೂಭಾರವನ್ನು ತಗ್ಗಿಸಿ, ತಾರ-ತಮ್ಯಗಳಿಲ್ಲದೆ ಎಲ್ಲರಿಗೂ ಅನ್ನ, ವಸತಿ, ಅರಿವೆ ಪಡೆಯುವ ಹಕ್ಕುಗಳಿಗಾಗಿ ಏಕೆ ಹೋರಾಡಬಾರದು? ಗೌರವಪೂರ್ವಕವಾದ ಜೀವನದಲ್ಲಿ ನಿಮಗೆ ನಂಬಿಕೆ ಇದ್ದಲ್ಲಿ ಸ್ವಂತಕಾಲುಗಳ ಮೇಲೆ ನಿಲ್ಲಿ.

ದಲಿತರ ತಲೆ ಮೇಲೆ ತೂಗುವ ಕತ್ತಿ

○ ಪ್ರೊ॥ ಬಿ. ಕೃಷ್ಣಪ್ಪ

'ತಲೆ ಮೇಲೆ ತೂಗುವ ಕತ್ತಿ ನೇತಾಡುತ್ತಿದೆ. ಕೆಳಗೆ ಹೊಲೆ ಮಾದಿಗರು ನಾ ಹೆಚ್ಚು, ತಾ ಹೆಚ್ಚು ಎಂದು ಕಿತ್ತಾಡುತ್ತಿದ್ದಾರೆ. ಜಾತಿ ನಾಶಮಾಡಬೇಕು ಎಂದು ಬಯಸುವ ನನ್ನಂಥವರಿಗೆ ಹೃದಯಾಘಾತ ತರುವ ಇಂಥ ಕ್ರೂರ ವಾಸ್ತವ ಹೇಗೆ ಬದಲಾದೀತು? ಅಸ್ಪೃಶ್ಯತೆ ಆಚರಿಸುವವರಿಗೆ ಅಸ್ಪೃಶ್ಯತೆ ವಿರುದ್ಧ ಮಾತನಾಡಲು ಯಾವ ನೈತಿಕ ಹಕ್ಕಿದೆ? ಅಸ್ಪೃಶ್ಯರ ಸಮಗ್ರ ಬಿಡುಗಡೆಗೆ ದಲಿತ ಸಂಘರ್ಷ ಸಮಿತಿಯೇ ಉಳಿದಿರುವ ಆಶೆ' ಪ್ರೊ॥ ಬಿ. ಕೃಷ್ಣಪ್ಪ ಅವರು ಹಲವು ವರ್ಷಗಳ ಹಿಂದೆ 'ಪಂಚಮ'ಕ್ಕಾಗಿ ಬರೆದ ಲೇಖನ ಇದು. ಇಂದು ಇದರ ಪ್ರಸ್ತುತತೆ ಹೆಚ್ಚಾಗಿರುವ ಕಾರಣ ಇಲ್ಲಿ ಪುನರ್ ಮುದ್ರಿಸುತ್ತಿದ್ದೇವೆ.

ಇತ್ತೀಚಿನ ಸಮೀಕ್ಷೆಯೊಂದು ಭಾರತದಲ್ಲಿ 4 ಸಾವಿರ ಜಾತಿಗಳು, 50 ಸಾವಿರ ಉಪಜಾತಿಗಳಿವೆ ಎಂದು ವರದಿ ಮಾಡಿದೆ. ಅಷ್ಟೇ ಅಲ್ಲ ಅಸ್ಪೃಶ್ಯರಲ್ಲೇ ಸಾವಿರ ಉಪ ಪಂಗಡಗಳಿವೆ ಎಂದು ತಿಳಿಸಿವೆ. ಜಾತಿ ನಾಶಮಾಡಬೇಕು ಎಂದು ಬಯಸುವ ನನ್ನಂಥವರಿಗೆ ಈ ವರದಿ ಹೃದಯಾಘಾತಕ್ಕಿಂತ ಬಲವಾಗಿದೆ. ಜಾತಿಯಿಂದ ಒಡೆದು ಛಿದ್ರವಾಗಿರುವ ಈ ದೇಶದಲ್ಲಿ ಭಾರತೀಯನೊಬ್ಬನನ್ನು ಇಡಿಯಾಗಿ ಚಿತ್ರಿಸಿಕೊಳ್ಳಲು ಇದುವರೆಗೂ ನನಗೆ ಸಾಧ್ಯವಾಗಿಲ್ಲ. ಭಾರತದ ಪ್ರಥಮ ಪ್ರಜೆ ರಾಷ್ಟ್ರಪತಿಯನ್ನೆ ನೋಡಿ. ಸರ್ಕಸ್ ಕಂಪನಿಯ ಬಫೂನನ ನೆನಪು ಬರುತ್ತದೆ. ಚಿತ್ರವಿಚಿತ್ರ ಉಡುಪನ್ನು ಧರಿಸಿದ ಬಫೂನ್, ಸರ್ಕಸ್ ನೋಡಲು ಬಂದ ಎಲ್ಲರನ್ನೂ ರಂಜಿಸುವಂತೆ, ನಮ್ಮ ರಾಷ್ಟ್ರಪತಿ ದೇವಸ್ಥಾನಕ್ಕೆ ಹೋದರೆ ಹಿಂದೂಗಳಂತೆ, ಚರ್ಚಿಗೆ ಸೋದರಿ ಕ್ರಿಶ್ಚಿಯನ್ನರಂತೆ, ಮಸೀದೆಗೆ ಹೋದರೆ ಮುಸ್ಲಿಮರಂತೆ, ಅವರವರ ಭಂಗಿಗಳಲ್ಲಿ ಮುಜುರೆ ಮಾಡುವ ರೀತಿ ಕ್ರೂರವೆನಿಸುತ್ತದೆ.

ಮೇಲು ಜಾತಿಯ ಕ್ರೌರ್ಯವನ್ನು ಕ್ಷಣಕಾಲ ಮರೆತು, ಕೆಳಜಾತಿಯ ಬಗ್ಗೆ ಯೋಚಿಸುವಾ. ಕೆಳ ಜಾತಿ ಅಸ್ಪೃಶ್ಯರಲ್ಲಿ ಎಂಥ ತಾರತಮ್ಯ ಇದೆ! ಹೊಲೆಯ-ಮಾದಿಗ, ಮೋಚಿ-ಚಮ್ಮಾರ, ಮಾಲ-ಮಾದಿಗ, ಮಾಂಗ್-ಮಹರ್ ಪರಸ್ಪರ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುವುದಿಲ್ಲ.

ಈಗೆ ಕೆಲವು ವರ್ಷಗಳ ಹಿಂದೆ ಚಿತ್ರದುರ್ಗ ಹಿರಿಯೂರು ತಾಲ್ಲೂಕಿನಲ್ಲಿ ಹೊಲೆ ಮಾದಿಗರಿಗೆ ಕುಡಿಯಲು ನೀರಿರಲಿಲ್ಲ. ಅರಸು ಸರ್ಕಾರದಲ್ಲಿ ಉಪ ಸಭಾಪತಿಯಾಗಿದ್ದ ಮಂಜುನಾಥ್, ಬಿ.ಡಿ.ಒ. ಅವರನ್ನು ಕರೆಸಿ ಕೇಳಲು, ಹರಿಜನರಿಗೆ ಪ್ರತ್ಯೇಕ ಬಾವಿ ತೋಡಿಸಲಾಯಿತು. ಆದರೆ ಬಾವಿಯಲ್ಲಿ ಮಾದಿಗರು ನೀರು ತುಂಬಿದರೆಂಬ ಕಾರಣಕ್ಕಾಗಿ ಯಾವ ಹೊಲೆಯರೂ ಬಾವಿ ನೀರು ಮುಟ್ಟಲಿಲ್ಲ. ತರುವಾಯ ಹೊಲೆಯರೆಲ್ಲ ಒಗ್ಗಟ್ಟಾಗಿ ಕೆ.ಎಚ್. ರಂಗನಾಥ್ ಹತ್ತಿರ ಹೋದರು. ರಂಗನಾಥ್ ಹೊಲೆಯರಿಗೆ ಪ್ರತ್ಯೇಕ ಬಾವಿ ತೋಡಿಸಿಕೊಟ್ಟರು.

ಹೋದ ವರ್ಷ ಗುಲ್ಬರ್ಗಾ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಿದ್ದ ನನಗೆ ಮತ್ತೊಂದು ವಿಚಿತ್ರ ಕಂಡು ಬಂತು. ಹೊಲೆಯರೆಲ್ಲ ಬೌದ್ಧಮತಕ್ಕೆ ಮತಾಂತರ ಆಗುತ್ತಿದ್ದರೆ, ಮಾದಿಗರೆಲ್ಲ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿ ಅಲ್ಲೂ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತಿದ್ದರು! ಅಂಬೇಡ್ಕರ್ ಹೊಲೆಯರ ನಾಯಕ, ಜಗಜೀವನ ರಾಂ ಮಾದಿಗರ ನಾಯಕ ಎಂಬ ಅಪಾಯಕಾರಿ ಪ್ರಚಾರಗಳಿಗೂ ಕಡಿಮೆ ಇಲ್ಲ. ಏನೂ ಅರಿಯದ ನಿರುಕ್ಷರಕುಕ್ಷಿ ಅಸ್ಪೃಶ್ಯರ ಮನಸ್ಸಿನಲ್ಲಿ ಇಂಥ ವಿಷ ಬೀಜಗಳನ್ನು ಅಸ್ಪೃಶ್ಯ ರಾಜಕಾರಣಿಗಳು, ನೌಕರ ವರ್ಗ ಬಿತ್ತುತ್ತಿದ್ದಾರೆ. ಅವರಿಗೆ ತಮ್ಮ ಹಿಂದೆ ಬಿದ್ದಿರುವ ಅಸಂಖ್ಯ ಅಸ್ಪೃಶ್ಯರ ಬಗ್ಗೆ ಕಳಕಳಿ ಇದ್ದಂತಿಲ್ಲ. ಬಸವಲಿಂಗಪ್ಪ ಮಂತ್ರಿಯಾದರೆ ಹೊಲೆಯರೆಲ್ಲ ಕೂಡಿ ಸನ್ಮಾನ ಸಮಾರಂಭ ಮಾಡುತ್ತಾರೆ. ಮಾದಿಗರೆಲ್ಲ ಎನ್. ರಾಚಯ್ಯ ಅವರಿಗೆ ಸನ್ಮಾನ ಮಾಡುತ್ತಾರೆ.

ಮಾದಿಗರು ಹೊಲೆಯ ಮಂತ್ರಿಯನ್ನು, ಹೊಲೆಯರು ಮಾದಿಗರ ಮಂತ್ರಿಯನ್ನು ಸನ್ಮಾನ ಮಾಡಿದ ಉದಾಹರಣೆಗಳು ಇದುವರೆಗೂ ಇಲ್ಲ. ಒಂದೊಂದು ಉಪ ಜಾತಿ ಹೆಸರಿನಲ್ಲಿ ಮಂತ್ರಿ ಪದವಿ ಗಿಟ್ಟಿಸಿಕೊಳ್ಳಲು ಕ್ಯೂ ನಿಂತಿರುವ ಈ ಜನಕ್ಕೆ ಅಸ್ಪೃಶ್ಯರು ಒಂದಾಗುವುದು ಬೇಕಿಲ್ಲ. ಇತ್ತೀಚೆಗೆ ಮಾಜಿ ಮಂತ್ರಿ ರೇಣುಕಾ ರಾಜೇಂದ್ರನ್ ಅಸ್ಪೃಶ್ಯರಲ್ಲಿ ಈ ಬಿರುಕನ್ನು ಬಹಿರಂಗವಾಗಿ ಸ್ಫೋಟಗೊಳಿಸಿದ್ದಾರೆ. ಹೊಲೆಯರು ಸಮಾಜ ಕಲ್ಯಾಣ ಮಂತ್ರಿ ವೆಂಕಟರಮಣ ಅವರಿಗೆ ಸನ್ಮಾನ ಏರ್ಪಡಿಸಿದ್ದರು. ಸಮಾರಂಭಕ್ಕೆ ಉಳಿದೆಲ್ಲ ಮಂತ್ರಿಗಳನ್ನು ಕರೆದಿದ್ದು, ವೈ. ರಾಮಕೃಷ್ಣ ಅವರನ್ನು ಮಾತ್ರ ಕರೆದಿರಲಿಲ್ಲ. ಕಾರಣ ಆತ ಮಾದಿಗ. ರೇಣುಕಾ ರಾಜೇಂದ್ರನ್ ಅವರನ್ನು ಕರೆದಿದ್ದು ಯಾಕೆ ಎಂದರೆ, ಆಕೆ ಮಾದಿಗರವಳಾದರೂ ಹೊಲೆಯರನನ್ನು ಮದುವೆಯಾಗಿದ್ದಾಳೆ! ಇದು ಹೊಲೆ ಮಾದಿಗರಲ್ಲಿ ಬಿಸಿ ವಾತಾವರಣ ಕೆದಕಿತು. ಇತ್ತೀಚೆಗೆ ಹೊಲೆ ಮಾದಿಗರು ಜಾತಿ ಸಂಘಟನೆಗಳನ್ನು ಕಟ್ಟಲು ದೊಡ್ಡ ಪೈಪೋಟಿ ನಡೆಸಿದ್ದಾರೆ. ಎಕ್ಸಿಕ್ಯೂಟಿವ್ ಇಂಜಿನಿಯರ್ ಶಿವಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಹೊಲೆಯರೆಲ್ಲ ಬ್ಯಾಂಕ್ ಮಾಡಲು ಹೊರಟಿದ್ದರೆ ಮಾಜಿ ಲೋಕಸೇವಾ ಆಯೋಗದ ಅಧ್ಯಕ್ಷ ಜಿ. ದುಗ್ಗಪ್ಪನವರ ಅಧ್ಯಕ್ಷತೆಯಲ್ಲಿ ಮಾದಿಗರೆಲ್ಲ ಆದಿ ಜಾಂಬವ ಫೈನಾನ್ಸ್ ಕಾರ್ಪೋರೇಷನ್ ಮಾಡಲು ನಿರ್ಧರಿಸಿರುವುದಾಗಿ ವದಂತಿಯಾಗಿದೆ.

ಅಸ್ಪೃಶ್ಯ ಸಮಾಜವನ್ನು ಇಡಿಯಾಗಿ ಕಲ್ಪಿಸಿಕೊಳ್ಳುವ, ಅವರ ಬಿಡುಗಡೆಗಾಗಿ ಹೋರಾಡುವ, ಪೂರ್ಣ ವ್ಯಕ್ತಿತ್ವ ಪಡೆದುಕೊಂಡು ಅಸ್ಪೃಶ್ಯ ರಾಜಕಾರಣಿಯೊಬ್ಬ ದುರ್ಬೀನು ಹಾಕಿ ಹುಡುಕಿದರೂ ಈ ದೇಶದಲ್ಲಿ ಸಿಕ್ಕುತ್ತಿಲ್ಲ. ಅಸ್ಪೃಶ್ಯತೆ ಆಚರಿಸುವ ಅಸ್ಪೃಶ್ಯರಿಗೆ, ಅಸ್ಪೃಶ್ಯತೆ ವಿರುದ್ಧ ಮಾತನಾಡುವ ಯಾವ ನೈತಿಕ ಹಕ್ಕಿದೆ? ಹೀಗೆಲ್ಲ ಚಿಂತಿಸುವ ನನಗೆ, ಅಸ್ಪೃಶ್ಯರ ಸಮಗ್ರ ಬಿಡುಗಡೆಗೆ ಉಳಿದಿರುವ ಏಕೈಕ ಆಶೆ ದಲಿತ ಸಂಘರ್ಷ ಸಮಿತಿ ಎನ್ನಿಸುತ್ತದೆ. ●

ಸಂಘ ಪರಿವಾರಕ್ಕೆ ದಲಿತ-ಆದಿವಾಸಿ Co- opt...

○ ದು. ಸರಸ್ವತಿ

> ಗುಜರಾತ್‌ನಲ್ಲಿ ನಡೆದ ಭೀಕರ ನರಮೇಧ ಇಡೀ ಜಗತ್ತನ್ನೆ ನಡುಗಿಸಿದೆ. ಮತಾಂಧ ಶಕ್ತಿಗಳ ದಬ್ಬಾಳಿಕೆಗೆ ಬಲಿಯಾಗುತ್ತಿದ್ದ ದಲಿತರು, ವಿಶೇಷವಾಗಿ ಆದಿವಾಸಿಗಳು ಈ ನರಮೇಧದಲ್ಲಿ ಭಾಗವಹಿಸಿದ್ದರು ಎಂಬುದು ಎಲ್ಲಾ ಮಾನವತಾವಾದಿಗಳನ್ನು ಚಿಂತೆಗೀಡು ಮಾಡಿದೆ. ಈ ಕುರಿತು ನಾಡಿನ ಚಿಂತಕರಿಂದ ಸಂವಾದ ಏರ್ಪಡಿಸಬೇಕೆಂಬುದು ಸ್ಫೂರ್ತಿ ಧಾಮದ ಹಂಬಲ. ಅದಕ್ಕಾಗಿ ಪ್ರಶ್ನಾವಳಿ ರಚಿಸಿ ಕೆಲವು ಚಿಂತಕರಿಗೆ ಕಳುಹಿಸಿಕೊಡಲಾಗಿತ್ತು. ಉತ್ತರ ಬಂದ ಎರಡು ಸಂವಾದಗಳನ್ನು ಇಲ್ಲಿ ಮುದ್ರಿಸುತ್ತಿದ್ದೇವೆ. ಮುಂದಿನ ಸಂಚಿಕೆಗಳಲ್ಲಿ ಉಳಿದವುಗಳನ್ನು ಪ್ರಕಟಿಸುತ್ತೇವೆ. ಓದುಗರೂ ಈ ಸಂವಾದದಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶಯ. —ಸಂಪಾದಕ

ಪ್ರಶ್ನೆಗಳು

(ಅ) ಗುಜರಾತ್ ಕೋಮು ಗಲಭೆಯಲ್ಲಿ ದಲಿತರು ಹಿಂಸಾಕಾಂಡದಲ್ಲಿ ಮುಂಚೂಣಿಯಲ್ಲಿದ್ದರು ಎನ್ನುವ ಬಗ್ಗೆ ತಾವು ಏನು ಹೇಳುತ್ತೀರಿ?

(ಆ) ಇಂಥ ಸ್ಥಿತಿ ನಿರ್ಮಾಣವಾಗಲು ಕಾರಣವಾದ ಅಂಶಗಳಾವುವು?

(ಇ) 80ರ ದಶಕದಲ್ಲಿ ನಡೆದ ಮೀಸಲಾತಿ ವಿರೋಧಿ ಗಲಭೆಯಲ್ಲಿ ಮತೀಯ ಹಿಂದೂಗಳಿಂದ ಧಾಳಿಗೆ ತುತ್ತಾದ ದಲಿತರು ಪ್ರಸ್ತುತ ಅದೇ ಮತೀಯ ಹಿಂದೂಗಳ ದಾಳವಾಗಿ ಬದಲಾಗಿರುವುದರ ಮರ್ಮವೇನು?

(ಋ) ದಲಿತರ ಜಾಗೃತಿ ಹಿಂದೂ ಮತೀಯವಾದಿಗಳ ಕುತಂತ್ರಕ್ಕೆ ಬಲಿಯಾಗಿದೆಯೆ?

(ಎ) ದಲಿತ ಚಳುವಳಿ-ರಾಜಕಾರಣ ಈ ಹೊತ್ತಿನಲ್ಲಿ ಏನು ಮಾಡಬೇಕು?

❑ ಗುಜರಾತ್ ಕೋಮು ಗಲಭೆಯಲ್ಲಿ ದಲಿತರು ಹಿಂಸಾಕಾಂಡದ ಮುಂಚೂಣಿಯಲ್ಲಿದ್ದರೆಂಬುದು ಅತ್ಯಂತ ನೋವಿನ, ಆಘಾತಕಾರಿ ವಿಷಯ. ಹಾಗೆಯೇ ಅವರು ಹಿಂಸಾಕಾಂಡದಲ್ಲಿ ಮಾತ್ರ ಮುಂಚೂಣಿಯಲ್ಲಿದ್ದರೆಂಬುದು ಅನೇಕ ವಿಷಯಗಳನ್ನು ತಿಳಿಸುತ್ತದೆ. ಇಡೀ ಗುಜರಾತ್‌ನ ನರಮೇಧ ಸರ್ಕಾರದಿಂದ ಪ್ರಾಯೋಜಿಸಲ್ಪಟ್ಟಿದ್ದು ಎಂಬುದು ಜಗತ್ತಿಗೆ ತಿಳಿದಿರುವ ಸತ್ಯ. ಅದರಲ್ಲಿ ಭಾಗಿಯಾದವರೆಲ್ಲರೂ (ಕಾರ್ಯಕರ್ತರು, ಅಧಿಕಾರಿಗಳು, ಮುಖ್ಯಮಂತ್ರಿಯೂ ಸೇರಿದಂತೆ) ಆರ್.ಎಸ್.ಎಸ್.ನಲ್ಲಿ ತರಬೇತಿಗೊಂಡವರು. ಎಷ್ಟೋ ದಿನಗಳಿಂದ ನರಮೇಧಕ್ಕೆ ಸಿದ್ಧತೆಗಳು ನಡೆಯುತ್ತಿತ್ತು. ರಸ್ತೆಗಳ ಹೆಸರು ಬದಲಾದವು, ಕಟ್ಟಡಗಳ ಬಣ್ಣ ಬದಲಾದವು, ಇಲಾಖೆಗಳ ಮುಖ್ಯಸ್ಥರುಗಳನ್ನು ಬದಲಾಯಿಸಿ ಆರ್.ಎಸ್.ಎಸ್.ನಲ್ಲಿ ತರಭೇತಿ ಹೊಂದಿದರವನ್ನು ಹಾಕಲಾಗಿತ್ತು. ಈ ಎಲ್ಲಾ ಯೋಜನೆಗಳಾದ ಮೇಲೆ ಊಟ, ಸರಾಯಿ ಪ್ಯಾಕೆಟ್ ಕೊಟ್ಟು ಕಲಿತರನ್ನು, ಆದಿವಾಸಿಗಳನ್ನು ಕೊಲೆ, ಸುಲಿಗೆ, ಅತ್ಯಾಚಾರಕ್ಕೆ ನೇಮಿಸಲಾಯಿತು. ಬಿ.ಜೆ.ಪಿ., ಆರ್.ಎಸ್.ಎಸ್., ವಿ.ಹೆಚ್.ಪಿ. ಮತ್ತು ಬಜರಂಗದಳಗಳು ಏನೇನು ಕೆಲಸ ನಿರ್ವಹಿಸುತ್ತವೆ ಹಾಗೂ ಯಾವ್ಯಾವುದರಲ್ಲಿ ದಲಿತರ ಸಂಖ್ಯೆ ಹೆಚ್ಚಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದಾಗ ದಲಿತರನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದು ಅರ್ಥವಾಗುತ್ತದೆ.

❑ ಇಂತಹ ಸ್ಥಿತಿ ನಿರ್ಮಾಣವಾಗಲು ಕಾರಣವಾದ ಅಂಶಗಳಿಗಿಂತ, ಇಂತಹ ಪರಿಸ್ಥಿತಿಯನ್ನು ನಿರ್ಮಿಸಲು ಪ್ರಜ್ಞಾಪೂರ್ವಕವಾದ ತಯಾರಿ ನಡೆಯುತ್ತಿತ್ತು ಎನ್ನುವುದು ಹೆಚ್ಚು ಸೂಕ್ತ. ಹಿಂದುತ್ವವಾದಿಗಳು ಎಲ್ಲಾ ಕಡೆ ದಲಿತರನ್ನು, ಆದಿವಾಸಿಗಳನ್ನು Co-opt ಮಾಡಿಕೊಳ್ಳುತ್ತಿದ್ದಾರೆ. ದೇಶದ ದಲಿತರು, ಆದಿವಾಸಿಗಳೂ ಸಹ ಹಿಂದೂಗಳೆಂಬ ಜ್ಞಾನೋದಯವಾಗಿ (ಬ್ರಾಹ್ಮಣರೆಂದಲ್ಲ!) ನಬ್ಬೆ ಕರೋಡ್ (90 ಕೋಟಿ) ಹಿಂದುಗಳೆಂದು ಚೀರಾಡುತ್ತಿದ್ದಾರೆ.

ಧರ್ಮ, ಸಂಸ್ಕೃತಿ, ಶಿಕ್ಷಣ, ರಾಜಕೀಯದ ಮೂಲಕ ಹಿಂದುತ್ವವನ್ನು ಪ್ರತಿಪಾದಿಸುತ್ತಿದ್ದಾರೆ. ಆದಿವಾಸಿಗಳನ್ನು ಹಿಂದೂಗಳಾಗಿ ಮತಾಂತರಗೊಳಿಸಲಾಗುತ್ತಿದೆ. ದಲಿತರ, ಆದಿವಾಸಿಗಳ, ದೇವರು, ಧರ್ಮ, ಸಂಸ್ಕೃತಿ, ಆಚರಣೆಗಳನ್ನು ಸದ್ದಿಲ್ಲದೆ ನಿರ್ನಾಮ ಮಾಡಿ ಹಿಂದುತ್ವದ ಹೊಸ ಐಡೆಂಟಿಟಿಯನ್ನು ಹೇರಲಾಗುತ್ತಿದೆ. ಅವರ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಂಡು ಆ ಪರಿಸ್ಥಿತಿಗೆ ಮುಸ್ಲಿಂ ಸಮುದಾಯ ಕಾರಣವೆಂಬಂತೆ ಮಾಡಿ ದ್ವೇಷದ ರಾಜಕಾರಣವನ್ನು ತುಂಬಲಾಗುತ್ತಿದೆ.

ಈ ಪ್ರಶ್ನೆಯನ್ನು ನಿರ್ದಿಷ್ಟವಾಗಿ ಗುಜರಾತಿನ ಹಿನ್ನೆಲೆಯಲ್ಲೇ ನೋಡಬೇಕು. ಗುಜರಾತಿನಲ್ಲಿ ಸಂಖ್ಯೆಯ ದೃಷ್ಟಿಯಿಂದ, ಹಣ, ಅಧಿಕಾರದ ದೃಷ್ಟಿಯಿಂದ ಬಲಿಷ್ಠರಾಗಿರುವವರು ಬನಿಯಾಗಳು ಹಾಗೂ ಅವರ ಅನಿವಾಸಿ ಭಾರತೀಯರ ಕನೆಕ್ಷನ್‌ಗಳು. ಅನೇಕ ಜಾಗತೀಕ ಕಾರಣಗಳಿಂದಾಗಿ ಅನಿವಾಸಿಗಳು ಹಿಂತಿರುಗಿ ಬರಬೇಕಾಗಿದೆ. ಈ ವ್ಯಾಪಾರಿ ಜನರು ಗುಜರಾತ್‌ಗೆ ಹಿಂತಿರುಗಿ ಬಂದ ಮೇಲೂ ವ್ಯಾಪಾರ ಮಾಡಲೇಬೇಕು. ಈಗಾಗಲೆ ವ್ಯಾಪಾರದಲ್ಲಿರುವ ಒಂದು ಸಮುದಾಯವನ್ನು ನಿರ್ನಾಮ ಮಾಡದೆ ತಮ್ಮ ನೆಲೆ ಸ್ಥಾಪಿಸಿಕೊಳ್ಳಲು ಹೇಗೆ ಸಾಧ್ಯ? ಆ ನೆಲೆ ಸ್ಥಾಪಿಸಿಕೊಳ್ಳಲು ಆರ್ಥಿಕವಾಗಿ ಸಾಮಾಜಿಕವಾಗಿ ದುರ್ಬಲವಾಗಿರುವ ದಲಿತರು, ಆದಿವಾಸಿಗಳ ಮನಸ್ಸಿನಲ್ಲಿ ನಿಮ್ಮ ಸ್ಥಿತಿಗೆ ಮುಸ್ಲಿಂ ವ್ಯಾಪಾರಿ ವರ್ಗ ಕಾರಣವೆಂಬ ದ್ವೇಷ ತುಂಬದೆ ನಿರ್ನಾಮ ಮಾಡಲು ಹೇಗೆ ಸಾಧ್ಯ?

ಗುಜರಾತಿನಲ್ಲಿರುವ ಧಾರ್ಮಿಕತೆಯಲ್ಲಿ ಪ್ರಬಲವಾಗಿರುವುದು ಕಟ್ಟಾ ವೈದಿಕ ಆಚರಣೆ ಅಲ್ಲ. ಧರ್ಮ ಕೆಲವೊಮ್ಮೆ ಜಗನ್ನಾಥ ರಥ ಯಾತ್ರೆ ಮೂಲಕ ತೋರಿಸುವ ಬಲ ಪ್ರದರ್ಶನವಾಗುತ್ತದೆ. ಕೆಲವೊಮ್ಮೆ ಎಲ್ಲರೂ ಆಹ್ವಾನಿತರು ಎಂಬ ಟಿ.ವಿ. ರಾಮಾಯಣದ ಪ್ರದರ್ಶನವೂ ಆಗುತ್ತದೆ. ದಲಿತರನ್ನು ದೇವಸ್ಥಾನಕ್ಕೆ

ದಾಸ ಬುದ್ಧಿ ದಲಿತರ ದೌರ್ಬಲ್ಯ

○ ಸತ್ಯವ್ರತ

❑ ಮನುಷ್ಯನ ದೌರ್ಬಲ್ಯಗಳಲ್ಲಿ ದಾಸ್ಯತನವೂ ಒಂದು. ಇದಕ್ಕೆ ದಲಿತರೇನೂ ಹೊರತಲ್ಲ. ಈ ದಾಸ ಬುದ್ಧಿಯಿಂದ ಬೇರೆಯವರ ಉಪಕರಣ ಸಾಧನವಾದರೆ ಆಗಬಹುದಾದ ಅನಾಹುತಗಳಿಗೆ ಗುಜರಾತಿನ ಘಟನೆ ಉದಾಹರಣೆಯಾಗಬಹುದು. ಈ ದಾಸ ಬುದ್ಧಿ ಮತ್ತು ಇತರರ ಸಾಧನವಾಗಬಹುದಾದ ಯಾರೇ ಆಗಲಿ (ದಲಿತರಾದಿಯಾಗಿ) ಇಂದು ಒಂದು ಧರ್ಮದ ಒಂದು ವರ್ಗದ ಅಸ್ತ್ರಗಳಾಗಿ ನಾಳೆ ಮತ್ತೊಬ್ಬರ ಅಸ್ತ್ರಗಳಾಗಿ ತಮಗಾಗದವರನ್ನು ಬಗ್ಗುಬಡಿಯುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈ ದಾಸಬುದ್ಧಿಯ (ದಲಿತರು) ಜನರು ತಮ್ಮ ಸ್ವಂತ ದೋಷಗಳನ್ನು ಸರಿಪಡಿಸಿಕೊಳ್ಳುವತ್ತ ಗಮನಹರಿಸಬೇಕು.

❑ ತಮ್ಮೆಲ್ಲಾ ತೊಂದರೆ-ತಾಪತ್ರಯಗಳಿಗೆ ದುಃಖ-ದುಮ್ಮಾನ ಮತ್ತು ಶೋಷಣೆಗಳಿಗೆ ಇತರರೇ ಕಾರಣರೆಂದು ನಿಂದಿಸುತ್ತಾ ಹೊರಗಿನ ಶತ್ರುವನ್ನು ಸೃಷ್ಟಿಸಿಕೊಳ್ಳುವ ಕೆಲಸ ನಿಲ್ಲಬೇಕು. ಹಾಗೆ ಇತರರನ್ನು ನಿಂದಿಸುತ್ತಾ ಹೋದರೆ ತಮ್ಮ ದೌರ್ಬಲ್ಯ ಮತ್ತು ದೋಷಗಳನ್ನು ಕಡೆಗಣಿಸದಂತಾಗುತ್ತದೆಯೆಲ್ಲದೆ ಆ ದೌರ್ಬಲ್ಯಗಳೇ Coverup ಆಗಿ ಮನುಷ್ಯನ ಕಣ್ಣು ಕುರುಡಾಗುತ್ತದೆ.

❑ ರಾಜ್ಯ ನಿರ್ದೇಶಿತ ಅಥವಾ ರಾಜ್ಯವು ಸ್ಥಾಪಿಸಲು ಹೊರಟಿರುವ ಸಮಾನತೆ ಸ್ಥಿರ/ಶಾಶ್ವತವಾಗಲಾರದು. ಈ ನಿಟ್ಟಿನಲ್ಲಿ ತರಲಾಗುತ್ತಿರುವ ಮೀಸಲಾತಿ ಈಗಾಗಲೇ ಬಲಕಳೆದುಕೊಂಡು ಅರ್ಥ ಕಳೆದುಕೊಳ್ಳುತ್ತಿರುವ ಮೀಸಲಾತಿಯನ್ನೇ ನಂಬಿಕೂಡುವುದು ಸರಿಯಲ್ಲ. ಬದಲಾಗಿ ಪರ್ಯಾಯ ಮಾರ್ಗದ ಬಗ್ಗೆ ಚಿಂತಿಸಬೇಕು.

❑ ಈ ನಿಟ್ಟಿನಲ್ಲಿ ಎಲ್ಲಾ ದಲಿತರು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಮೂಲ್ಯ ಸಂಗತಿಗಳಾದ ನಿಮ್ಮ ಉನ್ನತಿ ನಿಮ್ಮ ಕೈಲಿರುವ ಹಾಗೆ ನಿಮ್ಮ ಅವನತಿಯೂ ನಿಮ್ಮ ಕೈಲೆ ಹಾಗೂ ನಿಮ್ಮ ಶತೃವೂ ನೀವೇ ನಿಮ್ಮ ಮಿತ್ರನೂ ಸಹ ನೀವೇ ಮುಂತಾದುವುಗಳ ಬಗ್ಗೆ ಮುಖ್ಯವಾಗಿ ಅರಿವಿರಬೇಕು. ದಲಿತರ ಬದುಕು ಮತ್ತು ಭವಿಷ್ಯಕ್ಕಾಗಿ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಬದಲಾಗಿ, ಕುಡಿತದಿಂದ ಸಂಪೂರ್ಣ ದೂರವಿದ್ದು ಉತ್ತಮ ಆಚಾರ-ವಿಚಾರ, ವ್ಯವಹಾರಗಳ ಮೂಲಕ ಸಭ್ಯ-ಸುಸಂಸ್ಕೃತ ಬದುಕನ್ನು ನಡೆಸುತ್ತಾ Level of Consiousnessನ್ನು ಉತ್ತುಂಗಕ್ಕೇರಿಸಿಕೊಳ್ಳಬೇಕು.

❑ ನನ್ನ ಅಭಿಪ್ರಾಯದಲ್ಲಿ ಚಳುವಳಿಯೇ ರಾಜಕಾರಣ (ಚಳುವಳಿಯ ಹಿಂದಿರುವ ಒತ್ತಾಸೆ, ಒತ್ತಾಯವೇ ರಾಜಕಾರಣದ್ದು) ಆದುದರಿಂದ ಸಕ್ರಿಯ ರಾಜಕಾರಣದ ಉದ್ದೇಶಕ್ಕೆ ಬದಲಾಗಿ ದಲಿತರನ್ನು ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ನೈತಿಕವಾಗಿ ಜಾಗೃತಗೊಳಿಸಿ ಸ್ವಯಂ ಸಂಘಟಿತರಾಗುವಂತೆ ಮಾಡುವುದರ ಮೂಲಕ ಸಂಘಟನೆಗೆ ಜೀವ ಕೊಡಬೇಕಿದೆ. ●

ಸೇರಿಸಿಕೊಳ್ಳುವುದಕ್ಕಿಂತ ಸಾರ್ವಜನಿಕ ಜಾಗಗಳಲ್ಲಿ ರಮಾನಂದ್‌ಸಾಗರ್‌ನ ರಾಮಾಯಣ ತೋರಿಸಿ ದಲಿತರನ್ನು ಎಲ್ಲರೊಳಗೂ ಸೇರಿಸುವ ತಂತ್ರವಿದು.

ಗಾಂಧಿಯನಾಡಿನಲ್ಲಿ ಆತ್ಮಗೌರವಕ್ಕಾಗಿ, ನ್ಯಾಯವಾದ ಹಕ್ಕಿಗಾಗಿ ಸಾಮಾಜಿಕ ನ್ಯಾಯಕ್ಕಾಗಿ ದಲಿತ ಚಳುವಳಿ ಹುಟ್ಟಿಕೊಳ್ಳದಿದ್ದುದು ಇಂದಿನ ಹಾಗೂ ಹಿಂದಿನ ಮೀಸಲಾತಿ ವಿರೋಧಿ ಗಲಭೆಗೆ ಕಾರಣವಾಯಿತು.

ಜಾತಿ ವಿರೋಧಿ ಚಳುವಳಿಗೆ ಪ್ರಬಲವಾಗಿದ್ದ ನಾಗಪುರದಲ್ಲೆ ವೈದಿಕರು ಆರ್.ಎಸ್.ಎಸ್. ಮುಖ್ಯಶಾಖೆ ಪ್ರಾರಂಭವಾಗಿದ್ದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು.

ಅಲ್ಲಿನ ಆಧುನಿಕರಣಕ್ಕೆ (ದೊಡ್ಡ ಅಣೆಕಟ್ಟು ಇತ್ಯಾದಿ) ಬಲಿಯಾಗಿ ತಮ್ಮ ಮನೆ, ಜಮೀನು, ಭಾಷೆ, ಸಂಸ್ಕೃತಿ ಎಲ್ಲವನ್ನು ಕಳೆದುಕೊಂಡು ವಿಸ್ಥಾಪಿತರಾದ ದಲಿತರು, ಆದಿವಾಸಿಗಳು ಸೇರಿದ್ದು ನಗರ ಪ್ರದೇಶದ ಕೊಳೆಗೇರಿಗಳಿಗೆ. ಬಡತನ, ಅನಕ್ಷರತೆ, ಮೀಸಲಾತಿ ವಿರೋಧ, ಖಾಸಗೀಕರಣ- ಜೊತೆಗೆ ಬಲವಾದ ಸಾಂಸ್ಕೃತಿಕ ಐಡೆಂಟಿಟಿಯನ್ನು ಕಳೆದು ಕೊಂಡಿರುವುದರಿಂದ ಹುಟ್ಟುವ ಅನಾಥ ಪ್ರಜ್ಞೆ, ದಲಿತ ಚಳುವಳಿಯ ಕೊರತೆ ಇವೆಲ್ಲ ಪರಿಸ್ಥಿತಿಯ ಹಿಂದೆ ಬಹುಮುಖ್ಯ ಪಾತ್ರ ವಹಿಸಿದೆ.

❑ ಮೇಲೆ ಹೇಳಿರುವ ವಿಷಯಗಳ ಹಿನ್ನಲೆಯಲ್ಲಿ ಗುಜರಾತಿನಲ್ಲಿ ನಿಜವಾಗಿಯೂ ದಲಿತರ ಜಾಗೃತಿ ಸಾಧ್ಯವಾಗಿದೆಯೇ? ಜಾಗೃತಿ, ಸುಧಾರಣವಾದಿ ಕಾರ್ಯಕ್ರಮಗಳಿಂದ ಬರುವುದಿಲ್ಲ. ಆತ್ಮಗೌರವದಿಂದ ಬರುವಂತಹದ್ದೆಂದು ನನ್ನ ಭಾವನೆ. ಜಾಗೃತಿಯುಂಟು ಮಾಡುವ ಪ್ರಯತ್ನಗಳಿಲ್ಲದಾಗ ಕುತಂತ್ರಗಳೇ ಯಶಸ್ವಿಯಾಗುವುದು.

❑ ದಲಿತ ಚಳುವಳಿಯ ಮುಂದೆ ಹಲವು ಸವಾಲುಗಳಿವೆ. ಕೋಮುವಾದ, ಜಾಗತೀಕರಣ, ಲಿಂಗ ಅಸಮಾನತೆಯ ವಿರುದ್ಧ ಹೋರಾಡಬೇಕಾದ ತುರ್ತಿದೆ. ಇವು ಒಂದಕ್ಕೊಂದು ಸಂಬಂಧಪಟ್ಟವಾಗಿದೆ. ಇವು ನಮ್ಮ ಗಟ್ಟಿಯಾದ ಸಾಂಸ್ಕೃತಿಕ ಐಡೆಂಟಿಟಿಯನ್ನು ಮುರಿಯುವುದರಿಂದ ನಾವಿದರ ವಿರುದ್ಧ ದನಿ ಎತ್ತಬೇಕಾಗಿದೆ. ಹಿಂದುತ್ವವಾದಿಗಳು ದಲಿತರನ್ನು Co-opt ಮಾಡಿಕೊಳ್ಳುವ ಮೂಲಕ ಮತ್ತೆ ದಲಿತ ವಿರೋಧಿ, ಸ್ತ್ರೀ ವಿರೋಧಿ, ಮನು ಧರ್ಮಶಾಸ್ತ್ರವನ್ನು ಹೇರುತ್ತಾರೆ.

ಜಾಗತೀಕರಣದ ಶಕ್ತಿಗಳೊಂದಿಗೆ ಪ್ರಭುತ್ವವೂ ಕೈಜೋಡಿಸುವುದರಿಂದ ಸಾಮಾಜಿಕ ನ್ಯಾಯದ ಕಲ್ಪನೆಯೆ ಧೂಳಿಪಟವಾಗಿ ದಲಿತರನ್ನು ಆರ್ಥಿಕವಾಗಿ ದಿವಾಳಿ ಎಬ್ಬಿಸುತ್ತದೆ. ಹೆಚ್ಚುತ್ತಿರುವ ಕೊಳ್ಳುಬಾಕ ಸಂಸ್ಕೃತಿ ಮತ್ತು ಮಾರುಕಟ್ಟೆ ವ್ಯವಸ್ಥೆಯು ದಲಿತರೊಳಗೆ ವರದಕ್ಷಿಣೆ ಪಿಡುಗು, ಗಂಡು ಮಕ್ಕಳೇ ಬೇಕೆನ್ನುವಂತಹ ಪಿಡುಗನ್ನು ಹುಟ್ಟುಹಾಕುತ್ತದೆ. ದಲಿತರೊಳಗೆ ಇರುವ ಸಾಮಾಜಿಕ ಅಸಮಾನತೆ, ಲಿಂಗ ಅಸಮಾನತೆ, ವರ್ಗ ಅಸಮಾನತೆಯನ್ನು ಪ್ರಶ್ನಿಸಿಕೊಂಡು ಸಮುದಾಯದ ಅಂತಃಸತ್ವವನ್ನು ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕಾಗಿದೆ. ಸಮುದಾಯದ ಅತ್ಯಂತ ತುಚ್ಛೀಕರಿಸಲ್ಪಟ್ಟ, ಕಟ್ಟ ಕೊನೆಯ ಮನುಷ್ಯರನ್ನು ತಲುಪುವ ಕೆಲಸ ಚಳುವಳಿಯದಾಗಬೇಕು. ●

ಮಹಾತ್ಮ ಜ್ಯೋತಿಬಾ ಫುಲೆ

ಆಧುನಿಕ ಭಾರತದಲ್ಲಿ ಜರ್ಝರಿತ ಸಮಾಜ ರಚನೆಯ ವಿರುದ್ಧ ಬಂಡಾಯದ ಸ್ವರವೆತ್ತಿದ ಮೊದಲನೆಯ ಮಹಾಪುರಷ ಜ್ಯೋತಿಬಾ ಪುಲೆ ಜನಿಸಿದ್ದು 1827ರಲ್ಲಿ. ಇವರ ಪೂರ್ವಿಕರು ಮಹಾರಾಷ್ಟ್ರದ ಸತಾರಾದಿಂದ 40 ಕಿ.ಮಿ. ದೂರದಲ್ಲಿರುವ ಕಟಗುಣ ಎಂಬ ಹಳ್ಳಿಯಲ್ಲಿ ವಾಸಿಸುತ್ತಿದ್ದರು. ಇವರು ಹಿಂದುಳಿದ ಮಾಲಿ ಜಾತಿಯ ಮೂಲದವರಾಗಿದ್ದು ಹೂ ಮಾರುವುದರಲ್ಲಿ ಪರಿಣತರು. ಆದ್ದರಿಂದ ಇವರ ವಂಶವನ್ನು ಪುಲೆ ಎಂದು ಕರೆಯಲಾಯಿತು.

ಜ್ಯೋತಿಬಾ ಪುಲೆಯವರು ಸಾಮಾಜಿಕ ಚಳುವಳಿಗೆ ಬರುವ ಮುನ್ನ ಮಹಾರಾಷ್ಟ್ರ ಪೇಶ್ವೆಗಳ ಆಡಳಿತ ಮತ್ತು ಬ್ರಾಹ್ಮಣ ರೈತರ ಅಟ್ಟಹಾಸ ಮುಗಿಲುಮುಟ್ಟಿತ್ತು. ಇದಕ್ಕೆ 2 ನಿದರ್ಶನ ಕೊಡುವುದು ಸೂಕ್ತವಾಗಿದೆ.

ಪೇಶ್ವೆಗಳ ಅನೈತಿಕ ಆಡಳಿತ ವ್ಯವಸ್ಥೆ :

ಪೇಶ್ವೆಗಳ ಕಾಲದ ಧಾರ್ಮಿಕ ಗುರುಗಳು ಬೆಲೆಬಾಳುವ ವಸ್ತ್ರಗಳನ್ನು ಧರಿಸಿ ಸುಪ್ಪತ್ತಿಗೆಯ ಮೇಲೆ ಯುವತಿ ದಾಸಿಯರನ್ನು ಮಲಗಿಸಿಕೊಂಡು ಅನೇಕ ಕಾಮ ಕೇಳಿಗಳನ್ನು ನಡೆಸುತ್ತಿದ್ದರು. ಇವರದ್ದು ಹೀಗಾದರೆ ರಾಜ್ಯಭಾರ ಮಾಡುತ್ತಿದ್ದ ಬಾಜಿರಾವ್ 5 ಮದುವೆಗಳನ್ನು ಮಾಡಿಕೊಂಡು ವಿಲಾಸದಲ್ಲಿ ಮುಳುಗಿದ್ದನು. ಜೊತೆಗೆ ಯುವ ವಿಧವೆಯರ ಜೊತೆ ಸರಸ ಮಾಡುವುದು ವಾಡಿಕೆಯಾಯಿತು. ವಿಧವೆಯರಿಗೆ ಗಂಡಸಿನ ವೇಷ ಭೂಷಣಗಳನ್ನು ತೊಡಿಸಿ, ಸಿಂಹಾಸನದ ಮೇಲೆ ಕೂಡಿಸಿ, ತಾನು ಹೆಂಗಸಿನಂತೆ ವೇಷ ತೊಟ್ಟು ಚಾಮರ ಬೀಸುವುದು ಮುಂತಾದ ವಿಲಕ್ಷಣ ಕ್ರೀಡೆಗಳನ್ನು ಆಡಿ ಸುಖ ಪಡುತ್ತಿದ್ದ. ಒಟ್ಟಿನಲ್ಲಿ ಪೇಶ್ವೆಗಳ ಕಾಲದ ಮಹಾರಾಷ್ಟ್ರ ಕೆಟ್ಟು ಕೆರ ಹಿಡಿದಿತ್ತು. ಇನ್ನು ಬ್ರಾಹ್ಮಣ ರೈತರ ಅಟ್ಟಹಾಸ ಯಾವ ಮಟ್ಟದ್ದು ಎಂದರೆ, ಸಾಲ ತೆಗೆದುಕೊಂಡು ಹಿಂದಿರುಗಿಸುವುದು ತಡವಾದರೆ ಅವರನ್ನು ಕಾದ ಎಣ್ಣೆ ಬಾಣಲೆಯಲ್ಲಿ ನಿಲ್ಲಿಸುತ್ತಿದ್ದರು. ಅಮೃತರಾವ್ ಎಂಬ ಬ್ರಾಹ್ಮಣ ರೈತನಿಗೆ ಪೇಶ್ವೆಯವರ ಎಲ್ಲಾ ಬೆಂಬಲ ಇತ್ತು. ಇವನು ಕೂಲಿಗಾರರಿಗೆ, ಸಾಲ ಕೊಟ್ಟು ತಾನೇ ಪತ್ರ ಬರೆದು ಮಕ್ಕಳನ್ನು ಜೀತಕ್ಕೆ ಇರಿಸುತ್ತಿದ್ದ. ಸಾಲ ತೀರಿಸದಿದ್ದರೆ ರೈತರನ್ನು ತಲೆ ಕೆಳಗಾಗಿ ನಿಲ್ಲಿಸಿ ಮೆಣಸಿನಕಾಯಿ ಹೊಗೆ ಹಾಕುತ್ತಿದ್ದ. ಇವರ ಹಿಂಸೆ, ಭ್ರಷ್ಟಾಚಾರಕ್ಕೆ ಮಿತಿಯೇ ಇರಲಿಲ್ಲ.

ಡಿಸೆಂಬರ್ 31, 1817ರಂದು ನಡೆದ ಕೊರೆಗಾಂವ್ ಯುದ್ಧದಲ್ಲಿ 500 ಜನ ಮಹರ್ ಸೈನಿಕರು 5000 ಜನ ಪೇಶ್ವೆ ಸೈನಿಕರನ್ನು ಸದೆಬಡಿದು ಪೇಶ್ವೆಗಳ ರಾಜ್ಯಭಾರ ಕೊನೆಗೊಳಿಸಿದರು. ಆ ಸಂದರ್ಭದಲ್ಲಿ ಹೆಂಗಸರೆಲ್ಲರೂ ಆ ಹಾಳು ಬಾಜಿರಾಯನ ಹೆಸರು ಹೇಳದಂತಾಗಿ ಹೋಗಿದ್ದು ಒಳ್ಳೆಯದಾಯಿತು. ಅವನಂತಹ ಭ್ರಷ್ಟ ಇನ್ನೊಬ್ಬನಿರಲಿಲ್ಲ. ಸಧ್ಯ ಮಹಿಳೆಯರ ಮಾನ ಮರ್ಯಾದೆ ಉಳಿಯಿತು ಎಂದು ಹೇಳಿದ್ದು ದಾಖಲಾಗಿದೆ. ನಂತರ ಇಂಗ್ಲೀಷ್‌ರ ಆಡಳಿತ ಪ್ರಾರಂಭಕ್ಕೆ ಮುನ್ನ ಮೌಂಟ್‌ಸ್ಟು ಆರ್ಟ್ ಎಲ್ ಫಿನ್‌ಸ್ಟನ್ನನಿಗೆ ನೀಡಿದ ಮಾನ ಪತ್ರದಲ್ಲಿ ತಾವು ಈ ರಾಜ್ಯದ ಆಡಳಿತ ವಹಿಸಿಕೊಂಡು ಬಲು ಉಪಕಾರ ಮಾಡಿದಿರಿ ಎಂದು ಸಹ ನಮೂದಿಸಲಾಗಿದೆ. ಅಂದರೆ ಇಂಗ್ಲೀಷ್‌ರ ಆಳ್ವಿಕೆ ಬರುವುದಕ್ಕಿಂತ ಮುಂಚೆ ಬ್ರಾಹ್ಮಣರು ಹಾಗೂ ಕೆಲವು ಮೇಲ್ವರ್ಗದವರನ್ನು ಬಿಟ್ಟರೆ ಇತರ ನಿಮ್ಮ ಜಾತಿಯವರ ಬಾಳು ಬರಡಾಗಿತ್ತು ಎಂದು ತಿಳಿಯಬಹುದು.

ಜನನ ಮತ್ತು ವಿದ್ಯಾಭ್ಯಾಸ :

ಪೇಶ್ವೆ ರಾಜ್ಯ ಕೊನೆಗೊಂಡ 9 ವರ್ಷದ ನಂತರ ಫೆಬ್ರವರಿ 20, 1827ರಲ್ಲಿ ಮಹಾತ್ಮ ಜ್ಯೋತಿ ಬಾ ಪುಲೆ ಜನಿಸಿದರು. ಇವರ ತಾಯಿ ಜಿಮಣಾ ಬಾಯಿ, ಜ್ಯೋತಿಬಾ ಜನಿಸಿದ ಕೆಲವೇ ತಿಂಗಳುಗಳಲ್ಲಿ ನಿಧನ ಹೊಂದಿದರು. ತಂದೆ ಗೋವಿಂದರಾವ್ ಪುಲೆ ಎರಡನೆಯ ಮದುವೆಯಾಗಲಿಲ್ಲ. ತಮ್ಮ ನಾದಿನಿ ವಿಧವೆ ಸುಗುಣಾಬಾಯಿ ಕ್ಷೀರಸಾಗರಳನ್ನು, ಮಗುವನ್ನು ಕಾಪಾಡುವಂತೆ ಕೇಳಿಕೊಂಡರು. ಅವರು ಬಲು ಶ್ರದ್ಧೆಯಿಂದ ಜ್ಯೋತಿಬಾ ಮತ್ತು ರಾಜಾರಾಂ ಇವರಿಬ್ಬರನ್ನೂ ಪಾಲಿಸಿ ಪೋಷಿಸಿದರು. ಮಕ್ಕಳಿಗೆ ತಾವು ತಬ್ಬಲಿಯೆಂಬ ಭಾವನೆಯೇ ಇರದಾಯಿತು. ಸುಗುಣಾಬಾಯಿ ಚಿಕ್ಕ ವಯಸ್ಸಿನಲ್ಲಿಯೇ ಜ್ಯೋತಿಬಾ ಅವರ ಮನದಲ್ಲಿ ಸಮಾಜ ಸೇವೆಯ ಬೀಜಾರೋಪಣ ಮಾಡಿದರು. ಜ್ಯೋತಿಬಾರವರು ಸುಪ್ರಸಿದ್ಧ ಬಂಡಾಯಗಾರ ಲೇಖಕ ಥಾಮಸ್ ಪೇನ್ ಅವರ Rights of Man, The age of Reason, Religion of Humanity ಹಾಗೂ Justice and Humanity ಮುಂತಾದ ಪುಸ್ತಕಗಳು ಅವರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದವು.

ಜ್ಯೋತಿಬಾ ಪುಲೆಯವರು 11 ವರ್ಷದವರಿದ್ದಾಗ, ಗೋವಿಂದರಾವ್ ಅಂಗಡಿಯಲ್ಲಿ ಗುಮಾಸ್ತನಾಗಿದ್ದ ಬ್ರಾಹ್ಮಣನೊಬ್ಬನ ಪಿತೂರಿಯಿಂದಾಗಿ, ಅವರನ್ನು ಶಾಲೆಯಿಂದ ಬಿಡಿಸಲಾಯಿತು. 13ನೇ ವಯಸ್ಸಿನಲ್ಲಿ 8 ವರ್ಷದ ಸಾವಿತ್ರಿ ಬಾಯಿಯೊಂದಿಗೆ ವಿವಾಹವಾಯಿತು. ಶಾಲೆ ಬಿಟ್ಟು ತಮ್ಮ ಕುಲಕಸುಬಿನಲ್ಲಿ ಮುಂದುವರೆದರೂ, ಪುಲೆಯವರಿಗೆ ವಿದ್ಯೆಯ ಆಸಕ್ತಿ ಕುಂದಲಿಲ್ಲ. ಇವರ ಆಸಕ್ತಿಯನ್ನು ಕಂಡು, ಗಫೂರ್ ಬೇಗ್ ಮುನಶ್ಶಿ ಎಂಬ ಉರ್ದು ಟೀಚರ್ ಹಾಗೂ ಲೆಗಿಟ್ ಎಂಬ ಕ್ರೈಸ್ತ ಪಾದ್ರಿಯು ಗೋವಿಂದರಾವ್‌ರವರಿಗೆ ತಮ್ಮ ಮಗನನ್ನು ಮತ್ತೆ ಶಾಲೆಗೆ ಸೇರಿಸುವಂತೆ ಒತ್ತಾಯಿಸಿದರು. 1841ರಲ್ಲಿ ಜ್ಯೋತಿಬಾ ಪುಲೆಯವರು ಶಾಲೆಗೆ ಸೇರಿದರು (ಸ್ಕಾಟಿಷ್ ಮಿಷನ್ ಸ್ಕೂಲ್). 1847ರಲ್ಲಿ ಇಂಗ್ಲೀಷ್ ಶಿಕ್ಷಣವು ಪೂರ್ಣಗೊಂಡಿತು.

ಪುಲೆಯುವರ ಮೇಲೆ ಪರಿಣಾಮ ಬೀರಿದ ಘಟನೆಗಳು :

ಅಂದಿನ ದಿನಗಳಲ್ಲಿ ಬ್ರಾಹ್ಮಣರ ಚಿತಾವಣೆ ಮೇರೆಗೆ ಬ್ರಿಟಿಷರ ಮೇಲೆ ಭಾರತೀಯರ ಬಂಡಾಯವು ತರುಣ ಜ್ಯೋತಿಯ ಮೇಲೆ ಆಳವಾದ ಪ್ರಭಾವ ಬೀರಿದ್ದವು. ಆದ ಕಾರಣ, ಬ್ರಿಟಿಷರನ್ನು ಭಾರತದಿಂದ ತೊಲಗಿಸುವುದು ತನ್ನ ಪವಿತ್ರ ಕರ್ತವ್ಯವೆಂದು ಅವರು ತಿಳಿದಿದ್ದರು. ಆದರೆ 1848ರಲ್ಲಿ ನಡೆದ ಒಂದು ಘಟನೆಯು ಅವರ ಜೀವನದ ದಿಕ್ಕನ್ನೆ ಬದಲಿಸಿತು. ಒಬ್ಬ ಬ್ರಾಹ್ಮಣ ಮಿತ್ರನ ಮದುವೆಯ ಮೆರವಣಿಗೆಯಲ್ಲಿ ಭಾಗವಹಿಸಿದ ತಪ್ಪಿಗಾಗಿ ಕೆಲವು ಹಿರಿಯ ಬ್ರಾಹ್ಮಣರೆಲ್ಲರೂ ಸೇರಿ ಅವರನ್ನು ಶೂದ್ರನೆಂದು ಅಪಮಾನಿಸಿ, ಮೆರವಣಿಗೆಯಿಂದ ಹೊರ ನೂಕಿದರು. ಇದರಿಂದ ಜ್ಯೋತಿಬಾ ಅಪಾರವಾಗಿ ನೊಂದುಕೊಂಡರು. ಆ ಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಅಸ್ಪೃಶ್ಯರ ಮೇಲಿನ ಸಾಮಾಜಿಕ ಕಟ್ಟಳೆಗಳನ್ನು ವಿರೋಧಿಸದೆ ಅದೇ ಶ್ರೇಷ್ಠವೆಂಬಂತೆ

ಬದುಕುತ್ತಿದ್ದ ಅವರ ಸ್ಥಿತಿಗತಿಗಳು ಜ್ಯೋತಿಬಾರವರ ಮನಸ್ಸನ್ನು ಆಳವಾಗಿ ಕದಡಿತು.

ಅಸ್ಪೃಶ್ಯರ ಇಂತಹ ಹೀನಾಯ ಸ್ಥಿತಿಗೆ ಕಾರಣ ಅವರಿಗೆ ವಿದ್ಯೆ ಇಲ್ಲದಿರುವುದು ಎಂದು ಮನವರಿಕೆಯಾಯಿತು. ನಂತರ ಇದೇ ಪುಲೆಯವರು ನಾವು ಬ್ರಿಟಿಷರಿಗೆ ಚಿರ ಋಣಿಗಳಾಗಿರಬೇಕು. ಅವರ ಅನುಕಂಪವನ್ನು ನಾವು ಮರೆಯುವಂತೆಯೇ ಇಲ್ಲ. ಶತಮಾನಗಳ ಕಾಲದ ಬ್ರಾಹ್ಮಣವಾದಿ ಶೋಷಣೆಯಿಂದ ನಮ್ಮನ್ನು ಬಿಡುಗಡೆಗೊಳಿಸಿ, ನಮ್ಮ ಮಕ್ಕಳಿಗೆ ಭರವಸೆಯ ಭವಿಷ್ಯವನ್ನು ನೀಡಿದವರು ಬ್ರಿಟಿಷರು ಈ ನಾಡಿಗೆ ಬ್ರಿಟಿಷರು ದೊರೆಗಳಾಗಿ ಬಾರದೇ ಇದ್ದಲ್ಲಿ, ಭಟ್ಟರು (ಬ್ರಾಹ್ಮಣರು) ನಮ್ಮನ್ನು ಸರ್ವನಾಶ ಮಾಡಿರುತ್ತಿದ್ದರು ಎಂದರು.

ಅಸ್ಪೃಶ್ಯರಿಗಾಗಿ ಮೊದಲ ಶಾಲೆ ಪ್ರಾರಂಭ :

ಅವರು ಕನ್ಯಾ ಪಾಠಶಾಲೆ ಆರಂಭಿಸುವ ಸಮಯದಲ್ಲಿ ಮಾಡಿದ ಭಾಷಣ ಅವರ ಸಾಮಾಜಿಕ ಕ್ರಾಂತಿಯ ಸ್ಪಷ್ಟ ದಿಕ್ಕನ್ನು ಸೂಚಿಸಿದೆ. ನಮ್ಮ ಜನಾಂಗದ ಮಹಾರ, ಮಾಂಗ, ಚಮ್ಮಾರ ಮುಂತಾದ ಜಾತಿಯ ಸೋದರ-ಸೋದರಿಯರನ್ನು ದುಃಖದ ಕಗ್ಗತ್ತಲೆ ಆವರಿಸಿದೆ. ಮೊತ್ತ ಮೊದಲು ಕನ್ಯಾಪಾಠಶಾಲೆಯನ್ನು ಪ್ರಾರಂಭ ಮಾಡುವ ಬಯಕೆ ನನ್ನಲ್ಲಿ ಉಂಟಾಯಿತು. ಗಂಭೀರವಾಗಿ ವಿಚಾರ ಮಾಡಿದಾಗ ನನಗೆ ಗಂಡು ಮಕ್ಕಳ ಶಾಲೆಗಿಂತ ಹೆಣ್ಣು ಮಕ್ಕಳ ಶಾಲೆ ಅಗತ್ಯವೆನಿಸಿತು. ಅಲ್ಲದೆ ಇದು ನನ್ನ ಜೀವನದ ಧ್ಯೇಯವೆಂದು ಬಗೆದು ಈ ದಾರಿಯಲ್ಲಿ ಮುಂದುವರೆಯುವೆ. ಇದಕ್ಕೆ ಹೆಣ್ಣು ಮಕ್ಕಳ ತಂದೆ ತಾಯಿಯರು ಸಹಕಾರ ನೀಡಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕು ಎಂದು ಕೇಳಿಕೊಂಡರು. 1848-49ರಲ್ಲಿ ಪುಲೆಯವರು ಶೂದ್ರಾತಿಶೂದ್ರ ಹೆಣ್ಣುಮಕ್ಕಳ ಶಾಲೆಯನ್ನು ತೆರೆದರು. ಆದರೆ, ಬ್ರಾಹ್ಮಣವಾದಿಗಳು ಗೋವಿಂದರಾವ್‌ರ ಮೇಲೆ ಒತ್ತಡ ಹೇರಿ, ಪುಲೆಯವರನ್ನು ಪತ್ನಿ ಸಮೇತ ಮನೆಯಿಂದ ಹೊರ ಕಳಿಸಿದರು. ಶಾಲೆ ಬಂದ್ ಆಯಿತು. ಪುಲೆಯವರು ಜೀವನ ನಿರ್ವಹಣೆಗಾಗಿ ವ್ಯಾಪಾರಕ್ಕಿಳಿದರು.

ಪುನಃ ಜುಲೈ 3, 1851ರಂದು ಮತ್ತೊಂದು ಶಾಲೆಯನ್ನು ತೆರೆದರು. ಈ ಶಾಲೆಗೆ ತಮ್ಮ ಪತ್ನಿ ಸಾವಿತ್ರಿಬಾಯಿಯವರನ್ನೆ ಮುಖ್ಯ ಉಪಾಧ್ಯಾಯರಾಗಿ ನೇಮಿಸಿದರು. ಅನೇಕ ಅಡೆತಡೆ ಕಿರುಕುಳವನ್ನು ಎದುರಿಸಿ ಅಸ್ಪೃಶ್ಯರಿಗೆ ವಿದ್ಯಾದಾನ ಮಾಡಿದ ಮೊದಲ ಮಹಿಳಾ ಉಪಾಧ್ಯಾಯಿನಿ ಮಾತೆ ಸಾವಿತ್ರಿಬಾಯಿ ಪುಲೆಯವರು. ಈ ಶಾಲೆಯಲ್ಲಿ ಆರಂಭಕ್ಕೆ 8 ಹುಡುಗಿಯರಿದ್ದು ಬಲು ಬೇಗ ಆ ಸಂಖ್ಯೆಯು 48ಕ್ಕೇರಿತು. ಹೆಣ್ಣು ಮಕ್ಕಳ ಶಾಲೆ ತೆರೆಯುವಂತೆ ಪುಲೆಯವರ ಮೇಲೆ ಪ್ರಭಾವ ಬೀರಿದವರು ಅಮೇರಿಕಾ ಮಿಷನ್ನಿನ ಮಿಸ್ ಫರಾರ್‌ರವರು. ನಂತರ 1852ರೊಳಗೆ, ಅವರು ಮತ್ತೆರಡು ಶಾಲೆಗಳನ್ನು ತೆರೆದರು.

ಹಂಟರ್ ಕಮಿಷನ್ ಮುಂದಿಟ್ಟ ಬೇಡಿಕೆಗಳು :

1882ರಲ್ಲಿ, ಸರ್ ವಿಲಿಯಂ ಹಂಟರ್‌ರವರ ಅಧ್ಯಕ್ಷತೆಯಲ್ಲಿ ಭಾರತಕ್ಕೆ ಭೇಟಿ ನೀಡಿದ ಶಿಕ್ಷಣ ಆಯೋಗಕ್ಕೆ ಮಹಾತ್ಮ ಪುಲೆಯವರು ಒಂದು ಮನವಿ ಸಲ್ಲಿಸಿದರು. ಪ್ರತಿ ಹಳ್ಳಿಯಲ್ಲಿ ಶೂದ್ರ ಮಕ್ಕಳಿಗೆ ಶಾಲೆಗಳು, ಆ ಶಾಲೆಯಲ್ಲಿ ಬ್ರಾಹ್ಮಣರಲ್ಲದ ಶಿಕ್ಷಕರ ನೇಮಕ, ಎಲ್ಲರಿಗೂ ಉಚಿತ ಪ್ರಾಥಮಿಕ ಶಾಲೆಗಳು, ಸ್ಕಾಲರ್‌ಶಿಪ್-ಫ್ರೀಶಿಪ್, ಅಸ್ಪೃಶ್ಯರಿಗೆ ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸುವುದು, ಅಸ್ಪೃಶ್ಯರಾದ ಮಹರ್, ಮಾಂಗ್ ಮತ್ತಿತರರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯುವುದು, ಆ ಬ್ರಾಹ್ಮಣ ಶಿಕ್ಷಕರು ಎಲ್ಲ ಮಕ್ಕಳೊಂದಿಗೆ ಯಾವುದೇ ಭೇದಭಾವವಿಲ್ಲದೆ ಬೆರೆಯಬೇಕು. ಅವರು ತರಬೇತಿ ಪಡೆದ ಶಿಕ್ಷಕರಾಗಿರಬೇಕಲ್ಲದೆ, ಬೇಸಾಯ ಮತ್ತು ನೈರ್ಮಲ್ಯದ ಬಗ್ಗೆ ತಿಳುವಳಿಕೆಯುಳ್ಳವರಾಗಿರಬೇಕು, ಮಕ್ಕಳು ಕಲಿಯಬೇಕಾದ ಪಠ್ಯಕ್ರಮ, ಲೆಕ್ಕ (ಅಕೌಂಟ್ಸ್), ಚರಿತ್ರೆ, ಭೂಗೋಳ, ವ್ಯಾಕರಣ, ಬೇಸಾಯದ ಮೂಲಭೂತ ತಿಳುವಳಿಕೆ, ನೀತಿಪಾಠ, ನೈರ್ಮಲ್ಯ, ಇಂಗ್ಲೀಷ್ ಮತ್ತು ಪ್ರಾದೇಶಿಕ ಭಾಷೆಗಳನ್ನು ಸ್ಥಳೀಯರ ಅಗತ್ಯಗಳಿಗೆ ತಕ್ಕಂತೆ ತಿದ್ದುಪಡಿ ಮಾಡುವುದು. ಪ್ರಗತಿಗೆ ಅಗತ್ಯವಾದ ತಾಂತ್ರಿಕ ಮತ್ತು ಕಲಾ ಶಿಕ್ಷಣ, ಪ್ರತಿಯೊಂದು ಮುನಿಸಿಪಾಲಿಟಿಯು ತನ್ನ ವ್ಯಾಪ್ತಿಯೊಳಗೆ ಬರುವ ಶಾಲೆಗಳನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವಂತೆ ಕಾಯಿದೆ ಮಾಡುವುದು, ಇಂಪೀರಿಯಲ್ ಮತ್ತು ಪ್ರಾವಿನ್ಸಿಯಲ್ ನಿಧಿಯಿಂದ ಶಿಕ್ಷಣಕ್ಕೆ ಅಗತ್ಯವಾದ ಧನ ಸಹಾಯ ಮತ್ತು ರೈತರಿಗೆ ಇತರರಿಂದ ಆಗುವ ಕಿರುಕುಳದಿಂದ ರಕ್ಷಣೆ ಮತ್ತು ಶೂದ್ರಾತಿಶೂದ್ರರು ಇತರ ಸಾರ್ವಜನಿಕ ಸೇವೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವುದು.

ಶಿಕ್ಷಣ ಇಲಾಖೆಯ ಆಡಳಿತಕ್ಕೆ ಸಂಬಂಧಿಸಿದಂತೆ ಪುಲೆಯವರ ವಿಚಾರಗಳು :

1) ತನ್ನ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಖರ್ಚು ವೆಚ್ಚಗಳನ್ನು ಮುನಿಸಿಪಾಲಿಟಿಗಳೇ ವಹಿಸಿಕೊಂಡರೂ, ಶಿಕ್ಷಣದ ಸಂಪೂರ್ಣ ಉಸ್ತುವಾರಿಯು ಪ್ರತ್ಯೇಕ ಇಲಾಖೆಗೆ ಸೇರಿರಬೇಕು.
2) ಮುನಿಸಿಪಾಲಿಟಿಗಳು ಖಾಸಗಿ ಇಂಗ್ಲೀಷ್ ಶಾಲೆಗಳಿಗೆ ಗ್ರ್ಯಾಂಟ್ ನೀಡಬೇಕು. ಈ ನಿಟ್ಟಿನಲ್ಲಿ ಕಾಯಿದೆ ಇರಬೇಕು.
3) ಶಿಕ್ಷಣಕ್ಕೆ ನಿಗದಿಯಾದ ಹಣವು ದುರುಪಯೋಗವಾಗದಿರಲು, ಕಲೆಕ್ಟರ್‌ರವರ ನೇತೃತ್ವದಲ್ಲಿ ಒಂದು ಬುದ್ಧಿಜೀವಿಗಳ ಮಂಡಳಿಯಿರಬೇಕು.
4) ಪ್ರತಿ ಮೂರು ತಿಂಗಳಿಗೊಮ್ಮೆ ಉನ್ನತ ಅಧಿಕಾರಿಗಳಿಂದ ಶಾಲೆಗಳ ಇನ್ಸ್‌ಪೆಕ್ಷನ್ ನಡೆಯಬೇಕು.
5) ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಮತ್ತು ಬಹುಮಾನಗಳನ್ನು ನೀಡುವಂತೆಯೇ, ಶಿಕ್ಷಕರಿಗೂ ಉತ್ತೇಜನ ನೀಡಬೇಕು.
6) ನಿರುದ್ಯೋಗಿ ಪದವೀಧರರು ಶಾಲೆಗಳನ್ನು ತೆರೆಯಲು ಪ್ರೋತ್ಸಾಹಿಸಬೇಕು.
7) ಉನ್ನತ ಶಿಕ್ಷಣವನ್ನು ಅಗ್ಗಗೊಳಿಸಿ ಎಲ್ಲರ ಕೈ ಗೆಟುಕುವಂತೆ ಮಾಡಬೇಕು.
8) ಮೆಟ್ರಿಕ್ಯುಲೇಷನ್ನಿನ ಪಠ್ಯ ಪುಸ್ತಕಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಬೇಕು.

ಸತ್ಯಶೋಧಕ ಸಮಾಜ ಚಳುವಳಿ :

ಶೂದ್ರಾತಿಶೂದ್ರರಲ್ಲಿ ಶಿಕ್ಷಣವನ್ನು ಹರಡುವುದರ ಜತೆಗೆ, ಸಾಮಾಜಿಕ ಪರಿವರ್ತನೆಗಾಗಿ ಸತ್ಯಶೋಧಕ ಸಮಾಜ ಸಂಸ್ಥೆಯನ್ನು 1873ರಲ್ಲಿ ಸ್ಥಾಪಿಸಿದರು.

ಇದರ ಉದ್ದೇಶಗಳು :

1) ಚಾತುರ್‌ವರ್ಣ ವ್ಯವಸ್ಥೆಯನ್ನು ಧಿಕ್ಕರಿಸುವುದು.
2) ಮೂರ್ತಿಪೂಜೆ ವಿರೋಧ
3) ಬ್ರಾಹ್ಮಣ ಪೌರೋಹಿತ್ಯವಿಲ್ಲದ ಮದುವೆ ಮತ್ತಿತರ ಕಾರ್ಯಗಳು
4) ಕುಲಗಳನ್ನು ಆಧರಿಸಿದ ಕಸುಬುಗಳನ್ನು ಮಾಡುವುದಕ್ಕೆ ವಿರೋಧ
5) ವಿಧವಾ ವಿವಾಹಕ್ಕೆ ಪ್ರೋತ್ಸಾಹ ಮತ್ತು ಬಾಲ್ಯ ವಿವಾಹಕ್ಕೆ ವಿರೋಧ
6) ಪುರುಷರು ಮತ್ತು ಮಹಿಳೆಯರಿಬ್ಬರಿಗೂ ಸಮಾನ ಹಕ್ಕುಗಳು
7) ಶೂದ್ರತಿಶೂದ್ರರು ಭಟ್‌ಜೀ-ಶೇಟ್‌ಜಿಗಳ ಸರ್ವಾಧಿಕಾರದ ವಿರುದ್ಧ ಹೋರಾಡಬೇಕು ಮತ್ತು ವೇದಗಳ ಪರಮಾಧಿಕಾರವನ್ನು ಧಿಕ್ಕರಿಸುವುದು.

ಸತ್ಯಶೋಧಕ ಸಮಾಜದ ಕಾರ್ಯಕ್ರಮಗಳು :

1. ಬ್ರಾಹ್ಮಣ ಪುರೋಹಿತರಿಲ್ಲದ ವಿವಾಹ ನಡೆಸಿದರು. (28-9-1873)
2. ಮನುಸ್ಮೃತಿ ಮತ್ತಿತರ ಧಾರ್ಮಿಕ ಗ್ರಂಥಗಳನ್ನು ವಿರೋಧಿಸಿದರು.
3. ಮುಂಬೈ ಗಿರಣಿ ಕಾರ್ಮಿಕರ ಮುಷ್ಕರವನ್ನು ಸಂಘಟಿಸಿ, ಕಾರ್ಮಿಕರು ತಮ್ಮ ಹಕ್ಕುಗಳಿಗೆ ಹೋರಾಡುವಂತೆ ಮಾಡಿದರು.
4. ವಿಧವೆಯರಿಗೆ ಹಾಗೂ ಅವರಿಗೆ ಹುಟ್ಟುವ ಮಕ್ಕಳಿಗೆ ಆಶ್ರಯ ಕಲ್ಪಿಸಿದರು. ಒಬ್ಬ ಬ್ರಾಹ್ಮಣ ವಿಧವೆಗೆ ಹುಟ್ಟಿದ ಮಗುವನ್ನೆ ತಮ್ಮ ಮಗನಾಗಿ ದತ್ತು ಸ್ವೀಕರಿಸಿದರು. ಆ ಮಗನೆ ಯಶವಂತ. ಪುಲೆಯವರು ಕಾಲವಾದ ನಂತರ ಇವರ ಚಳುವಳಿಯನ್ನು ಯಶವಂತ ಮುಂದುವರೆಸುತ್ತಾರೆ.
5. ತಮ್ಮ ಮನೆಯಲ್ಲಿದ್ದ ಬಾವಿಯನ್ನು ಅಸ್ಪೃಶ್ಯರಿಗೆ ಬಳಸಲು ಬಿಟ್ಟರು.
6. 1876ರಲ್ಲಿ ಪೂನಾ ನಗರದ ಮುನಿಸಿಪಾಲಿಟಿ ಸದಸ್ಯರಾಗಿ ನೇಮಕಗೊಂಡರು.
7. ಕೃಷಿ ಕಾರ್ಮಿಕರಿಗಾಗಿ ಹಾಗೂ ಭೂ ರಹಿತ ರೈತರಿಗಾಗಿ ಹೋರಾಡಿದರು. 2-3-1888ರಂದು ರಾಣಿ ವಿಕ್ಟೋರಿಯಳ ಮೊಮ್ಮಗನಿಗೆ ಈ ರೈತರ ಬವಣೆಯನ್ನು ತಿಳಿಸಿ ಮನವಿ ಅರ್ಪಿಸಿದರು. ನೀರಾವರಿ ಸೌಲಭ್ಯ, ಬಡ್ಡಿ ರಹಿತ ಸಾಲ ಮತ್ತು ಸಹಕಾರ ಸಂಘಗಳನ್ನು ಸ್ಥಾಪಿಸಲು ಕೋರಿದರು. ಹಾಗೂ ಭೂರಹಿತರಿಗೆ ಭೂಮಿ ನೀಡಲು ಸರ್ಕಾರವನ್ನು ಒತ್ತಾಯಿಸಿದರು.
8. ಬ್ರಾಹ್ಮಣ ವಿಧವೆಯರಿಗೆ ತಲೆ ಬೋಳಿಸದಿರುವಂತೆ ಕ್ಷೌರಿಕರಿಗೆ ತಿಳುವಳಿಕೆ ನೀಡಿ, ಅವರಿಂದ ಆ

ಈ ದಿನಗಳೇ ಹೀಗೆ, ಮುಟ್ಟಿಸಿಕೊಳ್ಳುವುದಿಲ್ಲ

ಯಾರ ಎದೆಗಳಲ್ಲಿ ಖುಷಿಯಿದೆ,
ಕನ್ನಡಿಯ ಮುಂದೆ ನಿಲ್ಲುವ ಮುಖವಿದೆ.
ನನ್ನ ಮನಸಿನ ತೊಟ್ಟಿಯಲ್ಲಿ ಒಂದಿಷ್ಟು
ಸುಟ್ಟ ತುಟಿಗಳಿವೆ ಕರುಣೆಯಿಲ್ಲದ ಕಣ್ಣುಗಳ ನಗೆಯಿದೆ.
ಹೊಟ್ಟೆಯ ತುಂಬ ನಿರಾಶ್ರಿತರ ತಾಣವಿದೆ
ಯಾರಿಗಂತ ಪತ್ರ ಬರೆಯಲಿ
ಕ್ಷೇಮವೇ ಎಂದು ಕೇಳುವ ಭ್ರಮೆ ಇಲ್ಲ ಈಗ
ಹಿಂಜರಿಕೆ ನನಗೆ,
ಕೈಕುಲುಕಿ ಹೇಗಿದ್ದೀರಾ ಎಂದು ಕೇಳಲು
ಬೀದಿಗಳು ಅವಿತುಕೊಳ್ಳುವಂತಿಲ್ಲ
ಹೀಗೆ
ಬಯಲು ಏಕಾಂಗಿಯಾಗಿದೆ,
ಗರ್ಭದಲ್ಲಿ ಕೂಸು ಉರಿಯುವ ಬೆಂಕಿಯ ಕಂಡು
ಹಾಲ್ದುಟಿಯಲ್ಲಿ ಹೊಟ್ಟೆಯ ತುಂಬ ನಗುತಿದೆ
ಗುಟುಕು ಹಾಕುತಿದೆ ಹಕ್ಕಿಯಂತೆ
ಗಾಂಧಿ ಹುಟ್ಟಿದ ನಾಡಿನಲ್ಲಿ ಬೆಂಕಿ ಸುಡುವುದಿಲ್ಲ
ಹಸಿ ಗರ್ಭವನ್ನು
ಆಕಾಶ ಬೀಳುವುದಿಲ್ಲ, ಗುಡಿ ಚರ್ಚು ಮಸೀದಿಗಳ
ಕೆಡವಿದ ಹಾಗೆ, ಬಗಿಯುತ್ತವೆ ಜಾತಿಧರ್ಮಗಳು
ಬರ, ಭೂಕಂಪವಾದರೂ
ಮೋಡ ಗೂಡು ಕಟ್ಟಿಕೊಳ್ಳುತ್ತದೆ, ಮಳೆ ಹನಿಗಾಗಿ
ವಿಷ ಕಕ್ಕುವರ ಬಾಯಲ್ಲಿ ನೊರೆ ಹಾಲು ಉಕ್ಕುತ್ತಿದೆಯೋ?
ಕಾಲಿಗೆ ಕಲ್ಲು ಕಟ್ಟಿಸಿ
ಓಡಿಸುವವರಿಗೆ, ಗೆಜ್ಜೆ ಕಟ್ಟಿಕೊಂಡಿದ್ದು ಕೇಳಿಸಲಿಲ್ಲವೇ?
ಸಹನೆಯ ಕೈದಿಂಬು ಸುಡುತಿದೆ,
ಕಡಲಿನ ಪುಟ್ಟ ಅಲೆಯಾಗಿದ್ದರು ಅಪ್ಪಳಿಸುತಿದ್ದೆ, ದಡಕ್ಕೆ
ನೂರಾರು ಸಲ, ಆದರೆ
ನನ್ನ ಓಂದೂವನ್ನಾಗಿ ಮಾಡಲಾಗಿದೆ, ಅಸ್ಪೃಶ್ಯತೆಯ ಪಾಲು ಪಡೆಯಲು
ಈ ದಿನಗಳೇ ಹೀಗೆ ಮುಟ್ಟಿಸಿಕೊಳ್ಳುವುದಿಲ್ಲ
ನಿಷ್ಕಳಂಕ ಕೊಳದಲ್ಲಿ ಪಾಪದ ಮೈತೊಳೆಯುವುವವರು
ಮುಗಿಲು ಮಲ್ಲಿಗೆಯ ಹಾಗೆ ನಕ್ಕವರ ಮೆದುಳಲ್ಲಿ
ಅವರೆ ತುಂಬಿಸಿಕೊಂಡ...
ಆದರೂ ಖುಷಿಯಿಂದ ಓಡಬೇಕೆನ್ನಿಸುತ್ತಿದೆ.
ಊರಿನ ಕಡೆ ಮಳೆ, ಧೋ ಎಂದು ಸುರಿಯುತ್ತಿದೆ,
ಎಂದು ಕೇಳಿ
ಘಟ್ಟ ಸಾಲು ಸಾಲು ಶ್ರೇಣಿ ಪರ್ವತಗಳಲ್ಲಿ
ಜಾರಿದ ಮಳೆಯ ಹುಡುಗ ನಾನು
ಹನಿಗಳ ನಡುವೆ ಓಡಾಡಿದವನಿಗೆ
ಕಡಲು ನೆನಪಾಗುತ್ತದೆ, ಅಪ್ಪಳಿಸುವ ಅಲೆಗಳು
ಕೆಣಕುತ್ತವೆ
ಮುಟ್ಟಿಸಿಕೊಳ್ಳದವನ ಮಗಳು ಕಿತ್ತಲೆ ಹಣ್ಣಾಗಿದ್ದಾಳೆ.

○ ಸುಬ್ಬು ಹೊಲೆಯಾರ್

ಕೆಲಸವನ್ನು ನಿಲ್ಲಿಸಿದರು. ಇದರಿಂದಾಗಿ ಸ್ವತಃ ಬ್ರಾಹ್ಮಣರೇ ಆ ಕೆಲಸವನ್ನು ಮಾಡಬೇಕಾಯಿತು.

9. 1879ರಲ್ಲಿ ದೀನಬಂಧು ವಾರ ಪತ್ರಿಕೆಯನ್ನು ಆರಂಭಿಸಿದರು. ಇದು ಸತ್ಯಶೋಧಕ ಸಮಾಜ ಸಂಸ್ಥೆಯ ಮುಖವಾಣಿಯಾಗಿತ್ತು.
10. ಗುಲಾಮಗಿರಿ, ಬ್ರಾಹ್ಮಣರ ಕುಯುಕ್ತಿ ಮತ್ತು ಸಾರ್ವಜನಿಕ ಸತ್ಯಧರ್ಮ, ಜಾತಿ ಬೇಧ ವಿವೇಕಾಸಾರ ಮುಂತಾದ ಪುಸ್ತಕಗಳನ್ನು ಬರೆದರು.

ಸತ್ಯಶೋಧಕ ಸಮಾಜದ ಚಳುವಳಿಯ ವಿರುದ್ಧವಾಗಿ 1885ರಲ್ಲಿ ಹುಟ್ಟಿದ ಕಾಂಗ್ರೆಸ್ ಪಾರ್ಟಿಯನ್ನು ಬ್ರಾಹ್ಮಣ ಬನಿಯಾ ಪಾರ್ಟಿ ಎಂದು ಜರಿದು, ಶೂದ್ರ, ಅತಿಶೂದ್ರರು ಆ ಪಾರ್ಟಿಗೆ ಸೇರಬೇಡಿ ಎಂದರು. ಅಲ್ಲದೆ ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ ಮತ್ತು ಸಾರ್ವಜನಿಕ ಸಭಾಗಳನ್ನು ಬ್ರಾಹ್ಮಣರ ಸಂಘಟನೆಗಳೆಂದು ಜರಿದರು. ಜಸ್ಟೀಸ್ ರಾನಡೆಯವರು ಸತ್ಯಶೋಧಕ ಸಮಾಜ ಚಳುವಳಿಗೆ ತಮ್ಮನ್ನೂ ಸೇರಿಸಿಕೊಳ್ಳುವಂತೆ ಮಹಾತ್ಮ ಪುಲೆಯವರಲ್ಲಿ ವಿನಂತಿಸಿದಾಗ ಸಮಾನತಾವಾದದ ಚಿಂತನೆಯಿಲ್ಲದ ಬದ್ಮಾಶಿ ಉದ್ದೇಶಗಳನ್ನು ಹೊಂದಿರುವ ಜನರಿಗೆ ಇಲ್ಲಿ ಅವಕಾಶವಿಲ್ಲ. ನೀವು ಪ್ರಗತಿಪರರೇ ಆಗಿದ್ದಲ್ಲಿ ನಿಮ್ಮ ಬ್ರಾಹ್ಮಣ ಜನರ ನಡುವೆ ಕೆಲಸ ಮಾಡಿ, ಅವರನ್ನು ಪ್ರಗತಿಪರರನ್ನಾಗಿ ಮಾಡಿ ಎಂದರು.

ಜ್ಯೋತಿಬಾರವರ ಅಂತಿಮ ಯಾತ್ರೆ

1888ರ ಜುಲೈನಲ್ಲಿ ಜ್ಯೋತಿಬಾಗೆ ಪಾರ್ಶ್ವವಾಯು ತಗುಲಿತು. 1888ರ ಡಿಸೆಂಬರ್‌ನಲ್ಲಿ ಎರಡನೆಯ ಬಾರಿ ಪಾರ್ಶ್ವವಾಯು ತಗುಲಿತು. ಕೊನೆಗೆ 27-11-1890ರಂದು ಅವರ ಸ್ಥಿತಿ ಗಂಭೀರವಾಯಿತು. ಅದೇ ದಿನ ಸಂಜೆ 5-00 ಘಂಟೆಗೆ ತಮ್ಮವರನ್ನೆಲ್ಲಾ ಕರೆದು ಕೊನೆಯದಾಗಿ ಹೀಗೆ ನುಡಿದರು. ಗೆಳೆಯರೆ, ಈಗ ಲೋಕ ಬಿಡುವ ಕಾಲ ಬಂದಿದೆ. ನಾನು ಕೈಗೆತ್ತಿಕೊಂಡ ಕಾರ್ಯವೆಲ್ಲಾ ಸರಿಸುಮಾರು ಯಶಸ್ವಿಯಾಗಿ ಪೂರೈಸಿದ್ದೇನೆ. ನೀವೆಲ್ಲರೂ ನನಗೆ ನೀಡಿದ ಸಹಾಯ ಸಹಕಾರಗಳಿಗೆ ಬೆಲೆ ಕಟ್ಟಲಾಗದು. ನನ್ನ ಬಾಳ ಸಂಗಾತಿ ಸಾವಿತ್ರಿ ಕ್ಷಣ ಕ್ಷಣಕ್ಕೂ ನೆರಳಿನಂತೆ ನನ್ನ ಜೊತೆ ಇರುತ್ತಿದ್ದಳು. ಮಗ ಯಶವಂತ ಇನ್ನೂ ಚಿಕ್ಕವನು. ಆದರೆ ಕೆಲಸ ಕಾರ್ಯದಲ್ಲಿ ಅವನಿಗೆ ಅದಮ್ಯ ಉತ್ಸಾಹವಿದೆ. ನಾನು ಇವರಿಬ್ಬರನ್ನು ನಿಮ್ಮ ವಶಕ್ಕೆ ಒಪ್ಪಿಸಿದ್ದೇನೆ. ಹುಟ್ಟಿದವನಿಗೆ ಸಾವು ತಪ್ಪಿದ್ದಲ್ಲ. ಹಿಂದೆ ನಮ್ಮ ಪೂರ್ವಿಕರು ಹೋದರು. ಇಂದು ನನ್ನ ಸದರಿ. ನಾಳೆ ನಿಮ್ಮ ಪಾಳಿ. ಶೋಕಾರ್ತರಾಗಿ ಇರಬೇಡಿ. ನೀವು ನಿಮ್ಮ ಕೆಲಸ ಮಾಡುತ್ತಾ ಹೋಗಿ. ಸ.ಶೋ.ಸ. ಆದರ್ಶಗಳನ್ನು ಮೈಗೂಡಿಸಿಕೊಳ್ಳಿ. ನನ್ನೊಂದಿಗೆ ನೀವೆಲ್ಲಾ ನೊಂದಿದ್ದೀರಿ. ಮುಂದೆ ಇದಕ್ಕಿಂತ ಹೆಚ್ಚು ಯಾತನೆ ಅನುಭವಿಸಬೇಕಾದೀತು. ಆದರೆ ಯಾವುದಕ್ಕೂ ಹೆದರದೆ ನಿಮ್ಮ ಮೇಲೆ ನಂಬಿಕೆ ಇಟ್ಟು, ನಿಮ್ಮ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಎಂದರು. ಎಲ್ಲರೂ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವಂತೆ ಕೇಳಿಕೊಂಡರು. ಮರುಕ್ಷಣವೇ ಅವರ ಚೇತನ ಬಿಟ್ಟು ಅಗಲಿತು. ಲಕ್ಷಾಂತರ ಜನರು ತಮ್ಮ ನಾಯಕನಿಗೆ ಶ್ರದ್ಧಾಂಜಲಿ ಅರ್ಪಿಸಿ ಶವಯಾತ್ರೆಯಲ್ಲಿ ಪಾಲ್ಗೊಂಡರು.

ಈ ರೀತಿ ಒಬ್ಬ ಧೀರ, ಕರ್ಮನಿಷ್ಠ, ಬಹುಮುಖ ವ್ಯಕ್ತಿತ್ವವೊಂದು ಕಣ್ಮರೆಯಾಯಿತು. ಜ್ಯೋತಿಬಾರವರ ನಂತರ ಸತ್ಯಶೋಧಕ ಸಮಾಜ ಚಳುವಳಿಯನ್ನು ಮಾತೆ ಸಾವಿತ್ರಿಬಾಯಿ ಪುಲೆ ಮುಂದುವರೆಸಿದರು. 1897ರಲ್ಲಿ ಮಾತಾ ಸಾವಿತ್ರಿಬಾಯಿಯವರ ಪವಿತ್ರ ಚೇತನವೂ ಅವರ ದೇಹ ಬಿಟ್ಟು ಅಗಲಿತು. ಇವರಿಬ್ಬರ ಮಹಾನ್ ಚೇತನಗಳು ಬಾಬಾ ಸಾಹೇಬ್ ಅಂಬೇಡ್ಕರ್ ಆಗಿ ಮತ್ತೆ ಮಾನವ ಕುಲಕ್ಕೆ 20ನೆಯ ಶತಮಾನದಲ್ಲಿ ಮಹಾನ್ ಜ್ಯೋತಿಯಾಗಿ ಉದಯವಾಯಿತು. ಮಹಾನ್ ಚೇತನಗಳಿಗೆ ಸಾವಿಲ್ಲ. ಎಂದೆಂದೂ ಅಜರಾಮರ. ●

ಝೆನ್ ಎಂದರೆ ! ? ...

ಝೆನ್ ಎನ್ನುವುದು ಬೌದ್ಧಮತದ ಒಂದು ಶಾಖೆ. ಭಾರತ ಮತ್ತು ನೇಪಾಳದಲ್ಲಿ ಬೌದ್ಧಮತದ ಬೇರುಗಳಿದ್ದರೂ ಇದು ಎರಡು ಸಾವಿರ ವರ್ಷಗಳಿಂದ ಜಗತ್ತಿನಾದ್ಯಂತ ಶಾಖೆಗಳನ್ನು ಬಿಟ್ಟಿದೆ. ಎಲ್ಲಾ ದೇಶಗಳ ಜನರ ಚಿಂತನೆ ಮತ್ತು ತರ್ಕಕ್ಕೆ ಸುಲಭವಾಗಿ ನಿಲುಕುವ ಕಾರಣಕ್ಕಾಗಿ ಬೌದ್ಧಮತ ತೀವ್ರವಾಗಿ ಬೆಳೆಯಿತು.

ಹೀಗೆ ವಿಸ್ತೃತವಾಗಿ ವ್ಯಾಪಿಸಿದ ಬೌದ್ಧಮತವು ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳ ಕಾರಣ ಕವಲುಗಳಾಗಿ ಬೆಳೆಯಿತು. ಮೂಲ ಸೆಲೆಯನ್ನು ಮರೆತು ಕೈಗೆ ಸಿಕ್ಕ ಯಾವುದೋ ಭ್ರಾಂತಿಯನ್ನೇ ಬೌದ್ಧಮತವೆಂದು ಭ್ರಮಿಸಿದವರ ಸಂಖ್ಯೆಯೇನೂ ಕಡಿಮೆಯಿಲ್ಲ. ಬುದ್ಧನನ್ನು ದೇವರ ಅವತಾರಗಳ ಪಟ್ಟಿಯಲ್ಲಿ ಸೇರಿಸುವ ಕಾರ್ಯವೂ ನಡೆಯಿತು.

ಈ ಎಲ್ಲಾ ಅನಪೇಕ್ಷಿತ ಬೆಳವಣಿಗೆಗಳ ನಡುವೆಯೂ ಬೌದ್ಧಮತವು ತನ್ನ ಪರಿಶುದ್ಧತೆಯನ್ನು ಕಾಪಾಡಿಕೊಂಡು ಬೆಳೆಯಿತು. ಜಗತ್ತಿನ ಪ್ರಚಂಡ ತರ್ಕಶಾಸ್ತ್ರಜ್ಞರು, ವಿಜ್ಞಾನಿಗಳು ಸಹ ಬೌದ್ಧಮತವನ್ನು ಮೆಚ್ಚಿಕೊಳ್ಳಲು ಕಾರಣವಿದೆ. ಬೌದ್ಧಮತವು ಅತ್ಯಂತ ವೈಜ್ಞಾನಿಕವಾದದ್ದು. ಕೇವಲ ಒಂದು ಜಾತಿ, ಜನಾಂಗ, ಭಾಷೆ, ಒಂದು ದೇಶಕ್ಕೆ, ಒಂದು ಕಾಲಕ್ಕೆ ಸೀಮಿತವಾಗಿರದೇ ಸಕಲ ಜೀವರಾಶಿಗಳನ್ನು ಒಳಗೊಂಡು ಕಾಲಾತೀತವಾಗಿ ಇರುವ ಬೌದ್ಧಧರ್ಮವು ಎಲ್ಲ ಮನುಷ್ಯರನ್ನು ಧರ್ಮದ ನಿಜವಾದ ಅರ್ಥಹೀನ ಉನ್ನತಿಯ ಕಡೆಗೆ ಕರೆದೊಯ್ಯುತ್ತದೆ. ಝೆನ್ ಶಬ್ದದ ಮೂಲ ಸಂಸ್ಕೃತದ ಧ್ಯಾನ ಎಂದು ಹೇಳುತ್ತಾರೆ. ಸಂಸ್ಕೃತದ ಧ್ಯಾನ ಚೀನಾದಲ್ಲಿ ಚಾನ್ ಆಗಿ ಜಪಾನಿನಲ್ಲಿ ಝೆನ್ ಆಯಿತು ಎನ್ನುತ್ತಾರೆ. ಆದರೆ ಚಾನ್ ಮತ್ತು ಝೆನ್‌ಗಳ ಅಂತರಾಳವನ್ನು ಪ್ರವೇಶಿಸಿ ನೋಡಿದಾಗ ಇವು ಮೂರು ಸಹ ಬೇರೆ ಬೇರೆ ಎಂಬುದು ಗೊತ್ತಾಗುತ್ತದೆ.

ಜಪಾನಿನ ಎಲ್ಲ ಸಾಂಸ್ಕೃತಿಕ ವಲಯದಲ್ಲಿಯೂ ಝೆನ್ ಪ್ರಭಾವವಿದೆ. ಹನ್ನೆರಡನೆಯ ಶತಮಾನದಲ್ಲಿ ಜಪಾನಿನಲ್ಲಿ ಇದು ಬೇರು ಬಿಟ್ಟಿತಾದರೂ ಅದಕ್ಕೂ ಹಿಂದೆ ಐನೂರು ವರ್ಷಗಳ ಕಾಲ ಚೀನಾದಲ್ಲಿ ಪ್ರಮುಖ ತತ್ವಶಾಸ್ತ್ರೀಯ ಮತ್ತು ಧಾರ್ಮಿಕ ಚಳುವಳಿಯಾಗಿತ್ತು. ಪ್ರೊಫೆಸರ್ ಡಿ.ಟಿ. ಸುಝುಕಿಯವರು ಝೆನ್ ಕುರಿತು ಬರೆದ ವಿಪುಲವಾದ ಸಾಹಿತ್ಯದಿಂದಾಗಿ ಈಗ ಝೆನ್ ಜಗತ್ಪ್ರಸಿದ್ಧವಾಗಿದೆ.

ಝೆನ್ ಎನ್ನುವುದರ ಅರ್ಥ ಸುಲಭ ಗ್ರಾಹ್ಯವಲ್ಲ. ಭಾಷೆ, ಓದು, ಇವುಗಳ ಮೂಲಕ ಇದನ್ನು ಕಲಿಸುತ್ತಾರೆ. ಕೆಲವೊಮ್ಮೆ ಕಲಿಕೆಯ ವಿಧಾನವಾಗಿ ಸಣ್ಣ ಪುಟ್ಟ ಕಥೆಗಳು, ಒಗಟು, ಕವಿತೆಗಳನ್ನು ಬಳಸುವುದುಂಟು. ಚಿಂತೆಯ ತುದಿಯನ್ನು ತಲುಪಿ, ಅದರ ಆಚೆಗೂ ಹೊರಟವರ ಆಧ್ಯಾತ್ಮಿಕ ಅನುಭವಗಳು ಝೆನ್‌ಗೆ ಅಡಿಪಾಯ. ಝೆನ್‌ನ್ನು ಒಂದು ಮಾಸಿಕ ವೇದಿಕೆಯಾಗಿ ಭಾವಿಸುವ ಶಿಷ್ಯನು, ತನ್ನ ಗುರುವಿನ ದರ್ಶನದಲ್ಲಿ ಅನಿರ್ದಿಷ್ಟದೆಡೆಗೆ, ಅನಿಶ್ಚಿತತೆಯ ಕಡೆಗೆ ಹಾರಿ, ತನ್ನ ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುತ್ತಾನೆ. ಹಾಗೆ ಆದಾಗ ತಾನೂ ಕೇವಲ ತಾನೊಬ್ಬನೇ ಆಗಿರದೇ ಎಲ್ಲರೂ ಆಗಿ ಕಾಣುತ್ತಾನೆ. ಇದನ್ನೇ ಬುದ್ಧಚಿತ್ತ ಎನ್ನಲಾಗಿದೆ.

ಬೌದ್ಧಮತದ ಅಂತಃಸಾರವೆಲ್ಲಾ ಝೆನ್‌ನಲ್ಲಿ ಕೆನೆಗಟ್ಟಿದೆ. ಝೆನ್ ಮುಖಾಂತರ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆಯುವುದೆಂದರೆ ಅದು ಕೇವಲ ಗ್ರಾಂಥಿಕ ಸಾಹಿತ್ಯಕ್ಕೆ ಅಥವಾ ಗುರುಗಳ ಉಪನ್ಯಾಸಕ್ಕೆ ಸೀಮಿತವಾಗಿರುವುದಿಲ್ಲ. ವ್ಯಕ್ತಿಗತ ಅನುಭವ ಮತ್ತು ಅಂತರ್‌ದೃಷ್ಟಿ ಮುಖಾಂತರ ಸಾಧನೆಯ ಪಥದಲ್ಲಿ ಮುಂದೆ ಮುಂದೆ ಸಾಗುತ್ತಾನೆ. ಇಂತಹ ಪ್ರಕ್ರಿಯೆಯಲ್ಲಿ ಶಬ್ದಗಳ, ವಾಕ್ಯಗಳ, ಉಪನ್ಯಾಸಗಳ ಅಗತ್ಯವೇ ಬೀಳುವುದಿಲ್ಲ.

ಚಳಿ ಏನೆಂಬುದನ್ನು ಕುರಿತಂತೆ ಪ್ರಶ್ನಿಸಿದಾಗ ಕೆಲವು ಗ್ರಾಂಥಿಕ ಜ್ಞಾನವನ್ನು ಪಡೆದ ಎಲ್ಲರೂ ಚಳಿಯನ್ನು ಉಷ್ಣತೆ ಇಲ್ಲದಿರುವಿಕೆ ಅಥವಾ ಇಂತಿಷ್ಟು ಡಿಗ್ರಿ ಸೆಲ್ಸಿಯಸ್ ಎಂಬ ಜಾಣ ಉತ್ತರ ನೀಡುತ್ತಾರೆ.

ಇದೇ ಪ್ರಶ್ನೆ ಎದುರಾದಾಗ ಝೆನ್ ಪಥದಲ್ಲಿರುವವನು ಚಳಿಯ ನೇರ ಅನುಭವ ಪಡೆಯುತ್ತಾನೆ. ಹೀಗೆ ಸಾಗುವ ಕಲಿಕೆ ಎಲ್ಲಿಯೂ ದಾರಿ ತಪ್ಪದೇ ಗುರಿಯನ್ನು ಮುಟ್ಟಿಸುತ್ತದೆ.

ಮರ ಎಂಬ ಶಬ್ದವನ್ನು ಬರೆದರೆ ಅದು ಯಾವುದೋ ಒಂದು ಮರದ ನಿರ್ದೇಶನವನ್ನಷ್ಟೆ ನೀಡುತ್ತದೆ. ಅದಕ್ಕೆ ಇರುವ ಅರ್ಥ ಸೀಮಿತವಾದದ್ದು. ಇದಕ್ಕೆ ಬದಲು ಒಂದು ಮರದ ಚಿತ್ರವನ್ನು ಬರೆದರೆ ಆಗಲೂ ಯಾವುದೋ ಒಂದು ನಿರ್ದಿಷ್ಟವಾದ ಮರದ ಕಲ್ಪನೆ ಮೂಡುತ್ತದೆ. ಝೆನ್

ಬೌದ್ಧಮತವು ಅತ್ಯಂತ ವೈಜ್ಞಾನಿಕವಾದದ್ದು. ಕೇವಲ ಒಂದು ಜಾತಿ, ಜನಾಂಗ, ಭಾಷೆ, ಒಂದು ದೇಶಕ್ಕೆ, ಒಂದು ಕಾಲಕ್ಕೆ ಸೀಮಿತವಾಗಿರದೇ ಸಕಲ ಜೀವರಾಶಿಗಳನ್ನು ಒಳಗೊಂಡು ಕಾಲಾತೀತನಾಗಿ ಇರುವ ಬೌದ್ಧಧರ್ಮವು ಎಲ್ಲ ಮನುಷ್ಯರನ್ನು ಧರ್ಮದ ನಿಜವಾದ ಅರ್ಥಹೀನ ಉನ್ನತಿಯ ಕಡೆಗೆ ಕರೆದೊಯ್ಯುತ್ತದೆ. ಬೌದ್ಧ ಮತದ ಅಂತಃಸಾರವೆಲ್ಲಾ ಝೆನ್‌ನಲ್ಲಿ ಕೆನೆಗಟ್ಟಿದೆ. ಝೆನ್ ಮುಖಾಂತರ ಆಧ್ಯಾತ್ಮಿಕ ಶಿಕ್ಷಣವನ್ನು ಪಡೆಯುವುದೆಂದರೆ ಅದು ಕೇವಲ ಗ್ರಾಂಥಿಕ ಸಾಹಿತ್ಯಕ್ಕೆ ಅಥವಾ ಗುರುಗಳ ಉಪನ್ಯಾಸಕ್ಕೆ ಸೀಮಿತವಾಗಿರುವುದಿಲ್ಲ. ವ್ಯಕ್ತಿಗತ ಅನುಭವ ಮತ್ತು ಅಂತರ್‌ದೃಷ್ಟಿ ಮುಖಾಂತರ ಸಾಧನೆಯ ಪಥದಲ್ಲಿ ಮುಂದೆ ಮುಂದೆ ಸಾಗುತ್ತಾನೆ. ಇಂತಹ ಪ್ರಕ್ರಿಯೆಯಲ್ಲಿ ಶಬ್ದಗಳ, ವಾಕ್ಯಗಳ, ಉಪನ್ಯಾಸಗಳ ಅಗತ್ಯವೇ ಬೀಳುವುದಿಲ್ಲ.

ಪಥದಲ್ಲಿರುವವನು ಮರವೆಂದ ಕೂಡಲೇ ಸ್ವತಃ ಮರದ ಅನುಭವವನ್ನು ಅನುಭವಿಸುತ್ತಾನೆ. ಹಾಗೆ ಅನುಭವ ಕೇಂದ್ರಿತವಾದ, ಅಂತರ್‌ದೃಷ್ಟಿ ಕೇಂದ್ರಿತವಾದ ಕಲಿಕೆಯಿಂದ ಅತಿ ಸಂಕ್ಷಿಪ್ತ ಅವಧಿಯಲ್ಲಿ ಕಲಿಕೆಯ ಮೆಟ್ಟಿಲುಗಳನ್ನು ಏರುತ್ತಾ ಹೋಗಬಹುದು. ●

ಬ್ರಾಹ್ಮಣವಾದದ ವಿರುದ್ಧ ಧರ್ಮ ಯುದ್ಧ

○ ಬಾಬು ಜಗಜೀವನರಾಂ



1937 ರಿಂದ 1977ರವರೆಗೆ ಕಾಂಗ್ರೆಸ್ಸಿನಲ್ಲಿ ತಮ್ಮ ರಾಜಕೀಯ ಜೀವನದ ಬಹುಭಾಗ ಕಳೆದ ಜಗಜೀವನರಾಂ, ಅಲ್ಲೂ ಉಸಿರುಗಟ್ಟುವ ವಾತಾವರಣ ನಿರ್ಮಾಣವಾದಾಗ 'ಪ್ರಜಾಪ್ರಭುತ್ವಕ್ಕಾಗಿ ಕಾಂಗ್ರೆಸ್' (Congress For Democracy-CFD) ಸ್ಥಾಪಿಸಿದರು. 1977ರಲ್ಲಿ ಇದನ್ನು ಜನತಾಪಕ್ಷದಲ್ಲಿ ವಿಲೀನಗೊಳಿಸಿದರು. ಆಗಲೇ ಅವರು ಪ್ರಧಾನಿ ಹುದ್ದೆಗೆ ಸ್ಪರ್ಧಿಸಿಯಾಗಿದ್ದರು; ಆದರೆ ಅಂದಿನ ರಾಜಕೀಯ ಒಳಸುಳಿಯಿಂದಾಗಿ ಆಗ ಮೊರಾರ್ಜಿ ದೇಸಾಯಿ ಪ್ರಧಾನಿಯಾದರು. 1980ರಲ್ಲಿ ಮತ್ತೆ ಮಧ್ಯ ಕಾಲೀನ ಚುನಾವಣೆ ಘೋಷಣೆಯಾದಾಗ, ಗೆದ್ದಲ್ಲಿ ಜಗಜೀವನರಾಂರನ್ನೇ ಪ್ರಧಾನಿಯಾಗಿಸುವ ಘೋಷಣೆಯನ್ನು ಜನತಾ ಪಕ್ಷ ಮಾಡಿತು. ಆದರೆ ಆ ಚುನಾವಣೆಯಲ್ಲಿ ಜನತಾ ಪಕ್ಷ ದಯನೀಯ ಸೋಲು ಅನುಭವಿಸಿತು; ಕಾಂಗ್ರೆಸ್ ಗೆದ್ದು ಇಂದಿರಾಗಾಂಧಿ ಮತ್ತೆ ಪ್ರಧಾನಿಯಾದರು. ಕಾಂಗ್ರೆಸ್‌ನಿಂದ ಸಂಪೂರ್ಣವಾಗಿ ಭ್ರಮನಿರಸನಗೊಂಡಿದ್ದ ಜಗಜೀವನರಾಂ, ಮುಂದಿನ ಆರು ವರ್ಷ ಪಟ್ಟಭದ್ರ ವ್ಯವಸ್ಥೆಯ ವಿರೋಧಿ ದನಿಯಾಗಿ ನಿಂತರು. ಈ ಕಾಲದಲ್ಲಿ ಅವರು ನೀಡಿದ ಅತ್ಯಂತ ಮಹತ್ವದ ಒಂದು ಸಂದರ್ಶನ ಕಲ್ಕತ್ತಾದಿಂದ ಪ್ರಕಟವಾಗುವ Sunday ಇಂಗ್ಲೀಷ್ ಪತ್ರಿಕೆಯಲ್ಲಿ Launch a Jehad against Brahminism ಎಂಬ ಹೆಸರಿನಲ್ಲಿ ಸುಮಾರು 20 ವರ್ಷಗಳ ಹಿಂದೆ ಪ್ರಕಟವಾಯಿತು.

ಈ ಸಂದರ್ಶನದಲ್ಲಿ ಅವರು ವ್ಯಕ್ತಪಡಿಸಿದ ವಿಚಾರಗಳ ಸಂಗ್ರಹಾನುವಾದ ಇಲ್ಲಿದೆ. ಈ ಬರಹ ಬಾಬು ಜಗಜೀವನರಾಂರ ವಿಶೇಷ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಕೃಪೆ : ಸಮಾಜವಾದಿ ಮಾತುಕತೆ

☆ 1980ರಲ್ಲಿ ನಡೆದ ಮಧ್ಯಂತರ ಲೋಕಸಭಾ ಚುನಾವಣೆ ಮುನ್ನ ನನ್ನನ್ನು ಭಾವಿ ಪ್ರಧಾನಿ ಎಂದು ಘೋಷಿಸಲಾದ ಕಾರಣಕ್ಕೇನೆ ಜನತಾ ಪಕ್ಷವನ್ನು ಸೋಲಿಸಲಾಯಿತು. ಆವರೆಗೆ ಜನತಾ ಪಕ್ಷದೊಂದಿಗಿದ್ದ ಮಾಜಿ ಜನಸಂಘೀಯರು ಹಾಗೂ RSSನವರು ಈ ಅಂಶವನ್ನು ಹಠ ಹಿಡಿದು ವಿರೋಧಿಸಿದರು. ಜಾತಿ ಕಾರಣಕ್ಕೇನೇ ಇವರು ದ್ರೋಹ ಬಗೆದರು. ನಮ್ಮ ಪಕ್ಷದಲ್ಲೇ ಹಲವರು ಉದ್ದೇಶಪೂರ್ವಕವಾಗಿ ಪಕ್ಷದ ಅಭ್ಯರ್ಥಿಗಳನ್ನು ಸೋಲಿಸಲು ಶ್ರಮಿಸಿದರು.

☆ ನಾನು ಜನತಾ ಪಕ್ಷ ತೊರೆದಿದ್ದಕ್ಕೆ ಕಾರಣ RSS. ಏಕೆಂದರೆ ಪಕ್ಷದ ಮೇಲೆ ಇವರದೇ ಪರೋಕ್ಷ ಹತೋಟಿ. ಇಂಥ ಪಕ್ಷದಲ್ಲಿ ನಾನೇಕಿರಬೇಕು?

☆ ಜಾತೀಯತೆ ಭಾರತೀಯ ರಾಜಕಾರಣದಲ್ಲಿ ಎಂದಿನಿಂದಲೂ ಇದೆ. 1937ರಿಂದ ಅದರ ಹಾವಳಿಯನ್ನು ನಾನು ಚೆನ್ನಾಗಿ ಬಲ್ಲೆ. ಜನತಾ ಪಕ್ಷದ ಕಾಲದಲ್ಲೂ ಅದು ಅಷ್ಟೇ ಜೀವಂತವಾಗಿದೆ.

ಜನತಾ ಪಕ್ಷ, ಕಾಂಗ್ರೆಸ್ ಪಕ್ಷ ಹಾಗಿರಲಿ, ತಾವು ತತ್ವ-ಸಿದ್ಧಾಂತ ಬಿಟ್ಟು ಇಂಚು ದೂರ ಕೂಡ ಹೋಗುವವರಲ್ಲ ಎಂದು ಹೇಳಿಕೊಳ್ಳುವ ಕಮ್ಯುನಿಸ್ಟರು ಕೂಡ ಈ ಜಾತೀಯತೆಯ ವಿಷಚಕ್ರದಲ್ಲಿ ಸಿಕ್ಕಿ ಬಿದ್ದಿದ್ದಾರೆ. ಚುನಾವಣೆ ಗೆಲ್ಲಲು ಜಾತಿಯತೆ ಮಾಡಲೇಬೇಕಾಗುತ್ತದೆ ಎಂದು ಅವರೂ ಖಾಸಗಿಯಾಗಿ ನನ್ನಲ್ಲಿ ಹೇಳಿಕೊಂಡಿದ್ದುಂಟು.

ಜನತಾಪಕ್ಷ ಅಧಿಕಾರಕ್ಕೆ ಬಂದಾಗ ಮೊದಲ ಬಾರಿಗೆ ಹಲವರು ಅಧಿಕಾರಕ್ಕೆ ಬಂದರು. ಇವರ ಪೈಕಿ ಹಿಂದುಳಿದ ವರ್ಗಗಳವರು ಹೆಚ್ಚು ಜನ.

☆ ಚರಣ್‌ಸಿಂಗ್ ಒಬ್ಬರೇ ಜಾತಿವಾದಿ ಏನಲ್ಲ. ರಾಜಕಾರಣದಲ್ಲಿ ಜಾತೀಯತೆ ಮಾಡದವರೇ ಇಲ್ಲ ಎನ್ನಬಹುದು. ಜವಾಹರಲಾಲ್ ನೆಹರೂ, ರಾಜೇಂದ್ರಪ್ರಸಾದ್, ಸರ್ದಾರ್ ವಲ್ಲಭಭಾಯಿ ಪಟೇಲ್, ಗೋವಿಂದ ವಲ್ಲಭಪಂತ್, ಚಂದ್ರಶೇಖರ್, ಇಂದಿರಾಗಾಂಧಿ ಮುಂತಾದವರೆಲ್ಲರೂ ಬಹುತೇಕವಾಗಿ ಜಾತೀಯತೆಯನ್ನು ವಾಸ್ತವವಾಗಿ ಪೋಷಿಸಿದವರೇ. ಇವರಲ್ಲಿ ಬಹುಪಾಲು ಜನ ಬ್ರಾಹ್ಮಣರು.

☆ ನನಗೆ ಬ್ರಾಹ್ಮಣರ ಬಗ್ಗೆ ಕೋಪ ಎಂದು ಆರೋಪಿಸಲಾಗುತ್ತದೆ. ನನಗೆ ಕೋಪ ಇರುವುದು ಬ್ರಾಹ್ಮಣರ ಮೇಲಲ್ಲ. ನನ್ನ ಎಲ್ಲಾ ಕೋಪ ಇರುವುದು ಬ್ರಾಹ್ಮಣವಾದದ ಮೇಲೆ. ಬ್ರಾಹ್ಮಣರ ಮೇಲೆ ಖಂಡಿತಾ ಅಲ್ಲ.

ಬ್ರಾಹ್ಮಣವಾದ-ಬ್ರಾಹ್ಮಣ ಜಾತಿ ಜನ ಒಂದೇ ಅಲ್ಲ. ಬ್ರಾಹ್ಮಣರನ್ನೆಲ್ಲರನ್ನು ಹೊರಗಿಟ್ಟರೂ, ಭಾರತದಲ್ಲಿ ಬ್ರಾಹ್ಮಣವಾದ ಅಸ್ತಿತ್ವದಲ್ಲಿರುತ್ತದೆ. ಏಕೆಂದರೆ ಬ್ರಾಹ್ಮಣವಾದ ಬ್ರಾಹ್ಮಣೇತರರನ್ನೂ ಆವರಿಸಿಕೊಂಡಿದೆ.

ಚರಣ್‌ಸಿಂಗ್ ಹಿಂದುಳಿದ ವರ್ಗಗಳ ನಾಯಕರು. ಅವರ ಪಕ್ಷ-ಭಾರತೀಯ ಲೋಕ ದಳ-ಹಿಂದುಳಿದ ವರ್ಗಗಳ ಆಶೋತ್ತರಗಳನ್ನು ಈಡೇರಿಸುವ ಮಾತಾಡುತ್ತದೆ. ಆದರೆ ಇವರ ಕೈಗೆ ಅಧಿಕಾರ ಬಂದಾಗ, ಭಾರತದ ಲಕ್ಷಾಂತರ ದಲಿತರ ಮೇಲೆ ಹಲ್ಲೆ-ದೌರ್ಜನ್ಯಗಳು ನಡೆದವು.

ಬ್ರಾಹ್ಮಣವಾದದ ತಾಯಿಬೇರು ಬ್ರಾಹ್ಮಣರಿಂದಲೇ ಹುಟ್ಟಿರೋದಾದರೂ, ಕ್ರಮೇಣ ಈ ವಿಷ ಇತರ ಜಾತಿಗಳಿಗೂ ಹಬ್ಬಿದೆ.

☆ ದಲಿತ ವರ್ಗಗಳ ಪ್ರಧಾನ ಶತೃ ಬ್ರಾಹ್ಮಣರೋ? ಬ್ರಾಹ್ಮಣೇತರರೋ? ಎಂಬ ಪ್ರಶ್ನೆಗೆ ಸರಳವಾದ ಉತ್ತರ ಕಂಡುಕೊಳ್ಳುವುದು ಕಷ್ಟ. ದಲಿತರು ತಮ್ಮ ಹಕ್ಕುಗಳಿಗಾಗಿ ದನಿ ಎತ್ತಿದರೆ ಎಲ್ಲರೂ ಅವರನ್ನು ಸದೆ ಬಡಿಯುವವರೇ. ನ್ಯಾಯವಾದ ಕೂಲಿ ಕೇಳಿದರೆ, ಸಂವಿಧಾನ ಬದ್ಧ ಹಕ್ಕುಗಳಿಗೆ ಒತ್ತಾಯಿಸಿದರೆ ದಲಿತರನ್ನು ದಮನ ಮಾಡಲಾಗುತ್ತದೆ. ಸರ್ಕಾರದಿಂದ ತಮಗೆ ಮಂಜೂರಾದ ಭೂಮಿ ಮೇಲೆ ಹಕ್ಕು ಹೊಂದಲೂ ಕೂಡ ದಲಿತರು ರಕ್ತಹರಿಸಬೇಕಾಗಿದೆ. ದಲಿತರು ತಮ್ಮ ಸ್ವಸಾಮರ್ಥ್ಯ ಹಾಗೂ ಕಠಿಣ ಪರಿಶ್ರಮದಿಂದ ಉನ್ನತಿ ಸಾಧಿಸಿದರೂ ಇತರರ ಕೆಂಗಣ್ಣಿಗೆ ಗುರಿಯಾಗುತ್ತಾರೆ. ದಲಿತರು ತಮಗಿಷ್ಟವಾದ ಧರ್ಮವನ್ನು ಸ್ವೀಕರಿಸಿದರೂ ಹಲ್ಲೆಗೆ ಗುರಿಯಾಗುತ್ತಾರೆ. ದಲಿತರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸ್ವತಂತ್ರರಾದರೆ ತಮ್ಮ ಹಿತಾಸಕ್ತಿಗೆ ಧಕ್ಕೆ ಉಂಟಾಗುತ್ತದೆ ಎಂದು ಬ್ರಾಹ್ಮಣರೂ ಭಾವಿಸಿದ್ದಾರೆ; ಬ್ರಾಹ್ಮಣೇತರರೂ ಭಾವಿಸಿದ್ದಾರೆ.

ಈ ಹಿನ್ನೆಲೆಯಲ್ಲೇ ನಾನು ಬ್ರಾಹ್ಮಣವಾದದ ವಿರುದ್ಧ ಧರ್ಮಯುದ್ಧ (ಜೆಹಾದ್) ಘೋಷಿಸಬೇಕೆಂದು ದಲಿತರಿಗೆ ಕರೆ ನೀಡಿದೆ. ಆದರೆ ಪತ್ರಿಕೆಗಳು ಬ್ರಾಹ್ಮಣವಾದದ ಹಿಡಿತದಲ್ಲಿರುವ ಕಾರಣ, 'ಬ್ರಾಹ್ಮಣರ ವಿರುದ್ಧ ಜೆಹಾದ್‌ಗೆ ಬಾಬು ಜಗಜೀವರಾಂ ಕರೆ' ಎಂಬ ಶಿರೋಬರಹದಲ್ಲಿ ಸುದ್ದಿ ಪ್ರಕಟಿಸಿದವು. ಎಲ್ಲಾ ಪತ್ರಿಕೆಗಳ ಬಹುತೇಕ ಸಂಪಾದಕರು, ವಿಶೇಷ

ವರದಿಗಾರರು, ಸಲಹೆಗಾರರು, ವರದಿಗಾರರು ಬ್ರಾಹ್ಮಣರೇ. ಬ್ರಾಹ್ಮಣವಾದದ ಇತಿಶ್ರೀ ಆದಲ್ಲಿ ಇವರೆಲ್ಲಾ ಅಧಿಕಾರಹೀನರಾಗಿ ಬಿಡುತ್ತಾರೆ.

ಆದರೆ ಒಂದು ಮಾತು ಮಾತ್ರ ಸತ್ಯ. ಬ್ರಾಹ್ಮಣವಾದ ಬೇರೂರಿ ನಿಂತಿರುವವರೆಗೆ ಭಾರತಕ್ಕೆ ಬಿಡುಗಡೆಯಿಲ್ಲ. ಬ್ರಾಹ್ಮಣವಾದ ಭಾರತವನ್ನು ಸರ್ವನಾಶ ಮಾಡುತ್ತಲೇ ಬಂದಿದೆ. ಇದು ದಲಿತರನ್ನಷ್ಟೇ ಅಲ್ಲ. ಎಲ್ಲಾ ಬ್ರಾಹ್ಮಣೇತರರನ್ನೂ ಹಿಮ್ಮೆಟ್ಟಿಸಿದೆ; ಎಲ್ಲಾ ಬ್ರಾಹ್ಮಣೇತರರಲ್ಲಿ ಕೀಳರಿಮೆಯನ್ನು ಬೇರೂರಿಸಿದೆ.

ಮೇಲರಿಮೆ ಮತ್ತು ಹೀಳರಿಮೆಗಳು ನಾಶವಾಗದೆ ಮನುಷ್ಯರ ಮನಸ್ಸು ತಿಳಿಯಾಗಲಾರದು; ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಸಾಧ್ಯವಾದಾಗಲೇ ಸಮಾಜವಾದಿ ಸಮಾಜ ಸ್ಥಾಪನೆಯಾಗುವುದು. ಆದರೆ, ವಿದ್ಯಾವಂತರೂ, ಸುಸಂಸ್ಕೃತರೂ, ಆರ್ಥಿಕವಾಗಿ ಮೇಲ್‌ಸ್ತರಕ್ಕೆ ಬಂದವರೂ ಆದ ಬ್ರಾಹ್ಮಣೇತರರ ಬಳಿ ಕೆಲಸಕ್ಕಿರುವ ಬಡ, ಅವಿದ್ಯಾವಂತ ಬ್ರಾಹ್ಮಣರೂ ಕೂಡ ತಾವೇ ಮೇಲ್‌ಜಾತಿಯವರೆಂದೂ, ತಮ್ಮ ಯಜಮಾನರೇ ಕೀಳು ಜಾತಿಯವರೆಂದೂ ನಂಬಿದ್ದಾರೆ.

ಬಹುತೇಕವಾಗಿ ಈ ಯಜಮಾನರು ಕೂಡ ತಾವು ಕೀಳುಜಾತಿಯವರೆಂಬ ಭಾವನೆಯನ್ನು ಮನಸ್ಸಿನಲ್ಲಿ ತುಂಬಿಕೊಂಡಿದ್ದಾರೆ. ಇದೇ ಬ್ರಾಹ್ಮಣವಾದ. ಈ ವಿಷಯ ಬಹುತೇಕ ಎಲ್ಲಾ ಜಾತಿಯವರ ಮೆದುಳನ್ನು ಹೊಕ್ಕಿದೆ. ಹುಟ್ಟಿನ ಆಧಾರದಲ್ಲಿ ಸ್ಥಾನಮಾನ ನಿರ್ಣಯವಾಗುವುದನ್ನು ತಿರಸ್ಕರಿಸಲೇಬೇಕಾಗುತ್ತದೆ. ಈ ನಿಲುವನ್ನು ಒಪ್ಪದಿರುವುದೇ ಬ್ರಾಹ್ಮಣವಾದ.

ಬ್ರಾಹ್ಮಣವಾದದ ನೀಚತನ ಬ್ರಾಹ್ಮಣ ಜಾತಿ ಸ್ವಾಮಿಗಳ ಮೂಲಕ ಈಚೆಗೆ ವ್ಯಕ್ತವಾಯಿತು. ಮೀನಾಕ್ಷಿಪುರಂನಲ್ಲಿ ದಲಿತರು ಮತಾಂತರ ಹೊಂದಿದಾಗ ಇವರು, ದಲಿತರು ತಮ್ಮನ್ನು ಮಾರಿಕೊಂಡಿದ್ದಾರೆ ಎಂದು ಘೋಷಿಸಿದರು. ಇದು ಅತ್ಯಂತ ಕೊಳಕು ಪ್ರವೃತ್ತಿ.

ದಲಿತರು ಧರ್ಮದಲ್ಲಿದ್ದಾಗಲೂ ಅವರನ್ನು ಅವಮಾನಿಸಲಾಗುತ್ತದೆ; ದಲಿತರು ಧರ್ಮ ತ್ಯಜಿಸಿದರೂ ಅವರನ್ನು ಅವಮಾನಿಸಲಾಗುತ್ತದೆ. ಈ ಬ್ರಾಹ್ಮಣ ಜಾತಿ ಸ್ವಾಮಿಗಳ ಪಾಲಿಗೆ ದಲಿತರೆಂದರೆ ಮಾರಾಟದ ವಸ್ತುಗಳೇನು? ಇನ್ನೊಬ್ಬರನ್ನು ಶೋಷಿತ ಸ್ಥಿತಿಯಲ್ಲಿಡುವ ಹಾಗೂ ಅವಮಾನಿಸುವ ನೀಚತನವನ್ನು ಮೊಳಕೆಯೊಡೆಸುವುದು ಬ್ರಾಹ್ಮಣ ವಾದವೇ.

☆ ಮೀಸಲಾತಿ ಹೊಸ ನಿಯಮವೇನಲ್ಲ. ನಮ್ಮ ಹಿಂದಿನ ಸಮಾಜ ವ್ಯವಸ್ಥೆಯನ್ನು ಪರಿಶೀಲಿಸಿದರೆ, ಕೆಲವೊಂದು ಸ್ಥಾನಗಳು-ಉದಾಹರಣೆಗೆ ಅರ್ಚಕ ವೃತ್ತಿ, ಭೂ ಒಡೆತನದ ಹಕ್ಕು, ದೇವಸ್ಥಾನದ ಜಮೀನಿನ ಉಸ್ತುವಾರಿ ಕೆಲಸ ಇತ್ಯಾದಿ-ಬರೀ ಬ್ರಾಹ್ಮಣರಿಗೆ ಸೇರಿದ್ದವು. ಇದು ಮೀಸಲಾತಿಯಲ್ಲವೇನು?

ಇಂಥ ಮೀಸಲಾತಿಯಿಂದ ಆಗಿರುವ ಅನ್ಯಾಯವನ್ನು ನಿವಾರಿಸಲು, ದುರ್ಬಲರಿಗೆ ಸಹಕಾರಿಯಾಗುವಂಥ ಮೀಸಲಾತಿ ನೀತಿಯನ್ನು ನಮ್ಮ ಸಂವಿಧಾನ ಜಾರಿಗೊಳಿಸಿದೆ. ಇದನ್ನು ಪ್ರತಿಯೊಬ್ಬ ಪ್ರಜ್ಞಾವಂತರೂ ಸ್ವಾಗತಿಸಲೇಬೇಕು.

☆ ಬ್ರಾಹ್ಮಣವಾದವನ್ನು ನಿರ್ಮೂಲನೆಗೊಳಿಸುವ ಮಾರ್ಗವೆಂದರೆ ಬ್ರಾಹ್ಮಣವಾದಿ ನಂಬಿಕೆ, ವಿಧಿ-ವಿಧಾನಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದೇ ಆಗಿದೆ. ಬ್ರಾಹ್ಮಣರನ್ನು ದೇವಸಮಾನರೆಂದು ತಿಳಿಯುವುದನ್ನು ಮೊದಲು ನಾವು-ಬ್ರಾಹ್ಮಣೇತರರು-ನಿಲ್ಲಿಸಬೇಕು. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಯಾರೂ ಗೌರವಾರ್ಹರಾಗುವುದಿಲ್ಲ ಎಂಬುದನ್ನು ಸಾರುವ ಜನಜಾಗೃತಿ ಕೆಲಸ ನಡೆಯಬೇಕು. ಸಂತೋಷದ ಅಥವಾ ದುಃಖದ ಯಾವುದೇ ಸಂದರ್ಭದಲ್ಲಿ ಬ್ರಾಹ್ಮಣರನ್ನು ಆಹ್ವಾನಿಸಿ, ಅವರಿಗೆ ವಿಶೇಷ ಮನ್ನಣೆ ನೀಡುವ ಪ್ರವೃತ್ತಿಯನ್ನು ನಾವು-ಬ್ರಾಹ್ಮಣೇತರರು-ಧಿಕ್ಕರಿಸಬೇಕು.

ವ್ಯಕ್ತಿಯ ಜಾತಿ ನೋಡಿ ಗೌರವಾದರವನ್ನು ವ್ಯಕ್ತಪಡಿಸದೇ ವ್ಯಕ್ತಿಯ ನೀತಿ, ನಡವಳಿಕೆ, ಚಾರಿತ್ರ್ಯ, ಗುಣಗಳನ್ನು ನೋಡಿ ಗೌರವಾದರವನ್ನು ವ್ಯಕ್ತಪಡಿಸಬೇಕು.

ದಕ್ಷಿಣ ಭಾರತದಲ್ಲಿ ಇದೇ ಆಶಯದಲ್ಲಿ ನಡೆದ ಚಳುವಳಿ 'ಸ್ವಾಭಿಮಾನ ಚಳುವಳಿ' ಎಂದು ಖ್ಯಾತಿ ಪಡೆದಿದ್ದು, ಇದು ದಶಕಗಳ ಇತಿಹಾಸವನ್ನು ಹೊಂದಿದೆ. ದಲಿತರು, ಹಿಂದುಳಿದವರು, ಮೇಲ್ಜಾತಿಗಳಲ್ಲಿ ಹುಟ್ಟಿದ್ದರೂ ಪ್ರಗತಿಪರ ಚಿಂತನೆ ಉಳ್ಳವರು-ಎಲ್ಲರೂ ಈ ದಿಕ್ಕಿನಲ್ಲಿ ಹೆಜ್ಜೆ ಹಾಕಬೇಕು.

☆ ದಲಿತರ ಮೇಲಿನ ದೌರ್ಜನ್ಯಗಳು ಕೊನೆಗೊಳ್ಳಬೇಕಾದರೆ ಹಲವು ದಿಕ್ಕುಗಳಲ್ಲಿ ಪ್ರಯತ್ನಗಳು ನಡೆಯಬೇಕು. ದಲಿತರ ಮೇಲೆ ದೌರ್ಜನ್ಯ ನಡೆದಾಗ ಅಂಥ ಪ್ರಕರಣಗಳಲ್ಲಿ ತುರ್ತು ಹಾಗೂ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ದಲಿತರನ್ನು ಆರ್ಥಿಕವಾಗಿ ಸಶಕ್ತರನ್ನಾಗಿಸಬೇಕು. ವಿಶೇಷವಾಗಿ ಉ. ಭಾರತದಲ್ಲಿ ಲಕ್ಷಾಂತರ ಜನ ಕಾನೂನುಬಾಹಿರವಾಗಿ ಶಸ್ತ್ರಾಸ್ತ್ರಗಳನ್ನಿಟ್ಟುಕೊಂಡಿದ್ದಾರೆ; ಇವುಗಳನ್ನು ಸರ್ಕಾರ ಕಿತ್ತುಕೊಳ್ಳಬೇಕು. ಇದಕ್ಕೆಲ್ಲ ರಾಜಕೀಯ ಇಚ್ಛಾಶಕ್ತಿ ಬೇಕು ಕಾಂಗ್ರೆಸ್ ಪಕ್ಷದ ಒಳ-ಹೊರಗನ್ನು ನಾನು ಬಲ್ಲೆ. ಅಲ್ಲೂ ಇಂಥ ಇಚ್ಛಾಶಕ್ತಿಯಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಒಂದೇ ದಾರಿಯಿದೆ. ಅದೇಂದರೆ ದಲಿತರು ಸಂಘಟಿತರಾಗುವುದು; ಶೋಷಣೆ-ದಮನಗಳನ್ನು ಎದುರಿಸಿ ನಿಲ್ಲುವುದು; ಸ್ವತಂತ್ರ-ಸ್ವಾವಲಂಬಿ ಹಾಗೂ ಆತ್ಮಗೌರವದ ಬದುಕಿಗಾಗಿ ಹೋರಾಡುವುದು. ●

ಅಂಬೇಡ್ಕರ್ ನುಡಿ

ದಲಿತ ವರ್ಗಗಳು ಮಾನವೀಯತೆಗಾಗಿ, ಆರ್ಥಿಕ ಸಮಾನತೆಗಾಗಿ ಒಗ್ಗಟ್ಟಿನಿಂದ ಅವಿಶ್ರಾಂತವಾಗಿ ಹೋರಾಟ ನಡೆಸಬೇಕು. ಇಡೀ ಮಾನವ ಜನಾಂಗವೇ ಕಣ್ತೆರೆಯುವಂತೆ ವಿಪ್ಲವ ಜ್ಯೋತಿಗಳನ್ನು ಬೆಳಗಿಸಬೇಕು. ನಿಮ್ಮ ಜೀವನದ ಒಳಿತು-ಕೆಡುಕುಗಳನ್ನು ನೀವು ಹುಟ್ಟುವ ಮುನ್ನವೇ ನಿರ್ಧಾರಿತವಾಗಿಬಿಟ್ಟಿವೆ ಎಂಬ ಮೂಢ ನಂಬಿಕೆಯನ್ನು ಕಿತ್ತೊಗೆಯಿರಿ. ನಿಮ್ಮ ಸುಖ-ದುಃಖ, ದಾರಿದ್ರ್ಯಗಳಿಗೆ ದೇವರು ಕಾರಣ ಅಲ್ಲವೇ ಅಲ್ಲ. ಅವುಗಳಿಂದ ಬಿಡುಗಡೆ ಇಲ್ಲ ಎಂಬ ನಿರಾಶೆ ಮಾತ್ರ ಬೇಡ. ಈ ತೆರನಾದ ಮೂಢನಂಬಿಕೆಗಳೇ ನೀವು ಶಾಶ್ವತ ಗುಲಾಮರಾಗಿರಲು ಕಾರಣ.

ಪ್ರಸ್ತುತ ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ನಾವು ಚೆದುರಿ ಹೋಗಿದ್ದೇವೆ. ಕೆಲವರು ವಿರೋಧ ಪಕ್ಷಗಳಲ್ಲಿದ್ದಾರೆ. ಅಂತಹ ನಾಯಕರಲ್ಲಿ ಬಹುಶಃ ನಾನೂ ಒಬ್ಬ. ಯಾವುದು ಹೇಗೇ ಇರಲಿ, ಪರಿಸ್ಥಿತಿ, ಕಾಲ ಕೂಡಿ ಬಂದಾಗ ಈ ದೇಶದಲ್ಲಿ ಏಕತೆ ಸಾಧಿಸುವಲ್ಲಿ ಜಗತ್ತಿನ ಯಾವ ಶಕ್ತಿಯೂ ಅಡ್ಡಿ ಬರದೆಂದು ನನ್ನ ನಂಬಿಕೆ. ವಿವಿಧ ಜಾತಿಗಳು, ಮತಗಳಿಂದ ಕೂಡಿದ ನಾವು ಏಕತೆಯಿಂದಿರುವ ಪ್ರಜೆಗಳು. ಇತರರ ದಯೆ, ಕೃಪೆಯ ಮೇಲೆ ಬದುಕುವುದು ನಾಚಿಕೆಗೇಡು. ಜೀವನದಲ್ಲಿ ಆತ್ಮಾಭಿಮಾನಕ್ಕಿಂತ ಬೆಲೆ ಬಾಳುವಂತಹದು ಬೇರೇ ಇಲ್ಲ. ಅದಿಲ್ಲದ ಮಾನವ ಜೀವಚ್ಛವದಂತೆ. ಆತ್ಮಾಭಿಮಾನದಿಂದ, ಗೌರವಪೂರ್ಣವಾಗಿ ಜೀವಿಸಲು ಕಷ್ಟ ಪರಂಪರೆಗಳನ್ನು ಎದುರಿಸಬೇಕಾಗುತ್ತೆ.

ಜಾತೀಯತೆ, ಅಸ್ಪೃಶ್ಯತೆ ಮತ್ತು ಕಾನೂನು



ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯದ ಆಧ್ಯಾತ್ಮಿಕ ಸ್ಥಾನಮಾನವನ್ನು ಹಿಂದೂ ಎಂದು ಗುರುತಿಸಿ, ನಂತರ ಅವರನ್ನು ಮಂದಿರ, ದೇವರು ಮತ್ತು ಪವಿತ್ರ ಗ್ರಂಥಗಳ ಪಾಲಿಗೆ ಅಸ್ಪೃಶ್ಯರೆಂದು ಪರಿಗಣಿಸುವ ಫ್ಯಾಸಿಸ್ಟ್ ಆಧ್ಯಾತ್ಮಿಕ ರೂಢಿಯನ್ನು ಸಂವೈಧಾನಿಕವಾಗಿ ಅಸ್ತಿತ್ವದಲ್ಲಿರುವ ಯಾವ ಕೋರ್ಟುಗಳೂ ಇದುವರೆಗೆ ಪ್ರಶ್ನಿಸಿಲ್ಲ. ಆಶ್ಚರ್ಯಕರ ಸಂಗತಿ ಎಂದರೆ, ಜಾತ್ಯಾತೀತ ಕಾಯ್ದೆ, ಸಂವಿಧಾನ ಮತ್ತು ಭಾರತೀಯ ಪ್ರಭುತ್ವಗಳು ಇಂಥ ಫ್ಯಾಸಿಸ್ಟ್ ಆಧ್ಯಾತ್ಮಿಕ ರೂಢಿಗಳಲ್ಲಿ ಹಸ್ತಕ್ಷೇಪ ಮಾಡಕೂಡದು ಎಂದು ಕಾನೂನು ಪಂಡಿತರಾಗಿರುವ ಅನೇಕ ಬ್ರಾಹ್ಮಣವಾದಿಗಳು ವಾದಿಸುತ್ತಾರೆ.

O ಪ್ರೊ. ಕಾಂಚ ಐಲಯ್ಯ

ಜಾತೀಯತೆಯ ಬೇರುಗಳು ಹಿಂದೂ ಧರ್ಮದ ಆಧ್ಯಾತ್ಮಿಕತೆಯಲ್ಲಿದೆ. ಹಿಂದೂ ಧರ್ಮದ ಕಕ್ಷೆಯೊಳಗಿಂದ ಪ್ರಯತ್ನಿಸಿದರೆ ಮಾತ್ರ ಇದರ ನಿರ್ಮೂಲನೆ ಸಾಧ್ಯ. ಆಧುನಿಕ ಕಾಲದ ಸಾಮಾಜಿಕ-ಆರ್ಥಿಕ ಕಕ್ಷೆಯೊಳಗಿಂದ ಪ್ರಯತ್ನಿಸಿದರೆ ಇದರ ನಿರ್ಮೂಲನೆ ಸಾಧ್ಯವಾಗದು. ಬದುಕಿನ ಎಲ್ಲಾ ಕ್ಷೇತ್ರಗಳನ್ನು ತನ್ನ ವ್ಯಾಪ್ತಿಗೆ ಒಳಪಡಿಸಿಕೊಳ್ಳುವಂಥ ಜಾತ್ಯತೀತ ಕಾನೂನು ಇಲ್ಲಿ ಸರ್ವಮಾನ್ಯವಾಗಿದೆ. ಇದರೊಂದಿಗೆ ಬಂಡವಾಳಶಾಹ್ಯೋತ್ತರ ಆಧುನಿಕತೆಯು ಒಳ ಸಂಬಂಧ ಹೊಂದಿದೆ. ತಾತ್ವಿಕವಾಗಿ ತಾನು ಜಾತ್ಯತೀತವಾಗಿರುವುದಾಗಿ ಭಾರತೀಯ ನ್ಯಾಯ ವ್ಯವಸ್ಥೆಯು ಸಾರಿಕೊಂಡರೂ ವಾಸ್ತವದಲ್ಲಿ ಇದುವರೆಗೂ ಅದು ಜಾತ್ಯತೀತ ಕಾನೂನು ಮತ್ತು ಪ್ರಭುತ್ವಗಳಿಗಿಂತ ಹಿಂದೂ ಧರ್ಮದ ಆಧ್ಯಾತ್ಮಿಕತೆಗೆ ಹೆಚ್ಚಿನ ಮಾನ್ಯತೆ ಇರುವುದನ್ನು ಸಮ್ಮತಿಸಿದೆ. ಈ ಕಾರಣವಾಗಿಯೇ, ಭಾರತೀಯ ಸಮಾಜದಲ್ಲಿ ಜಾತಿಯು ತನಗೊಂದು ನೆಲೆಯನ್ನು ಪಡೆದುಕೊಂಡಿದೆ.

ಪ್ರಾಚೀನ ಕಾಲದ ಚಂಡಾಲರು ಮತ್ತು ಶೂದ್ರರು-ಆಧುನಿಕ ಕಾಲದಲ್ಲಿ ಪ. ಜಾತಿಗಳವರು ಮತ್ತು ಇತರ ಹಿಂದುಳಿದ ಜಾತಿಗಳವರು ಎಂದು ಗುರುತಿಸಲ್ಪಡುವ ಜನರು ಬಹುತೇಕವಾಗಿ ಇವರೇ-ನಮ್ಮ ಸಂವಿಧಾನದ ಪ್ರಕಾರ ಹಾಗೂ ಧಾರ್ಮಿಕತೆಯ ಪ್ರಕಾರ ಹಿಂದೂಗಳೆಂದೇ ಪರಿಗಣಿತರಾಗಿದ್ದಾರೆ. ಆದರೆ ಅವರಿಗೆ ಇತರ ಹಿಂದೂಗಳಿಗೆ ಇರುವಂತೆ ಧಾರ್ಮಿಕ ದೀಕ್ಷೆ, ತರಬೇತಿ, ಅಧ್ಯಯನಾವಕಾಶ ಹಾಗೂ ಅಂತಿಮವಾಗಿ ಪೌರೋಹಿತ್ಯಾವಕಾಶ ಪಡೆಯಲು ಹಕ್ಕಿಲ್ಲ. ಧರ್ಮಕ್ಕಿರುವ ಕಾಯ್ದೆ ಬದ್ಧ ವ್ಯಾಖ್ಯೆಯ ಉಲ್ಲಂಘನೆ ಅಥವಾ ನಿರಾಕರಣೆ ಇದು. ಪುರೋಹಿತ ವರ್ಗ ಅಥವಾ ಧಾರ್ಮಿಕ ಪಂಡಿತರು ಒಬ್ಬ ವ್ಯಕ್ತಿಯನ್ನು ಅಥವಾ ಒಂದು ಸಮುದಾಯವನ್ನು ಒಂದು ನಿರ್ದಿಷ್ಟ ಧರ್ಮಕ್ಕೆ ಸೇರಿದವರೆಂದು ಗುರುತಿಸಿದ ಬಳಿಕ, ಆ ವ್ಯಕ್ತಿಗೆ ಅಥವಾ ಆ ಸಮುದಾಯಕ್ಕೆ ಆ ಧರ್ಮದೊಳಗೆ ಆಧ್ಯಾತ್ಮಿಕ ಸಮಾನತೆಯನ್ನು ನಿರಾಕರಿಸಲು ಸಾಧ್ಯವಿಲ್ಲ. ವಿಶ್ವದಲ್ಲಿ ಆಧುನಿಕ ಜಾತ್ಯತೀತ ಕಾನೂನು ರೂಪುಗೊಂಡಿದ್ದು ತಥಾಕಥಿತ ದೈವರೂಪಿತ ಕಾನೂನಿನೊಂದಿಗೆ ನಡೆದ ದೀರ್ಘವಾದ ಹಾಗೂ ಚಾರಿತ್ರಿಕವಾದ ಹೋರಾಟ ಮತ್ತು ಹೊಕ್ಕು ಬಳಕೆಯ ನಂತರವೇ. ಈ ಜಾತ್ಯತೀತ ಕಾನೂನು, ದೈವರೂಪಿತ ಅಸಮಾನ ಕಾನೂನು-ನಿಯಮಗಳನ್ನು ತಿರಸ್ಕರಿಸಿ, ಸಮಾನತಾ ಪ್ರತಿಪಾದಕ ಹಾಗೂ ಜಾತ್ಯತೀತ ಸಮಾಜ ವ್ಯವಸ್ಥೆಯನ್ನು ಪ್ರತಿಷ್ಠಾಪಿಸಿತು.

ಭಾರತೀಯ ಚರಿತ್ರೆಯಲ್ಲಿ ದೀರ್ಘಕಾಲದವರೆಗೂ ಹಿಂದೂ ಎಂಬುದು ಒಂದು ಧರ್ಮದ ರೂಪದಲ್ಲಿ ಸ್ವೀಕರಿಸಲ್ಪಟ್ಟಿರಲಿಲ್ಲ. ಮುಸ್ಲಿಂ ಧಾರ್ಮಿಕ ನೇತಾರರು ಹಿಂದೂ ಎಂಬುದನ್ನು ಭೌಗೋಳಿಕ ಅರ್ಥದಲ್ಲಿ ಬಳಸಿದರು. ಕಾಲಾಂತರದಲ್ಲಿ ಹಿಂದೂ ಎಂಬುದು ಧಾರ್ಮಿಕತೆಯ ಉಲ್ಲೇಖವಾಗಿ ಪರಿಗಣಿತವಾಯಿತು. ರಾಷ್ಟ್ರೀಯತಾ ಚಳುವಳಿ ಕಾಲದಲ್ಲಿ ಬ್ರಾಹ್ಮಣವಾದಿ ಸಾಮಾಜಿಕ ಶಕ್ತಿಗಳು ಅಖಿಲ ಭಾರತ ಮಟ್ಟದಲ್ಲಿ ಹಿಂದೂ ಎಂಬ ಪದವನ್ನು ಧಾರ್ಮಿಕತೆಯ ತನ್ಮೂಲಕ ಒಂದು ಸಮುದಾಯದ ರೂಪದಲ್ಲಿ ಪ್ರತಿಪಾದಿಸಿ, ಇದನ್ನು ಆ ಕಾಲದಲ್ಲಾಗಲೇ ರೂಪುಗೊಂಡಿದ್ದ ಇಸ್ಲಾಂ ಮತ್ತು ಕ್ರೈಸ್ತ ಧಾರ್ಮಿಕ ಸಮುದಾಯಗಳು ಬಂಡವಾಳಶಾಹಿ ಆಧುನಿಕತೆ ಮತ್ತು ಜಾತ್ಯತೀತ ಕಾನೂನುಗಳ ಒತ್ತಾಸೆಯಿಂದಾಗಿ, ಆ ಹೊತ್ತಿಗಾಗಲೆ, ತಮ್ಮ ಧರ್ಮೀಯರಿಗೆ ಮತ್ತು ತಮ್ಮ ಧರ್ಮ ಸ್ವೀಕರಿಸುವ ಎಲ್ಲರಿಗೆ ಆಧ್ಯಾತ್ಮಿಕ ಹಕ್ಕುಗಳನ್ನು ಒದಗಿಸುವ ಮೂಲಕ ಆಧ್ಯಾತ್ಮಿಕ ಪ್ರಜಾಪ್ರಭುತ್ವಗಳಾಗಿ ಮಾರ್ಪಟ್ಟಿದ್ದವು.

ಈ ಅಂಶವನ್ನು ಬ್ರಾಹ್ಮಣವಾದಿ ಸಾಮಾಜಿಕ ಶಕ್ತಿಗಳು ತಮ್ಮ ಸ್ವಾರ್ಥ ಸಾಧನೆಯ ದೃಷ್ಟಿಯಿಂದ ತಿರಸ್ಕರಿಸಿದವು. ವಿಶೇಷವಾಗಿ, ಕ್ರೈಸ್ತ ಧರ್ಮವು ಮ್ಯಾಚಿವೆಲಿಯನ್ ಧ್ವಂಸ ಹಾಗೂ ಲುಥೇರಿಯನ್ ಆಧ್ಯಾತ್ಮಿಕ ಕ್ರಾಂತಿಯ ನಂತರ, ಪ್ರಭುತ್ವಕ್ಕೆ ಹಾಗೂ ಜಾತ್ಯತೀತ ಕಾನೂನು ವ್ಯವಸ್ಥೆಗೆ ಅಧೀನವಾಗಿರುವುದನ್ನು ರೂಢಿಸಿಕೊಂಡಿತು. ಹಾಗಾಗಿಯೇ ಸಂವೈಧಾನಿಕ ಕಾನೂನು ಪ್ರಕಾರ ಕಾರ್ಯನಿರ್ವಹಿಸುವ ಪ್ರಜಾಸತ್ತಾತ್ಮಕ ಪ್ರಭುತ್ವವನ್ನು ಆ ಧಾರ್ಮಿಕ ವ್ಯವಸ್ಥೆಗಳು ಸೌಹಾರ್ದ ಸಂಬಂಧ ಹೊಂದಿ ಜೊತೆ ಜೊತೆಯಲ್ಲೇ ಅಸ್ತಿತ್ವದಲ್ಲಿ ಉಳಿದವು. ಇದಕ್ಕೆ ವ್ಯತಿರಿಕ್ತವಾಗಿ ಹಿಂದೂ ಧರ್ಮವು ಸಂವೈಧಾನಿಕ ಕಾನೂನು ಮತ್ತು ಪ್ರಭುತ್ವದ ಸಾಮಾನ್ಯತೆಯನ್ನು ತಿರಸ್ಕರಿಸುತ್ತಲೇ ನಡೆಯಿತು.

ತಥಾಕಥಿತ ದೈವರೂಪಿತ ಕಾನೂನೇ ಸರ್ವಮಾನ್ಯ ಎಂಬುದು ಒಪ್ಪಿತವಾದರೆ ಅಂಥ ಸಮಾಜ ವ್ಯವಸ್ಥೆಯಲ್ಲಿ ಧಾರ್ಮಿಕ ವ್ಯಕ್ತಿ-ಸಂಸ್ಥೆಗಳೇ ಪ್ರಶ್ನಾತೀತರಾಗಿ ಬಿಡುತ್ತಾರೆ. ಅಧಿಕಾರದಲ್ಲಿ ಇದ್ದು ಬಿಜೆಪಿ ತಾಳಿರುವ ನಿಲುವು ಹಾಗೂ ರಾಮಮಂದಿರಕ್ಕೆ ಸಂಬಂಧಿಸಿದಂತೆ ಸಂಘ ಪರಿವಾರವು ಎಲ್ಲಾ ಜಾತ್ಯಾತೀತ ಮತ್ತು ಸಂವೈಧಾನಿಕ ಕಾನೂನುಗಳನ್ನು ಉಲ್ಲಂಘಿಸಿರುವ ರೀತಿ ಪುರೋಹಿತ-ಮಠಾಧೀಶರನ್ನೇ ಸರ್ವಮಾನ್ಯರೆಂದು ಪರಿಗಣಿಸುವ ನೀತಿಯನ್ನು ಸಾಬೀತು ಪಡಿಸುತ್ತದೆ.

ಹಿಂದೂ ಸಮಾಜ ವ್ಯವಸ್ಥೆಯಲ್ಲಿನ ಜಾತಿ-ಅಸ್ಪೃಶ್ಯತೆಗಳಾಧಾರಿತ ದೈನಂದಿನ ಜೀವನ ವಿಧಾನದಿಂದಾಗಿ, ಹಿಂದೂ ಜೀವನ ಪದ್ಧತಿಯು ಫ್ಯಾಸಿಸ್ಟ್ ಆಧ್ಯಾತ್ಮಿಕ ಜೀವನವಾಗಿ ರೂಪಾಂತರಗೊಂಡಿದೆ.

ಒಬ್ಬ ವ್ಯಕ್ತಿ ಅಥವಾ ಒಂದು ಸಮುದಾಯದ ಆಧ್ಯಾತ್ಮಿಕ ಸ್ಥಾನಮಾನವನ್ನು ಹಿಂದೂ ಎಂದು ಗುರುತಿಸಿ, ನಂತರ ಅವರನ್ನು ಮಂದಿರ, ದೇವರು ಮತ್ತು ಪವಿತ್ರ ಗ್ರಂಥಗಳ ಪಾಲಿಗೆ ಅಸ್ಪೃಶ್ಯರೆಂದು ಪರಿಗಣಿಸುವ ಫ್ಯಾಸಿಸ್ಟ್ ಆಧ್ಯಾತ್ಮಿಕ ರೂಢಿಯನ್ನು ಸಂವೈಧಾನಿಕವಾಗಿ ಅಸ್ತಿತ್ವದಲ್ಲಿರುವ ಯಾವ ಕೋರ್ಟುಗಳೂ ಇದುವರೆಗೆ ಪ್ರಶ್ನಿಸಿಲ್ಲ.

ಆಶ್ಚರ್ಯಕರ ಸಂಗತಿ ಎಂದರೆ, ಜಾತ್ಯಾತೀತ ಕಾಯ್ದೆ, ಸಂವಿಧಾನ ಮತ್ತು ಭಾರತೀಯ ಪ್ರಭುತ್ವಗಳು ಇಂಥ ಫ್ಯಾಸಿಸ್ಟ್ ಆಧ್ಯಾತ್ಮಿಕ ರೂಢಿಗಳಲ್ಲಿ ಹಸ್ತಕ್ಷೇಪ ಮಾಡಕೂಡದು ಎಂದು ಕಾನೂನು ಪಂಡಿತರಾಗಿರುವ ಅನೇಕ ಬ್ರಾಹ್ಮಣವಾದಿಗಳು ವಾದಿಸುತ್ತಾರೆ.

ಅಂದರೆ, ಜಾತಿ ಮತ್ತು ಅಸ್ಪೃಶ್ಯತೆಗಳನ್ನು ನಿರ್ಮೂಲನೆ ಮಾಡುವಲ್ಲಿ ಭಾರತೀಯ ಸಂವಿಧಾನ ಹಾಗೂ ಪ್ರಭುತ್ವಗಳಿಗೆ ಯಾವ ಅವಕಾಶವೂ ಇಲ್ಲ ಎಂಬುದೇ ಇದರ ಅರ್ಥವಾಗುತ್ತದೆ.

ಇದರ ಇನ್ನೂ ಒಂದು ಅರ್ಥವೆಂದರೆ, ಯಾವ ನಾಗರೀಕ ಸಮಾಜದಲ್ಲಿ ಆಧ್ಯಾತ್ಮಿಕ ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿರುವುದಿಲ್ಲವೋ ಅಂಥ ಸಮಾಜದಲ್ಲಿ ರಾಜಕೀಯ ಪ್ರಜಾಪ್ರಭುತ್ವ ಬಹುಕಾಲ ಉಳಿಯಲಾರದು ಎಂಬ ಕಟು ಸತ್ಯವನ್ನು ಭಾರತೀಯ ನ್ಯಾಯಾಂಗವು ಕಣ್ತೆರೆದು ನೋಡಬಯಸುತ್ತಿಲ್ಲ ಎಂಬುದು. ನ್ಯಾಯಾಂಗವು ಒಂದು ಜನ ಸಮೂಹವನ್ನು ಹಿಂದೂ ಎಂದು ವ್ಯಾಖ್ಯಾನಿಸುವುದನ್ನು ಒಪ್ಪಲಾಗದು.

ಹೀಗೆ ವ್ಯಾಖ್ಯಾನಿಸಲ್ಪಟ್ಟ ಜನಸಮೂಹವನ್ನು ಅಸ್ಪೃಶ್ಯತೆಯಂಥ ಅಮಾನವೀಯ ನಡವಳಿಕೆಗೆ ಗುರಿಯಾಗಿಸಿದ ಬಗ್ಗೆ ನ್ಯಾಯಾಂಗವು ನಿರ್ಲಕ್ಷ್ಯದಿಂದ ಇರುವುದನ್ನೂ ಒಪ್ಪಲಾಗದು. ಅಸ್ಪೃಶ್ಯತೆಯ ಅವಮಾನಕ್ಕೆ ಒಂದು ಸಮೂಹ ಈಡಾಗುವುದನ್ನು ಸಹಿಸಲೂ ಸಾಧ್ಯವಿಲ್ಲ.

ಅಸ್ಪೃಶ್ಯತೆಯನ್ನು ಆಚರಿಸುವ ಅರ್ಚಕನ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲ್ಪಡಬೇಕು. ಈ ಬಗ್ಗೆ ಯಾರಾದರೊಬ್ಬರು ಅರ್ಜಿ ಬರೆಯುವುದನ್ನು ನಿರ್ಲಕ್ಷಿಸಕೂಡದು. ಸಂವಿಧಾನ ಕಲಂ ಮತ್ತು ಆಶಯಕ್ಕೆ ವ್ಯತಿರಿಕ್ತವಾಗಿ ಆಚರಣೆಯಲ್ಲಿರುವ ರೂಢಿಗಳನ್ನು ತೊಡೆದು ಹಾಕುವ ಹೊಣೆ ಪ್ರಭುತ್ವದ್ದಾಗಿದೆ.

ಮನುಷ್ಯ ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಅಡ್ಡಿಯಾಗಿರುವ ಜಾತೀಯತೆ ಮತ್ತು ಅಸ್ಪೃಶ್ಯತೆಗಳನ್ನು ನಿರ್ಮೂಲನೆ ಮಾಡಲು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು (National Human Rights Commission-NHRC) ಈ ಕೆಳಗೆ ಸೂಚಿಸಿರುವ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕೆಂದು ನಿರೀಕ್ಷಿಸಲಾಗಿದೆ.

1. ಶಂಕರಾಚಾರ್ಯರು ಸೇರಿದಂತೆ ಎಲ್ಲಾ ಹಿಂದೂ ಧಾರ್ಮಿಕ ಮುಖಂಡರ ಸಭೆಯನ್ನು ಕರೆದು

(ಎ) ತಮ್ಮ ಧಾರ್ಮಿಕ ಜೀವನ ವಿಧಾನವನ್ನು ಹಿಂದೂ ಎಂದು ಗುರುತಿಸಬಹುದೆ?

(ಬಿ) ತಾವು ಪರಿಶಿಷ್ಟ ಜಾತಿಗಳವರನ್ನು ಹಾಗೂ ಹಿಂದುಳಿದ ವರ್ಗಗಳವರನ್ನು ಹಿಂದೂ ಎಂದು ಪರಿಗಣಿಸುತ್ತೀರಾ? ಎಂಬ ಪ್ರಶ್ನೆಗಳನ್ನು ಹಾಕಬೇಕು. ಹೌದು ಎಂಬ ಉತ್ತರ ಬಂದರೆ, ಎಲ್ಲಾ ಹಿಂದೂಗಳಿಗೆ ದೀಕ್ಷೆ ಪಡೆಯುವ, ಧರ್ಮಕೃತಿ ಪಠಣ ಮಾಡುವ ಹಾಗೂ ಪೌರೋಹಿತ್ಯ ವೃತ್ತಿ ಆಯ್ಕೆಮಾಡಿ ಕೊಳ್ಳುವುದಕ್ಕೂ ಅಧಿಕಾರ ಇದೆ ಎಂಬುದನ್ನು ಮಾನ್ಯ ಮಾಡಲು ಆಗ್ರಹಪಡಿಸಬೇಕು.

2. ಈ ಜಾತಿ ಮತ್ತು ವರ್ಗಗಳವರನ್ನು ಹಿಂದೂ ಎಂದು ಪರಿಗಣಿಸಲು ಸಾಧ್ಯವಿಲ್ಲ ಎಂದಾದರೆ, ಅವರಿಗೆ ಯಾವುದೇ ಅನ್ಯ ಧರ್ಮ ಸ್ವೀಕರಿಸುವ ಹಾಗೂ ಮೀಸಲಾತಿ ಪಡೆದುಕೊಳ್ಳುವ ಹಕ್ಕನ್ನು ಖಾತ್ರಿ ಪಡಿಸಬೇಕು. (ಏಕೆಂದರೆ, ಮೀಸಲಾತಿಗೂ-ಧರ್ಮಕ್ಕೂ ಸಂಬಂಧ ಕಲ್ಪಿಸುವ ಒಂದು ವರಸೆಯನ್ನು ಕೋರ್ಟುಗಳು ರೂಢಿಸಿಕೊಂಡಿವೆ).

ಆಗ, ಈ ಜಾತಿ ಮತ್ತು ವರ್ಗಗಳವರಿಗೆ, ಆಧ್ಯಾತ್ಮಿಕ ಪ್ರಜಾಸತ್ತಾತ್ಮಕ ಬದುಕಿಗೆ ಅವಕಾಶವಿಲ್ಲದೇ ಹೋದರೆ ರಾಜಕೀಯ ಪ್ರಜಾಪ್ರಭುತ್ವ ಹಾಗೂ ಮೀಸಲಾತಿ ಒದಗಿಸುವ ಆರ್ಥಿಕ ಅನುಕೂಲತೆಗಳಷ್ಟೇ ತಮ್ಮ ವಿಮೋಚನೆ ಮಾಡಲಾರವು ಎಂಬ ಸತ್ಯ ಮನದಟ್ಟಾಗುತ್ತದೆ.

3. ಹಿಂದೂ ಧರ್ಮಗುರುಗಳು, ಮಠಾಧೀಶರು ಈ ಜಾತಿ ಮತ್ತು ವರ್ಗಗಳವರನ್ನು ಹಿಂದೂ ಎಂದು ಪರಿಗಣಿಸಲು ಒಪ್ಪದಿದ್ದರೆ, ಈ ಜಾತಿ ಮತ್ತು ವರ್ಗಗಳವರು ಇನ್ನೊಂದು ಧರ್ಮವನ್ನು ಆಯ್ಕೆ ಮಾಡಿಕೊಳ್ಳುವುದನ್ನು ಮತಾಂತರ ಎಂದು ವ್ಯಾಖ್ಯಾನಿಸಬಹುದು. ಏಕೆಂದರೆ, ಈ ರೀತಿಯ ವ್ಯಾಖ್ಯಾನದಿಂದಾಗಿಯೇ ಈ ಜಾತಿ ಮತ್ತು ವರ್ಗಗಳವರು ಮಾಡಿಕೊಳ್ಳಬಹುದಾದ ಧರ್ಮದ ಆಯ್ಕೆಯು ಕೋರ್ಟುಗಳ ಗ್ರಹಿಕೆಯಲ್ಲಿ ಅಗ್ರಹವಾಗುವ ಸಾಧ್ಯತೆ ಇದೆ.

ಈ ವಿಶಿಷ್ಟ ಪರಿಸ್ಥಿತಿಯನ್ನು ಗಮನಿಸಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಮತಾಂತರ ಪರಿಕಲ್ಪನೆಯನ್ನೇ ಪುನರ್ ರೂಪಿಸಿ, ಮಂಡಿಸಬೇಕು. ಆಗ, ಹಿಂದೂ ಧರ್ಮ ಕುರಿತಂತೆ ನಮ್ಮ ಸಮಸ್ತ ಕಾನೂನು ಒಳಗೊಂಡಿರುವ ಪರಿಭಾಷೆಯೇ ಬದಲಾಗುತ್ತದೆ. ಅಸ್ಪೃಶ್ಯತೆಯ ನಿರ್ಮೂಲನೆಯ ಪ್ರಶ್ನೆಯು ಹಿಂದೂಧರ್ಮದೊಂದಿಗೆ ತಳಕು ಹಾಕಿಕೊಂಡಿರುವುದರಿಂದ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಈ ಪ್ರಕ್ರಿಯೆಯನ್ನು ಪ್ರಾರಂಭಿಸಲೇಬೇಕಾಗಿದೆ. ●

ಅಂಬೇಡ್ಕರ್ ನುಡಿ

ತುಳಸೀ ಮಾಲೆಯನ್ನು ಕೊರಳಲ್ಲಿ ಧರಿಸಿದ ಮಾತ್ರದಿಂದಲೇ ಸಾಲ ಕೊಟ್ಟವರಿಂದ ತಪ್ಪಿಸಿಕೊಳ್ಳಲಾಗದು. ರಾಮ ನಾಮ ಸ್ಮರಣೆ ಮಾಡಿದ ಮಾತ್ರದಿಂದಲೇ ಜಮೀನ್ದಾರರಿಗೆ ತೆರಬೇಕಾದ ಗೇಣಿ ತಪ್ಪದು. ಪ್ರತಿ ವರ್ಷ ಪಂಡರಾಪುರಕ್ಕೆ ತೀರ್ಥ ಯಾತ್ರೆ ಹೋಗುವುದರಿಂದ ಪ್ರತಿ ತಿಂಗಳೂ ಸಂಬಳ ಸಿಗದು. ಸಮಾಜದಲ್ಲಿ ಬಹು ಸಂಖ್ಯಾತರು ಮೂಢರಾಗಿ ಅರ್ಥರಹಿತವಾದ ಮೂಢನಂಬಿಕೆಗಳು, ಅಜ್ಞಾನಾಂಧಕಾರಕ್ಕೆ ಸಿಕ್ಕಿ ನರಳುತ್ತಿರುವಾಗ, ಬುದ್ಧಿವಂತರಾದವರು ಅಂತಹವರ ಹೆಸರಿನಲ್ಲಿ ಸಮಾಜ ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಾ ಇದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಸಮಾಜದಲ್ಲಿನ ಬಹು ಸಂಖ್ಯಾತರ ಗೌರವ, ಮರ್ಯಾದೆಗಳನ್ನೇ ಬಲಿ ತೆಗೆದುಕೊಳ್ಳುತ್ತಿದ್ದಾರೆ.

ನಿಮ್ಮ ಕೈಗಳಲ್ಲಿ ಅದೆಂತಹ ಅಲ್ಪವಾದ ರಾಜಕೀಯ ಅಧಿಕಾರವೇ ಇರಲಿ, ಅದನ್ನು ಪೂರ್ತಿಯಾಗಿ ನಿಮ್ಮ ಕಿಂಚಿತ್ತಾದರೂ ನಿರ್ಲಕ್ಷ್ಯ, ನಿರ್ಲಿಪ್ತತೆಯನ್ನು ವ್ಯಕ್ತಪಡಿಸಿದರೂ ನಿಮ್ಮ ಸಂಕಟಗಳಿಗೆ ಕೊನೆಯೇ ಇರುವುದಿಲ್ಲ. ಈ ದಾಸ್ಯ ಜೀವನವನ್ನು ಅಂತ್ಯಗೊಳಿಸಲು ಅಹರ್ನಿ, ಹೋರಾಡುತ್ತಿದ್ದರೂ ಮತ್ತೆ ಅದು ನಮ್ಮನ್ನು ಆಕ್ರಮಿಸಿಕೊಂಡೀತು ಎಂಬ ಭಯ ನನಗಿದೆ. ಈಗ ನಾವು ಕಾಣುತ್ತಿರುವ ಬೆಳಕು ಅಲ್ಪಾಯುಷ್ಯವಾದುದು ಎಂಬುದರಲ್ಲಿ ಸಂದೇಹವಿಲ್ಲ. ನೀವು ತಲೆತಲಾಂತರಗಳಿಂದ ಅನುಭವಿಸುತ್ತಿರುವ ಸಾಮಾಜಿಕ ದುರಾಚಾರಗಳಿಂದ ವಿಮುಕ್ತರನ್ನಾಗಿ ಮಾಡಲು, ಜಾಗೃತಗೊಳಿಸಲು ಇಲ್ಲಿಗೆ ಬಂದಿರುವುದಕ್ಕಾಗಿ ಮಾಡಲು ನನ್ನನ್ನು ಸಾಯಿಸಲಾಗುವುದೆಂದು ಬೆದರಿಸಲಾಗುತ್ತಿದೆ. ಮಾನವನ ಬಾಳು ಅಶಾಶ್ವತವಾದುದು; ಎಂದೋ ಒಂದು ದಿನ ಪ್ರತಿಯೊಬ್ಬರೂ ಸಾಯಲೇಬೇಕು. ಆದರೆ ಉನ್ನತ ಆದರ್ಶಗಳಿಂದ ಆತ್ಮಾಭಿಮಾನ ಮತ್ತು ಉನ್ನತ ಮಟ್ಟದ ಜೀವನವನ್ನು ರೂಪಿಸುವುದಕ್ಕಾಗಿ ಬದುಕನ್ನು ಸಮರ್ಪಿಸೋಣ. ನಾವು ಶೂರರ ವಂಶಕ್ಕೆ ಸೇರಿದವರು.

ದಲಿತ ಚಳವಳಿಯ : ಹೆಜ್ಜೆ ಗುರುತುಗಳನ್ನು ಹುಡುಕುತ್ತಾ...

ನಾಡಿನ ದಲಿತರ ಆಶಾಕಿರಣವಾಗಿದ್ದ ದಲಿತ ಸಂಘರ್ಷ ಸಮಿತಿ ಈಗ ಛಿದ್ರಗೊಂಡಿದೆ. ಇದಕ್ಕೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಕಾರಣವೆಂದು ತೋರಿಕೆಗಾಗಿ ಪರಸ್ಪರ ಆರೋಪಿಸಿಕೊಂಡರೂ ನಿಜವಾದ ಕಾರಣ ವ್ಯಕ್ತಿಗತ ಲಾಲಸೆ ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ. ಸಮಯ ಸಾಧಕರಾದ ಕೆಲವೇ ವ್ಯಕ್ತಿಗಳು ವ್ಯಕ್ತಿಗತ ರಾಜಕೀಯ ಲಾಭಕ್ಕಾಗಿ ಇಡೀ ಸಂಘಟನೆಯನ್ನೆ ಛಿದ್ರ ಮಾಡಿ ನಾಚಿಕೆ ಇಲ್ಲದೆ ತಿರುಗಾಡುತ್ತಿದ್ದಾರೆ. ದಲಿತ ಸಮುದಾಯ ದಿಕ್ಕು ದಿಶೆ ಇಲ್ಲದೆ ಅತಂತ್ರವಾಗಿದೆ.

ದಲಿತ ಸಂಘರ್ಷ ಸಮಿತಿಯ ಹುಟ್ಟಿಗೆ ಕಾರಣವಾದ ದಲೇಕ (ದಲಿತ ಲೇಖಕ ಕಲಾವಿದರ ಬಳಗ) ಇದನ್ನೆಲ್ಲ ಕಂಡು ದಿಗ್ಭ್ರಮೆಗೊಂಡು, ಈ ದುರಂತದಿಂದ ದಲಿತ ಸಮುದಾಯವನ್ನು ಪಾರು ಮಾಡುವ ಪ್ರಯತ್ನ ಆರಂಭಿಸಿದೆ. ಆ ಪ್ರಯತ್ನದ ಫಲವಾಗಿ ಚಳುವಳಿಯ ಲೋಪದೋಷಗಳನ್ನು ಅವಲೋಕನ ಮಾಡಿ, ಅದಕ್ಕೆ ಹೊಸ ರಕ್ತ ಮಾಂಸ-ಅಂತಃಕರಣಗಳನ್ನು ತುಂಬುವ ಕೆಲಸ ಮಾಡುತ್ತಿದೆ. ಇಂಥ ಪ್ರಯತ್ನದ ಮೊದಲ ಹೆಜ್ಜೆಯೇ ಈ ಅವಲೋಕನ. ದಲಿತ ಚಳುವಳಿಯ ಮುಂಚೂಣಿ ಲೇಖಕ ಕೋಟಿಗಾನಹಳ್ಳಿ ರಾಮಯ್ಯ ಅವರು ಬರೆದು ಸಿದ್ಧಪಡಿಸಿದ ಈ ಅವಲೋಕನ ಗಾಥೆಯನ್ನು 'ಸಂವಾದ' ಓದುಗರಿಗಾಗಿ ಇಲ್ಲಿ ಮುದ್ರಿಸುತ್ತಿದ್ದೇವೆ. ದಲಿತ ಚಳುವಳಿಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪಾಲ್ಗೊಂಡಿರುವ ಹಾಗೂ ಚಳವಳಿ ಹಿತೈಷಿಗಳಾದ ಎಲ್ಲರೂ ಈ ಮುಕ್ತ ಚರ್ಚೆಯಲ್ಲಿ ಪಾಲ್ಗೊಳ್ಳಬೇಕೆಂಬುದು ನಮ್ಮ ಆಶೆ. —ಸಂಪಾದಕ

ಬಂಧುಗಳೇ,

ತಮಗೆಲ್ಲಾ ತಿಳಿದಿರುವಂತೆ ನಾವೆಲ್ಲಾ ಕಣ್ಣುಬಿಡುವಂತಾಗಿದ್ದು ದಲಿತ ಸಂಘರ್ಷ ಸಮಿತಿಯ ಹುಟ್ಟಿನಿಂದ. ಈ ಹುಟ್ಟಿಗೆ ಕೇವಲ ವ್ಯಕ್ತಿಗಳಷ್ಟೇ ಕಾರಣವಾಗಿರದೆ ಅವತ್ತಿನ ಚಾರಿತ್ರಿಕ ಸಂದರ್ಭಗಳೇ ಬಹುಪಾಲು ಕಾರಣ. ವ್ಯಕ್ತಿಗಳ ಪಾತ್ರ ಒಂದು ನಿಮಿತ್ತ. ಅಂಥಹ ಚಾರಿತ್ರಿಕ ಸಂದರ್ಭಗಳಲ್ಲಿ ಈ ವ್ಯಕ್ತಿಗಳಲ್ಲದೆ ಬೇರೆ ಯಾರೇ ಇದ್ದಿದ್ದರೂ ಇಂತಹ ಪಾತ್ರವನ್ನು ಖಂಡಿತ ನಿರ್ವಹಿಸುತ್ತಿದ್ದರು.

ಆದ್ದರಿಂದ ಸಮಷ್ಟಿಯಿಂದ ವ್ಯಕ್ತಿಗಳನ್ನು ಪ್ರತ್ಯೇಕಿಸುವ ಪರಿಪಾಠ ವಸ್ತುಸ್ಥಿತಿಯನ್ನು ಗ್ರಹಿಸಲು ಇರುವ ದಾರಿಗಳನ್ನು ಮುಚ್ಚಿ ಹಾಕುತ್ತದೆ ಎನ್ನುವುದನ್ನು ಮರೆಯದಿರೋಣ.

ಹಾಗೂ ಇಂಥಹ ಎಚ್ಚರದೊಂದಿಗೆ ದಲಿತ ಚಳವಳಿಯ ಹೆಜ್ಜೆ ಗುರುತುಗಳನ್ನು ದಲಿತ ಸಮುದಾಯದ ಸಮಷ್ಠಿಯ ನಡಿಗೆ ಎಂದು ಪರಿಗಣಿಸೋಣ. ಈ ಸಮಷ್ಟಿಯ ಆರಂಭದ ನಡಿಗೆ ನೆನಪಾದರೆ ನಮ್ಮ ಬಗ್ಗೆಯೇ ನಮಗೆ ಪ್ರೀತಿ, ಗೌರವ, ಹೆಮ್ಮೆ, ಸ್ವಾಭಿಮಾನ ಮೂಡದೆ ಇರಲಾರದು. ಇದು ಯಾಕಾಗಿ? ಹದಿಹರಿಯದ ಆದರ್ಶದ ಕನಸುಗಾರರಾಗಿದ್ದೆವೆಂದೆ? ಅಥವಾ ಅಂದು ನಾವು ಒಬ್ಬಂಟಿತನದ ಚಿಪ್ಪುಗಳನ್ನು ಕಳಚಿಕೊಂಡು ಹೊರಬಂದೆವು ಎಂದೇ? ವಿನಃ, ಇದ್ದರೂ ಅಂದು ಯಾವ ವ್ಯಕ್ತಿತ್ವ ಪ್ರಖರತೆಗಳೂ ಇಲ್ಲದಿದ್ದ ನಾವು ಒಟ್ಟಾಗಿ ಸೇರುವುದೇ ಒಂದು ರೋಮಾಂಚನವೆಂದು ಬಗೆದಿದ್ದವು. ಪರಸ್ಪರರಲ್ಲಿ ನಿಷ್ಕಾರಣ ಪ್ರೀತಿ, ನಂಬುಗೆ ಇದ್ದವು.

ನಮ್ಮ ನಡಿಗೆಗೆ ಆದರ್ಶದ ಕನಸಿನ ತಳಹದಿ ಇತ್ತು. ಎಲ್ಲಕ್ಕಿಂತ ಸಂಬಂಧವೇ ಇಲ್ಲದಂತಿದ್ದ ಸಮುದಾಯದ ಅಂತರಂಗದಲ್ಲಿ ಸಂಬಂಧಗಳ ಕೊರತೆಯೊಂದು ಜಿನುಗತೊಡಗಿತ್ತು. ನಂತರವೇ ಇನ್ನುಳಿದ ಸಿದ್ಧಾಂತ, ಕಾರ್ಯಕ್ರಮ, ಸಂವಿಧಾನ, ಸಂಕೇತ, ಬಾವುಟಗಳು! ಆ ಅರಿವು ನಮಗೆಲ್ಲರಿಗೂ ಇದ್ದೇ ಇತ್ತು. ನಾವು ಪರಸ್ಪರರನ್ನು ಅಪ್ಪಿಕೊಳ್ಳುವುದಕ್ಕೆ ವಿಸಿಟಿಂಗ್ ಕಾರ್ಡುಗಳ ಮೊರೆ ಹೋಗುತ್ತಿರಲಿಲ್ಲ. ಲೆಟರ್‌ಹೆಡ್‌ಗಳ ಪತ್ರ ವ್ಯವಹಾರದಿಂದ ಕಲುಷಿತಗೊಂಡಿರಲಿಲ್ಲ. ತುಳಿತಕ್ಕೊಳಗಾದರವೇ ನಾವಾದ್ದರಿಂದ ಇನ್ನೊಬ್ಬರನ್ನು ತುಳಿಯುವ ತಂತ್ರಗಳನ್ನು ಹುಡುಕುತ್ತಿರಲಿಲ್ಲ. ಸಮಾಜವೆ ನಮ್ಮನ್ನು ಕೆಸರಲ್ಲಿಟ್ಟಿದ್ದರಿಂದ ಪರಸ್ಪರ ಕೆಸರೆರಚಿಕೊಳ್ಳುವುದು ದೂರದ ಮಾತೇ ಆಗಿತ್ತು. ಇನ್ನು ದಲಿತ ಪಧಕ್ಕಾಗಲಿ ದಲಿತ ಹೋರಾಟಗಾರರಿಗಾಗಲಿ ಅಂದು ಮೂರು ಕಾಸಿನ ಕಿಮ್ಮತ್ತೂ ಇಲ್ಲದಿದ್ದರಿಂದ ನಾವೆಲ್ಲಾ ನಾನಾ ಥರದ ಅವಹೇಳನಕ್ಕೆ ಒಳಗಾಗಬೇಕಾಗಿತ್ತು.

ನಮ್ಮ ಭಿಕಾರಿತನದಷ್ಟೇ ನಮ್ಮ ಆಲೋಚನೆಗಳು ಕೂಡ ಉಳಿದವರಿಗೆ ಒಪ್ಪಿಗೆಯಾಗುತ್ತಿರಲಿಲ್ಲ. ಹೀಗಾಗಿ ಆರಂಭದ ದಲಿತ ಚಳವಳಿಗಾರರ ಅಂದಿನ ಹಾದಿ ಕಲ್ಲುಮುಳ್ಳಿನದಾಗಿತ್ತು. ಸಾವಿರಾರು ವರ್ಷಗಳ ಅನ್ಯಾಯ, ತಾರತಮ್ಯದ ಅರಿವಿನ ಕಿಡಿಗಳು ಹೊಸದಾಗಿ ಹೊತ್ತಿಕೊಂಡಿದ್ದರ ಫಲವಾಗಿ ರಾತ್ರಿ ಕಳೆದು ಬೆಳಗಾಗುವುದರಲ್ಲಿ ನಮ್ಮ ಕನಸುಗಳು ನನಸಾಗಿ ಬಿಡಬೇಕೆಂಬ ಧಾವಂತದಲ್ಲಿ ನಾವು ಬಿಡುಗಡೆಯ ಗೀಳುಗಾರರೂ ಆಗಿದ್ದೆವು. ಹೀಗಾಗಿ ನಾವು ಯಾರ ಕಣ್ಣಿಗೂ ನಾರ್ಮಲ್ ಆಗಿ ಕಾಣುತ್ತಿರಲಿಲ್ಲ. ಆದ್ದರಿಂದ ಯಾರೂ ಹತ್ತಿರಬಿಟ್ಟುಕೊಳ್ಳುವಷ್ಟು ನಿರುಪದ್ರವಿಗಳೆಂದು ನಮ್ಮನ್ನು ಭಾವಿಸುತ್ತಿರಲಿಲ್ಲ. ಒಟ್ಟಾರೆ ಆರಂಭದ ದಲಿತ ಹೋರಾಟಗಾರರು ಸಮಾಜ ಇರಲಿ, ದಲಿತ ಸಮುದಾಯದ ಕಣ್ಣಿಗೂ ಅಪಥ್ಯವಾಗಿದ್ದರು. ಅಸಾಮಾನ್ಯರಾಗಿದ್ದರು.

ಹೀಗಾಗಿ ಆರಂಭದ ದಲಿತ ಚಳವಳಿಗಾರರೂ ಅವರ ಆಲೋಚನೆಗಳೂ ಸಮುದಾಯದ ಹೃದಯಕ್ಕೆ ಮುಟ್ಟುವುದು ಅಷ್ಟು ಸುಲಭವಾಗಿರಲಿಲ್ಲ. ಆದ್ದರಿಂದ ಅವರು ನೂರು ಜನ ಮಾಡಬೇಕಾದ ಕೆಲಸವನ್ನು ಒಬ್ಬೊಬ್ಬರೇ ಕೈಗೆತ್ತಿಕೊಳ್ಳುತ್ತಿದ್ದರು. ಯಾವ ಬಲವೂ ಇಲ್ಲದ ಇವರು ಏಕಾಂಗಿಗಳಾಗಿಯೇ ಎಂಥ ಅಪಾಯವನ್ನು ಬೇಕಾದರೂ ಎದುರಿಸುವ, ಕಷ್ಟ ನಷ್ಟಗಳಿಗೆ ಎದೆಗುಂದದೆ ದಲಿತ ಸಮುದಾಯದ ಹಿತ ಕಾಪಾಡುವುದರಲ್ಲಿ ಕಡುನಿಷ್ಠರಾಗಿದ್ದರು. ನಾಡಿನಾದ್ಯಂತ ಕಟ್ಟಕಡೆಯ ಮನುಷ್ಯನ ಹೆಗಲಿಗೆ ಹೆಗಲು ಕೊಟ್ಟು ನಡೆದರು.

ಈ ನಡಿಗೆ ಬಿಡುಗಡೆಯ ಕನಿಷ್ಠ ಕನಸಾಗಲಿ ನಂಬಿಕೆಯಾಗಲಿ ಇಲ್ಲದೆ ನಿರಾಶೆಯಲ್ಲಿ ಮುಳುಗಿದ್ದ ದಲಿತ ಸಮುದಾಯವನ್ನು ಅಲ್ಲಾಡಿಸಿಬಿಟ್ಟಿತು. ಸಂಬಂಧಗಳ ಜಿನುಗು ಒರತೆ ಚಿಮ್ಮಿ ಚಿಲುಮೆಯಾಯಿತು. ನದಿಯೂ ಆಯಿತು. ನಾಡಿನಾದ್ಯಂತ ಅಂಚಿಗೆ ಸರಿಸಲ್ಪಟ್ಟಿದ್ದ ದಲಿತ ಸಮುದಾಯ ಮೈಕೊಡವಿ ಎದ್ದಿತು. ಮೊಟ್ಟ ಮೊದಲ ಬಾರಿಗೆ ದಲಿತ ಸಮುದಾಯ ತನ್ನ ಬಿಡುಗಡೆ ತನ್ನಿಂದಲೇ ಹೊರತು ಬೇರೆ ಯಾರಿಂದಲೂ ಅಲ್ಲ ಎಂಬುದನ್ನು ಮನಗಂಡಿತ್ತು. ತನ್ನನ್ನೇ ತಾನು ನಂಬಿದ ಚರಿತ್ರಾರ್ಹ ಬದಲಾವಣೆ ಇದು. ಇದರ ಪರಿಣಾಮ ನಾಡಿನ ಮೂಲೆ ಮೂಲೆಯಲ್ಲಿ ಕಟ್ಟಕಡೆಯ ಮನುಷ್ಯನ ಮೇಲಾಗುತ್ತಿದ್ದ ಅನ್ಯಾಯಗಳ ವಿರುದ್ಧ ನೂರಾರು ಹೋರಾಟಗಳು ಹುಟ್ಟಿಕೊಂಡವು. ದಲಿತ ಪ್ರಜ್ಞಾಸ್ಫೋಟದ ಮೊದಲ ಘಟ್ಟ ಇದು. ಈ ಹಂತದಲ್ಲಿ ಎದುರಾಗಿದ್ದು ಎರಡು ಪ್ರಮುಖ ಸಮಸ್ಯೆಗಳು. ಒಂದು ; ಅನ್ಯಾಯಗಳ ವಿರುದ್ಧ ಹೋರಾಡುತ್ತಿದ್ದ ಕಾರ್ಯಕರ್ತರ ಮೇಲೆ ನಡೆಯಬಹುದಾಗಿದ್ದ ಸಂಭವನೀಯ ಹಲ್ಲೆಗಳು. ಎರಡು ; ಪ್ರತಿಭಟನೆಯ ಸೊಲ್ಲಡಗಿಸಲೆಂದು

ಅಮಾಯಕ ದಲಿತರ ಮೇಲಾಗತೊಡಗಿದ ಹಲ್ಲೆ, ಹತ್ಯಾ ಪ್ರಕರಣಗಳು.

ಈ ಬಿಕ್ಕಟ್ಟನ್ನು ಎದುರಿಸಲು ದಲಿತ ಚಳುವಳಿ ಕಂಡುಕೊಂಡ ಮಾರ್ಗ ಬಿಡಿಬಿಡಿ ಹೋರಾಟಗಳ ಜೊತೆಗೆ ಬೃಹತ್ ಸಂಘಟಿತ ಬಲ ಪ್ರದರ್ಶನದ ಮಾದರಿಯನ್ನು, ಇಂಥ ಬಲಪ್ರದರ್ಶನವೊಂದೇ ದಲಿತರ ಮೇಲೆ ಹೆಚ್ಚ ತೊಡಗಿದ್ದ ಹಲ್ಲೆ, ಕೊಲೆಗಳನ್ನು ತಡೆಯುವುದಕ್ಕೆ ಶಕ್ತ ಎಂಬುದು ಅಂದಿನ ನಂಬಿಕೆಯಾಗಿತ್ತು. ಐತಿಹಾಸಿಕ ಹುಣಸೆಕೋಟೆ ಜಾಥಾ, ವಿಧಾನಸೌಧದ ಎದುರು ಆಚರಣೆಗೊಂಡ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್‌ರ ಜನ್ಮದಿನಾಚರಣೆ, ಬಂಡಿಗೇರಿ ಮಲಪ್ರಕರಣ ಮುಂತಾದ ಬೃಹತ್ ಪ್ರತಿಭಟನಾ ಪ್ರದರ್ಶನಗಳು ಇಂಥ ಮುಂಜಾಗ್ರತೆಯ ಫಲ.

ಈ ಪ್ರದರ್ಶನಗಳು ಅಪಾರ ದಲಿತ ಶಕ್ತಿಯ ಸ್ವರೂಪವನ್ನು ಮೊದಲ ಬಾರಿಗೆ ನಾಡಿಗೇ ಪರಿಚಯಿಸಿದವು. ಹಲ್ಲೆ ಹತ್ಯಾಕಾಂಡಗಳ ಸದ್ದಡಗಿದವು. ದಮನಕಾರಿ ಜಾತಿ ಶಕ್ತಿಗಳು ನೈತಿಕವಾಗಿ ಅಧೈರ್ಯಗೊಂಡವು. ಅಂತೆಯೇ ದಲಿತರೆಂದರೆ ಕಾಲಕಸವಲ್ಲ! ಗಾಳಿಗೆ ತೂರಿ ಹೋಗುವ ತರಗೆಲೆಗಳೂ ಅಲ್ಲ; ಅದೊಂದು ಎಚ್ಚರವಿಲ್ಲದೆ ಮಲಗಿದ್ದ ದೈತ್ಯಶಕ್ತಿ ಎಂಬುದು ದಲಿತರನ್ನೂ; ಒಳಗೊಂಡಂತೆ ಮುಖ್ಯವಾಹಿನಿಯ ಸಮಸ್ತರಿಗೂ ಮನದಟ್ಟಾಗಿ ಹೋಯಿತು. ಅಂತೆಯೇ ಪ್ರಾರಂಭದ ಅವಹೇಳನ, ಅಸಡ್ಡೆಗಳಿಗೆ ಕಾರಣವಾಗುತ್ತಿದ್ದ ದಲಿತ ಪದ ಅತ್ಯಂತ ಹೆಮ್ಮೆಯ, ಸ್ವಾಭಿಮಾನದ ಸಂಕೇತವಾಯಿತು. ತಮ್ಮ ಅಸ್ತಿತ್ವದ ಗುರುತೂ ತಿಳಿಯದಂತೆ ಬಚ್ಚಿಡ ಬಯಸುತ್ತಿದ್ದ ದಲಿತಲೋಕದ ಕೀಳರಿಮೆ ಕಳಚಿ ಬಿದ್ದು ಎದೆತಟ್ಟಿ ಹೇಳಿಕೊಳ್ಳುವ ಹಂತ ತಲುಪಿತು. ಕಾಲೇಜು ವಿದ್ಯಾರ್ಥಿಗಳು ತಮ್ಮ ಎದೆಯ ಮೇಲೆ ದಲಿತ ಪದವನ್ನು ಮುದ್ರಿಸಿಕೊಳ್ಳುವ ಅತಿರೇಕದ ಹಂತಕ್ಕೂ ಹೋಯಿತು.

ಒಮ್ಮಿಂದೊಮ್ಮೆಲೇ ದೃಶ್ಯ ಬದಲಾಯಿತು. ದಲಿತ ಹೋರಾಟಗಾರರು ಎಲ್ಲಾ ವರ್ಗಗಳಲ್ಲಿ ಮಾನ್ಯರಾಗತೊಡಗಿದರು. ಹಳ್ಳಿಗಾಡಿನ ಮನೆ ಮನೆಯ ಬಾಗಿಲು ಇವರಿಗಾಗಿ ತೆರೆದುಕೊಂಡವು. ಅರ್ಧರಾತ್ರಿಯ ಹೊತ್ತಿನಲ್ಲೂ ಹೋದ ಕಡೆ ತಮಗಿಲ್ಲದೆ ಹೋದರೂ ಇವರಿಗಾಗಿ ಅಕ್ಕರೆಯಿಂದ ಅಡುಗೆ ಸಿದ್ಧವಾಗುತ್ತಿತ್ತು. ಹೊದೆಯಲು ತಮಗಿಲ್ಲದಿದ್ದರೂ ಇವರಿಗಾಗಿ ಬೆಚ್ಚನೆಯ ಹೊದಿಗೆ ದೊರೆಯುತ್ತಿತ್ತು. ಚಾರ್ಜಿಗೆ ಹಣ ದೊರೆಯುತ್ತಿತ್ತು. ರಾಜ್ಯದ ಯಾವುದೇ ಮೂಲೆಯ ಅಪರಿಚಿತ ಊರಾದರೂ ಸರಿ ದಲಿತ ಸಂಘರ್ಷ ಸಮಿತಿ ಎಂಬ ಈ ಮೂರೇ ಮೂರು ಪದಗಳು ರಾಜ ಮರ್ಯಾದೆಗೆ ರಹದಾರಿಯಾಗುತ್ತಿದ್ದವು. ಸರ್ಕಾರದ ವಲಯಗಳಲ್ಲಿ ಕಂಪನ ಎಬ್ಬಿಸುತ್ತಿದ್ದವು. ರಾಜಕೀಯ ರಂಗವನ್ನು ಚಕಿತಗೊಳಿಸುತ್ತಿದ್ದವು.

ಜನಕಲಾ ಮೇಳದ ಒಟ್ಟು ಆಶಯ ಇಡೀ ದಲಿತಲೋಕ ತನ್ನೊಳಗೆ ಅಡಗಿರುವ ಅಪಾರವಾದ ಸಾಂಸ್ಕೃತಿಕ ಜಲನಿಧಿಯನ್ನು ಕಂಡುಕೊಳ್ಳುವುದು. ಹಾಗೂ ತನ್ನೊಳಗಿನ ಆ ಜೀವದ್ರವ್ಯವನ್ನೇ ರಕ್ಷಾಕವಚವನ್ನಾಗಿ ಪರಿವರ್ತಿಸಿ ಅವಕಾಶವಾದಿ, ವೈಯಕ್ತಿಕ ಹಿತಾಸಕ್ತಿ ಪ್ರಧಾನ ರಾಜಕೀಯದ ಹದ್ದಿನಕಣ್ಣಿಂದ ತಪ್ಪಿಸಿಕೊಳ್ಳುವಂತೆ ಮಾಡುವುದೇ ಆಗಿತ್ತು. ಅಷ್ಟೇ ಅಲ್ಲದೆ ಸಮುದಾಯದ ಒಡಲಲ್ಲೇ ಹುದುಗಿರುವ ಸಂಪನ್ಮೂಲಗಳನ್ನೇ ನೀರು ಗೊಬ್ಬರವಾಗಿಸಿ ಬಿಡುಗಡೆಯ ಸಸಿಯೊಂದನ್ನು ಹೆಮ್ಮರವಾಗಿಸುವ ಕನಸಿನದಾಗಿತ್ತು.

ಚಳವಳಿಯ ಈ ಉಬ್ಬರದಿಂದಾಗಿ ಊರೂರುಗಳಲ್ಲಿ ಹೊಸತಲೆಮಾರಿನ ಹುಡುಗರ ನೆತ್ತರು ಬಿಸಿಯಾಗುತ್ತಿತ್ತು. ಒಟ್ಟಾರೆ ದಸಂಸ ಒಂದು ಸರ್ವಶಕ್ತ ಒತ್ತಡದ ಗುಂಪಾಗಿ ತಲೆಎತ್ತಿ ನಿಂತಿತು. ಈ ಬೆಳವಣಿಗೆಗೆ ಮುಂಚೂಣಿಯಲ್ಲಿದ್ದ ಬರಹಗಾರರು, ನೇತಾರರು, ಕಾರಣವಾದಂತೆ ನೂರಾರು, ಸಾವಿರಾರು ಕಾರ್ಯಕರ್ತರು, ಸಾಮಾನ್ಯ ಜನರೂ ಕಾರಣರಾದರು.

ಇವರು ಯಾವ ಪ್ರತಿಫಲದ ನಿರೀಕ್ಷೆಯೂ ಇಲ್ಲದೆ ನಿತ್ಯ ನಡೆಯುತ್ತಿದ್ದ ಒಂದಿಲ್ಲೊಂದು ಹೋರಾಟದಲ್ಲಿ ಹೆಗಲಿಗೆ ಹೆಗಲಾಗಿ ಸಾಗಿದರು. ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಮುಖಾಮುಖಿಯಾದರು. ಪೋಲೀಸರ ಲಾಠಿ ಬೂಟಿನ ಏಟು ತಿಂದರು. ಅಮಾಯಕ ಅಶಕ್ತ ದಲಿತರ ರಕ್ಷಣೆಗಾಗಿ ಹಗಲು ರಾತ್ರಿ ಎನ್ನದೆ ಬರಿಗಾಲಲ್ಲೇ ಊರೂರು ನಡೆದರು. ಒಟ್ಟಾರೆ ನೂರಾರು ಭೂ ವಿವಾದಗಳ ಸುತ್ತ ಹೋರಾಟಗಳನ್ನು ಕಟ್ಟಿದರು. ಸಾವಿರಾರು ಎಕರೆ ಭೂಮಿ ಬಡವರಿಗೆ ದಕ್ಕಲು ಭೂ ಆಕ್ರಮಣ ಚಳುವಳಿಗಳನ್ನು ನಡೆಸಿದರು.

ಅದಮ್ಯ ಆತ್ಮ ವಿಶ್ವಾಸದಿಂದ ತುಂಬಿತುಳುಕುತ್ತಿದ್ದ ಇವರ ಕಣ್ಣುಗಳಿಗೆ ಮುಖ್ಯವಾಹಿನಿಯ ಕದಂಬಬಾಹುಗಳು ತಮ್ಮತ್ತ ಚಾಚಿ ಬರುತ್ತಿರುವ ಅಪಾಯದ ಸುಳಿವು ಕಾಣದೆ ಹೋಯಿತು. ಅಧಿಕಾರ ರಾಜಕಾರಣದ ಸಂಚಿನ ನೆರಳೊಂದು ಸಂಘಟನೆಯ ಒಳಗೆ ಸುಳಿಯತೊಡಗಿತು. ಅದು ಸಹಜ ಬೆಳವಣಿಗೆಯೂ ಆಗಿತ್ತು. ಅಷ್ಟರಲ್ಲಾಗಲೇ ರಾಜಕೀಯ ಅಧಿಕಾರವೊಂದೇ ಸಮಸ್ತ ದಲಿತ ಸಮಸ್ಯೆಗಳಿಗೆ ಕೀಲಿ ಕೈ ಎಂಬ ಅರಿವು ಸಂಘಟನೆಗಾಗಿತ್ತು. ಆದರೆ ಅದನ್ನು ನಿರ್ವಹಿಸುವ ನಿಟ್ಟಿನಲ್ಲಿ ಸ್ಪಷ್ಟ ನಿಲುವು, ಖಚಿತ ಕಣ್ಣೋಟ ಸಾಧ್ಯವಾಗದೆ ಹೋಯಿತು. ಹೀಗಾಗಿ ತಮ್ಮ ಅಸ್ತಿತ್ವದ ತಳಹದಿಯೇ ಸಡಿಲವಾಗಬಹುದಾದ ರಾಜಕೀಯ ತೀರ್ಮಾನಗಳಿಗೆ ಶರಣಾಗತೊಡಗಿದರು.

ಸಮೂಹ ರಾಜ್ಯಾಧಿಕಾರದ ಬದಲಿಗೆ ವ್ಯಯಕ್ತಿಕ ರಾಜಕೀಯ ಪ್ರಾತಿನಿಧ್ಯದ ಮೋಹಿನಿ ಭಸ್ಮಾಸುರ ಆಟಕ್ಕೆ ನಾಂದಿಯಾಯಿತು. ಇದರ ಫಲವಾಗಿ ದಸಂಸದ ತುಂಬಿದ ಕೊಡಕ್ಕೆ ಒಂದೆರಡು ಒಡಕಿನ ಸಣ್ಣ ರಂಧ್ರಗಳು ಮೂಡಿ ಅದುವರೆಗೂ ಸಾವಿರಾರು ಜನರ ಶ್ರಮದ ಬೆವರು ತುಂಬಿದ ಕೊಡ ಸೋರತೊಡಗಿತು. ದಲಿತ ಜಾಗೃತ ಶಕ್ತಿ ಇನ್ನಷ್ಟು ಛಿದ್ರೀಕರಣಕ್ಕೆ ಒಳಗಾಗಿ ಸೋರಿಹೋಗುವ ಮೊದಲೇ ತಡೆಗಟ್ಟುವ ಪ್ರಯತ್ನವಾಗಿ ಜನಕಲಾಮೇಳ ರೂಪಗೊಂಡಿತು.

ಜನಕಲಾ ಮೇಳದ ಒಟ್ಟು ಆಶಯ ಇಡೀ ದಲಿತಲೋಕ ತನ್ನೊಳಗೆ ಅಡಗಿರುವ ಅಪಾರವಾದ ಸಾಂಸ್ಕೃತಿಕ ಜಲನಿಧಿಯನ್ನು ಕಂಡುಕೊಳ್ಳುವುದು. ಹಾಗೂ ತನ್ನೊಳಗಿನ ಆ ಜೀವದ್ರವ್ಯವನ್ನೇ ರಕ್ಷಾಕವಚವನ್ನಾಗಿ ಪರಿವರ್ತಿಸಿ ಅವಕಾಶವಾದಿ, ವ್ಯಯಕ್ತಿತ ಹಿತಾಸಕ್ತಿ ಪ್ರಧಾನ ರಾಜಕೀಯದ ಹದ್ದಿನಕಣ್ಣಿಂದ ತಪ್ಪಿಸಿಕೊಳ್ಳುವಂತೆ ಮಾಡುವುದೇ ಆಗಿತ್ತು. ಅಷ್ಟೇ ಅಲ್ಲದೆ ಸಮುದಾಯದ ಒಡಲಲ್ಲೇ ಹುದುಗಿರುವ ಸಂಪನ್ಮೂಲಗಳನ್ನೇ ನೀರು ಗೊಬ್ಬರವಾಗಿಸಿ ಬಿಡುಗಡೆಯ ಸಸಿಯೊಂದನ್ನು ಹೆಮ್ಮರವಾಗಿಸುವ ಕನಸಿನದಾಗಿತ್ತು.

ಆದರೆ ಇಂತಹ ಸಸಿಯೊಂದನ್ನು ನೆಡಲೂ ಕೂಡ ಅವಕಾಶವಾಗದಂತೆ ಅವಕಾಶವಾದಿ ರಾಜಕಾರಣ ದಿಕ್ಕುತಪ್ಪಿಸಿತು. ಇದರ ದಟ್ಟ ಪರಿಣಾಮವನ್ನು ಶೀಘ್ರವೇ ಕಂಡುಕೊಂಡರೂ ಕೂಡ ಆಗಬಹುದಾಗಿದ್ದ ಅನಾಹುತವನ್ನಂತೂ ತಪ್ಪಿಸಲಾಗಲಿಲ್ಲ. ಈ ಅನಾಹುತದಿಂದಾಗಿ ಚಾರಿತ್ರಿಕ ಸಂದರ್ಭ ಸಂಘಟನೆಯನ್ನು ಅನಿವಾರ್ಯವಾಗಿ ಪಕ್ಷ ರಾಜಕಾರಣದ ಬಾಗಿಲ ಮುಂದೆ ತಂದು ನಿಲ್ಲಿಸಿತ್ತು. ಸಂಘಟನೆಯ ಪಾಲಿಗೆ ಆಗ ಉಳಿದಿದ್ದು ಒಂದೇ ಮಾರ್ಗ. ಪಕ್ಷ ರಾಜಕಾರಣ ಪ್ರವೇಶ! ಈ ದುರಂತವನ್ನು ತಪ್ಪಿಸಲು ರಾಜ್ಯಾಧಿಕಾರದ ಬಾಗಿಲು ತಟ್ಟುವ ತವಕದಲ್ಲಿದ್ದವರನ್ನು ಪ್ರತ್ಯೇಕಿಸಿ ಅವರೇ ಒಂದು ರಾಜಕೀಯ ಪಕ್ಷವನ್ನೋ ರಾಜಕೀಯ ವೇದಿಕೆಯನ್ನೋ ಕಟ್ಟಿಕೊಳ್ಳುವಂತೆ ಪ್ರೇರೇಪಿಸಲಾಯಿತು. ಹಾಗೂ ರಾಜಕೀಯ ದಾರಿ ಒಲ್ಲದವರು ದಲಿತ ಸಂಘರ್ಷ ಸಮಿತಿಯನ್ನು ಹಿಂದಿನಂತೆ ಮೂಲದ ಸಾಂಸ್ಕೃತಿಕ ಸಂಘಟನೆಯ ಸ್ವರೂಪದಲ್ಲೆ ಉಳಿಸಿಕೊಳ್ಳುವುದಕ್ಕೂ ಸಿದ್ಧವಿದ್ದರು.

ಆದರೆ ರಾಜಕೀಯ ದಾರಿ ಹಿಡಿಯುವ ಉತ್ಸಾಹದಲ್ಲಿದ್ದವರೇ ಬಹುಪಾಲು ದಸಂಸದ ನಾಯಕರೂ ವಕ್ತಾರರೂ ಆಗಿದ್ದರಿಂದ ಸಂಘಟನೆಯಿಂದ ತಾವು ಮಾತ್ರ ಪ್ರತ್ಯೇಕಗೊಂಡರೆ ತಮ್ಮ ರಾಜಕೀಯ ಚೌಕಾಸಿ ಶಕ್ತಿ ಕ್ಷೀಣಿಸುತ್ತದೆ ಎಂದು ಹೆದರಿದರು. ಹಾಗೂ ಪ್ರತ್ಯೇಕ ಪಕ್ಷ ಅಥವಾ ವೇದಿಕೆ ಕಟ್ಟುವ ಶ್ರಮಕ್ಕೆ ಮುಂದಾಗಲು ಹಿಂಜರಿದರು. ಆಗ ಉಳಿದ ದಾರಿ ಯಾವುದಾದರೂ ಹಾಲಿ ರಾಜಕೀಯ ಪಕ್ಷವನ್ನೇ ಸೇರಿಕೊಳ್ಳುವುದು ಉಳಿದಂತೆ ಮೂಲಸ್ವರೂಪ

ಉಳಿಸಿಕೊಳ್ಳುವ ದಸಂಸ ಅಂಥ ಪಕ್ಷಕ್ಕೆ ಕರಾರು ಬೆಂಬಲ ಕೊಡಬಹುದೆಂದೂ ತೀರ್ಮಾನಿಸಲಾಯಿತು.

ಇದಾದ ಕೆಲವೇ ದಿನಗಳಲ್ಲಿ ಆಶ್ಚರ್ಯವೆಂಬಂತೆ ದಸಂಸ ಸಂಘಟನೆಯೇ ಇಡಿ ಇಡಿಯಾಗಿ ರಾಜಕೀಯ ಪಕ್ಷವೊಂದರ ಮಡಿಲಿಗೆ ಸೇರಿದ ಪವಾಡವೂ ನಡೆದು ಹೋಯಿತು! ಬಹುಶಃ ಇಂಡಿಯಾದ ಪರ್ಯಾಯ ರಾಜಕಾರಣದ ಇತಿಹಾಸದಲ್ಲಿ ಜನ ಚಳವಳಿಯ ಸಂಘಟನೆಯೊಂದು ಇಷ್ಟೊಂದು ಅಮಾಯಕವಾಗಿ ತನ್ನ ಕಣ್ಣನ್ನೇ ತಾನು ಚುಚ್ಚಿಕೊಂಡ ನಿದರ್ಶನ ಇದೇ ಇರಬೇಕು. ಇಷ್ಟೇ ಅಲ್ಲದೆ ಕೆಲವೇ ದಿನಗಳಲ್ಲಿ ಇನ್ನೊಂದು ಒಡಕೂ ಸಂಭವಿಸಿತು.

ಒಂದು ಗುಂಪು ರಾಜಕೀಯ ಪಕ್ಷದ ಒಳಗೇ ಉಳಿದರೆ ಇನ್ನೊಂದು ಗುಂಪು ಆ ಪಕ್ಷದಿಂದ ಹೊರ ನಡೆಯಿತು. ಇದು ದಲಿತ ಸಂಗ್ರಹಿತ ಶಕ್ತಿ ಕೊಡಕ್ಕೆ ಮೂಡಿದ ಬಹುದೊಡ್ಡ ರಂಧ್ರಗಳು. ಇದೇ ರೀತಿ ಈ ಹಿಂದೆ ಆಗಿದ್ದ ಎರಡು ರಂಧ್ರಗಳಿಂದ ಸೋರಿ ಹೋದ ಶಕ್ತಿ ದ್ರವ್ಯ ಮುಂದೆ ಇನ್ನೆರಡೋ ಮೂರೋ ಕವಲುಗಳಾಗಿ, ಆ ಕವಲುಗಳೂ ಒಡೆದೂ ಇನ್ನೂ ಎರಡಾಗಿ ಹೀಗೆ...ಒಟ್ಟಾರೆ ಹುಟ್ಟಿದ್ದ ಇಪ್ಪತ್ತೈದು ವರ್ಷಗಳಲ್ಲಿ ಒಂದು ಮಹಾನ್ ಬದಲಾವಣೆಗೆ ಕಾರಣವಾಗಬಹುದಾಗಿದ್ದ ದಲಿತ ಶಕ್ತಿ ವಿಭಜಕ ರಾಜಕಾರಣದ ಸ್ವ ವಂಚನೆಗೆ ಒಳಗಾಗಿ ಚಳವಳಿಯ ರಾಜಕಾರಣವನ್ನು ಪಕ್ಷ ರಾಜಕಾರಣದ ಮಟ್ಟಕ್ಕೆ ತಂತಾನೇ ತಂದು ನಿಲ್ಲಿಸಿಕೊಂಡಿತು.

ಈ ಪಕ್ಷ ರಾಜಕಾರಣ ಪ್ರವೇಶದ ನಂತರ ದಲಿತ ಅಸ್ತಿತ್ವ ರೂಪಿಸುವ ಒಂದೇ ಒಂದು ಕಾರ್ಯಕ್ರಮ ಕೂಡ ಯಾವುದೇ ಬಣದಿಂದಲೂ ಮೂಡಿ ಬರದೆ ಹೋಯಿತು. ಕೇವಲ ಆಯಾ ಬಣದ ಪಕ್ಷರಾಜಕಾರಣ ಬದ್ಧತೆಗೆ ತಕ್ಕಂತೆ ಕಾರ್ಯಕ್ರಮಗಳು ನಡೆಯತೊಡಗಿದವು. ರಾಜ್ಯಾಧಿಕಾರಕ್ಕೆ ಒಯ್ಯುವ ಪಕ್ಷ ರಾಜಕಾರಣದ ಬಾಗಿಲು ತುಂಬಾ ಇಕ್ಕಟ್ಟಿನದಾಗಿರುವುದರಿಂದ ಸಹಜವಾಗಿಯೇ ಸಮೂಹ ಅಥವಾ ಸಮಷ್ಠಿಗೆ ಅಲ್ಲಿ ಪ್ರವೇಶ ಕಷ್ಟಸಾಧ್ಯ. ಆದ್ದರಿಂದ ಸಮಷ್ಠಿಯ ಬದಲಿಗೆ ವ್ಯಕ್ತಿ ವರ್ಚಸ್ಸಿನ ಹೊಸ ಶೈಲಿಯೊಂದು ಹುಟ್ಟಿಕೊಂಡಿತು. ಹೀಗಾಗಿ ಸಮಷ್ಠಿಗೆ ಬದಲಾಗಿ ವ್ಯಕ್ತಿ ಚಳವಳಿಯ ಬದಲಿಗೆ ಮುಖ್ಯವಾಹಿನಿಯೊಂದಿಗೆ ಚೌಕಾಸಿ ಸ್ವರೂಪವೇ ಪ್ರಧಾನವಾಯಿತು. ಇದು 70ರ ದಶಕದಿಂದ 90ರ ಘಟ್ಟದವರೆಗಿನ ದಲಿತ ಸಮುದಾಯದ ಸಮಷ್ಠಿ ನಡಿಗೆಯ ಫಲಿತಾಂಶ.

ಈ ಎರಡು ದಶಕಗಳ ಅವಧಿ ಬಿಡುಗಡೆಯ ಕನಸುಗಳನ್ನು, ಆತ್ಮ ವಿಶ್ವಾಸವನ್ನು ಕುಗ್ಗಿಸಿ ಚರಿತ್ರೆಯಲ್ಲೇ ಮೊಟ್ಟ ಮೊದಲ ಬಾರಿಗೆ ತನ್ನದೇ ಶಕ್ತಿ, ಸಾಮರ್ಥ್ಯಗಳಲ್ಲಿ ನಂಬಿಕೆ ತಾಳಿದ್ದ ದಲಿತ ಸಮುದಾಯವನ್ನು ಅಸ್ಥಿರಗೊಳಿಸಿತು. ಹಾಗೂ ಕಣ್ಣ ಮುಂದೆ ಇದ್ದ ದಲಿತ ಸಮುದಾಯದ ಕಟ್ಟಕಡೆಯ ಮನುಷ್ಯ ಮರೆಯಾಗಿ ಆ ಸ್ಥಾನವನ್ನು ಅನುಕೂಲಸ್ಥ ಮಧ್ಯಮವರ್ಗದ ಎಡಬಿಡಂಗಿ ಅವಕಾಶವಾದಿ ದಲಿತ ಆಕ್ರಮಿಸಿಕೊಂಡ. ಇಂಥ ದುರಂತಕ್ಕೆ ವಸ್ತು ಸ್ಥಿತಿಯೂ ಕಾರಣವಾಗಿತ್ತು.

ಎರಡು ದಶಕಗಳ ಹೋರಾಟದ ಹಾದಿಯಲ್ಲಿ ತಮ್ಮ ಸ್ವಂತ ಬದುಕಿನ ಭವಿಷ್ಯದ ನೆಲೆಗಳನ್ನೇ ನುಚ್ಚು ನೂರು ಮಾಡಿಕೊಂಡಿದ್ದ ನೂರಾರು ನಾಯಕರು, ಸಾವಿರಾರು ಕಾರ್ಯಕರ್ತರು ನಿತ್ಯದ ಉಳುವಿಗಾಗಿ, ಅರ್ಥಹೀನ ಕಾರ್ಯಕ್ರಮಗಳಿಗೆ ಅಗತ್ಯವಿದ್ದ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ದಲಿತ ಸಮುದಾಯದ ಕಟ್ಟಕಡೆಯ ಮನುಷ್ಯನನ್ನು ಪಕ್ಕಕ್ಕೆ ತಳ್ಳಿ ಆ ಸ್ಥಾನವನ್ನು ತಾನು ಆಕ್ರಮಿಸಿಕೊಂಡಿದ್ದ ದಲಿತ ನೌಕರ ಅಧಿಕಾರಿಗಳ ಮೊರೆ ಹೋಗಬೇಕಾದ ದುರಂತಕ್ಕೆ ಸಿಕ್ಕಿಬಿದ್ದರು. ಕ್ರಮೇಣ ಈ ಮಧ್ಯಮವರ್ಗದ ಎಡಬಿಡಂಗಿ ದಲಿತ ನೌಕರ ಅಧಿಕಾರಿ ತನ್ನ ಉಳಿವಿಗೆ ಸಂಘಟನೆಯತ್ತ ಕೈಚಾಚುವ ದೀನ ಸ್ಥಿತಿಯಿಂದ ಸಂಘಟನೆಗಳ ಯಜಮಾನಿಕ ವಾರಸುದಾರಿಕೆಯನ್ನು ನಿರ್ದೇಶಿಸುವ ಹಂತ ತಲುಪಿದ. ತಮ್ಮ ಹಿತಾಸಕ್ತಿಗಳಿಗೆ ಬೆಲೆಕೊಡದ ದಲಿತ ನೌಕರ ಅಧಿಕಾರಿಗಳಿಗೆ ಬೆದರಿಕೆ ಕಿರುಕುಳಗಳೂ ಮೊದಲಾದವು.

ಮೊದಲ ಬಾರಿಗೆ ಕಟ್ಟಕಡೆಯ ಮನುಷ್ಯನ ಕಣ್ಣೀರು ತೊಡೆಯಲು ಬಳಕೆಯಾಗುತ್ತಿದ್ದ ಸಂಘಟನೆಗಳ ಲೆಟರ್‌ಹೆಡ್‌ಗಳು, ಇಂತಿಂಥ ನೌಕರರನ್ನು, ಇಂತಿಂಥ ಅಧಿಕಾರಿಗಳನ್ನು ಇಂತಿಂಥ ಜಾಗಗಳಿಗೆ ವರ್ಗಾವಣೆ ಮಾಡಿ ಎಂದು ಮೊರೆಯಿಡುತ್ತಾ ವಿಧಾನಸೌಧದ ಮಂತ್ರಿ, ಶಾಸಕ, ಸಚಿವಾಲಯಗಳ ಮೇಜುಗಳನ್ನು ಅಲಂಕರಿಸತೊಡಗಿದವು. ಚಳವಳಿಯ ಮೌಲ್ಯಗಳ ಪತನ ಪ್ರಾರಂಭವಾಯಿತು. ಕಾರ್ಯಕ್ರಮಗಳಿಗೆ ಕನಿಷ್ಠ ವಿವೇಚನೆಯೂ ಇಲ್ಲದಂತೆ ಸಂಪನ್ಮೂಲಗಳ ಕ್ರೋಢೀಕರಣದ ನಾನಾ ಶೈಲಿಗಳು ಹುಟ್ಟಿಕೊಂಡವು.

ಆರಂಭದಲ್ಲಿ ಸಾವಿರ ಕರಪತ್ರ ಮುದ್ರಿಸಲು ತಗಲುತ್ತಿದ್ದ ನೂರಿನ್ನೂರು ರೂಪಾಯಿಗಳನ್ನು ಸಂಗ್ರಹಿಸಲು ಹತ್ತಾರು ಜನರನ್ನು ಸಂಪರ್ಕಿಸುವ ಶ್ರಮದ ಬದಲು ಒಬ್ಬನೇ ವ್ಯಕ್ತಿಯಿಂದ ಹತ್ತು ಸಾವಿರ ಕರಪತ್ರ ಮುದ್ರಿಸಲು ಬೇಕಾದ ಸುಲಭದ ಸಂಪನ್ಮೂಲ ಕ್ರೋಢೀಕರಣದ ಮಾದರಿಯಿಂದಾಗಿ ದಲಿತ ಸಮುದಾಯದ ಒಡಲಲ್ಲಿ ಏರ್ಪಡಿಸುತ್ತಿದ್ದ ಜೈವಿಕ ಸಂಪರ್ಕ ಸೇತುವೆ ಕಡಿದು ಬಿತ್ತು. ಸಂಪನ್ಮೂಲ ನೆಲೆಗಳ ಆಶ್ರಿತರಾಗಬೇಕಾಯಿತು. ಪಟ್ಟಭದ್ರ ಹಿತಾಸಕ್ತಿಗಳೊಂದಿಗೆ ಅನುಸಂಧಾನ ಆರಂಭವಾಯಿತು. ರಾಜಧಾನಿಯ ಸುತ್ತಮುತ್ತ ಭೂಮಿಯ ಬೆಲೆ ಆಕಾಶಕ್ಕೇರಿದಾಗ ಚಳವಳಿಯ ನೇತಾರರು ಅನೇಕ ಭೂ ವಿವಾದಗಳ ಮಧ್ಯವರ್ತಿಗಳಾಗಿಯೂ ಪರಿಣಮಿಸಿದರು.

ಒಟ್ಟಾರೆ ದಲಿತ ಸಮುದಾಯದ ನೈತಿಕ ಆತ್ಮಶಕ್ತಿ ಕುಂದತೊಡಗಿತು. ನಾಯಕತ್ವಕ್ಕೆ ಪದಾಧಿಕಾರ ಸ್ಥಾನಗಳಿಗೆ ಎಲ್ಲ ಬಣಗಳಲ್ಲೂ ಪೈಪೋಟಿ, ಬಲಾಬಲ ಪ್ರದರ್ಶನ, ಹಿಂಸೆ, ಘರ್ಷಣೆಗಳಿಗೂ ಇದು ದಾರಿಯಾಯಿತು. ಈ ಆತ್ಮಹತ್ಯಾತ್ಮಕ ಪ್ರವೃತ್ತಿಯಿಂದ ತತ್ತರಿಸುತ್ತಿದ್ದ ದಲಿತ ಸಮುದಾಯದ ನೆತ್ತಿಯ ಮೇಲೆ ಜಾಗತಿಕ ಮಟ್ಟದ ಆರ್ಥಿಕ ಬದಲಾವಣೆಗಳ ಬಿರುಗಾಳಿ ಕೆಂಡಗಳ ಮಳೆಯನ್ನೇ ತಂದು ಸುರಿಯಿತು. ಜೈವಿಕ ಸಮುದಾಯಗಳ ಸಾಂಸ್ಕೃತಿಕ ಬೇರುಗಳನ್ನು ಕತ್ತರಿಸಿ ಹಾಕುವುದೇ ಜಾಗತಿಕ ಬಂಡವಾಳದ ಮೂಲ ಉದ್ದೇಶವಾದ್ದರಿಂದ ಮುಕ್ತ ಮಾರುಕಟ್ಟೆಯ ಮಹಾದ್ವಾರ ಕೈಗೆಟುಕಿಸಿಕೊಳ್ಳುವ ಸಾಮರ್ಥ್ಯ ಇದ್ದವರಿಗೆ ಕಲ್ಪವೃಕ್ಷವಾಗಿಯೂ, ಮೊದಲೇ ಮೂಲೆಗುಂಪಾದ ಜನಸಮುದಾಯಗಳಿಗೆ ಮಾರಣಪ್ರಾಯವಾಗಿಯೂ ಪರಿಣಮಿಸಿತು. ತತ್ಫಲವಾಗಿ ಪುರೋಹಿತಶಾಹಿ ಜ್ಞಾನ ಬಂಡವಾಳ ಜಾಗತಿಕ ಬಂಡವಾಳದಲ್ಲಿ ಪಾಲು ಪಡೆಯಿತು.

ಮೊಟ್ಟ ಮೊದಲ ಬಾರಿಗೆ ಇಂಡಿಯಾದ ನೆಲದಿಂದ ಕಣ್ಮರೆಯಾಗಿದ್ದ ಬ್ರಾಹ್ಮಣ ಬಂಡವಾಳ ಕಲ್ಪನೆಗೂ ನಿಲುಕದಷ್ಟು ಅಗಾಧ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬಂತು. ಈ ಆರ್ಥಿಕ ಬಲ ಮೂಲಭೂತವಾದಿ ಶಕ್ತಿಗಳ ಪುನಃಶ್ಚೇತನಕ್ಕೆ ಪೂರಕವಾಗಿ ಆಶಕ್ತಿಗಳು ದೇಶದ ಅಧಿಕಾರ ಗದ್ದುಗೆ ಆಕ್ರಮಿಸಲು ನೆರವಾಯಿತು. ಇದರಿಂದಾಗಿ ಚರಿತ್ರೆಯ ಸಹಜ ನಡಿಗೆಯಂತೆ ಈ ಪುರೋಹಿತಶಾಹಿ ಮೇಲುಗೈ ಪಡೆದಾಗಲೆಲ್ಲಾ ಅದರ ಇನ್ನೊಂದು ಧ್ರುವವಾದ ದಲಿತ ಸಮುದಾಯ ಛಿದ್ರೀಕರಣ ಪ್ರಕ್ರಿಯೆಗೆ ಒಳಗಾಯಿತು. ಚರಿತ್ರೆಯಲ್ಲಿ ಇದು ಎಷ್ಟು ಸಹಜ ವಿದ್ಯಮಾನವೆಂದರೆ ದಲಿತ ಸಮುದಾಯದಲ್ಲಿ ವಿಘಟನೆ, ವಿಕಲ್ಪಗಳು ಪರಾಕಾಷ್ಠೆಗೆ ತಲುಪಿದ್ದಾವೆಂದರೆ ಅದರ ಅರ್ಥ ಬೇರೇನೂ ಅಲ್ಲದೆ ಪುರೋಹಿತಶಾಹಿ

ಪಕ್ಷ ರಾಜಕಾರಣ ಪ್ರವೇಶದ ನಂತರ ದಲಿತ ಅಸ್ತಿತ್ವ ರೂಪಿಸುವ ಒಂದೇ ಒಂದು ಕಾರ್ಯಕ್ರಮ ಕೂಡ ಯಾವುದೇ ಬಣದಿಂದಲೂ ಮೂಡಿ ಬರದೆ ಹೋಯಿತು. ಕೇವಲ ಆಯಾ ಬಣದ ಪಕ್ಷರಾಜಕಾರಣ ಬದ್ಧತೆಗೆ ತಕ್ಕಂತೆ ಕಾರ್ಯಕ್ರಮಗಳು ನಡೆಯತೊಡಗಿದವು. ರಾಜ್ಯಾಧಿಕಾರಕ್ಕೆ ಒಯ್ಯುವ ಪಕ್ಷ ರಾಜಕಾರಣದ ಬಾಗಿಲು ತುಂಬಾ ಇಕ್ಕಟ್ಟಿನದಾಗಿರುವುದರಿಂದ ಸಹಜವಾಗಿಯೇ ಸಮೂಹ ಅಥವಾ ಸಮಷ್ಠಿಗೆ ಅಲ್ಲಿ ಪ್ರವೇಶ ಕಷ್ಟ ಸಾಧ್ಯ. ಆದ್ದರಿಂದ ಸಮಷ್ಠಿಯ ಬದಲಿಗೆ ವ್ಯಕ್ತಿ ವರ್ಚಸ್ಸಿನ ಹೊಸ ಶೈಲಿಯೊಂದು ಹುಟ್ಟಿಕೊಂಡಿತು. ಹೀಗಾಗಿ ಸಮಷ್ಠಿಗೆ ಬದಲಾಗಿ ವ್ಯಕ್ತಿ ಚಳವಳಿಯ ಬದಲಿಗೆ ಮುಖ್ಯವಾಹಿನಿಯೊಂದಿಗೆ ಚೌಕಾಸಿ ಸ್ವರೂಪವೇ ಪ್ರಧಾನವಾಯಿತು.

ವಿಷವೃಕ್ಷದ ಬೇರುಗಳು ಇನ್ನಷ್ಟು ಆಳಕ್ಕೆ ಇಳಿಯುತ್ತಿವೆ ಎಂಬುದು ಮಾತ್ರ.

ಈ ಎಲ್ಲ ವಿದ್ಯಮಾನಗಳಿಂದಾಗಿ ಕಾಲು ಶತಮಾನದ ಅಂಚಿಗೆ ಬಂದು ನಿಂತಿರುವ ದಲಿತ ಪ್ರಜ್ಞೆಯ ನಡಿಗೆ ಸಮುದಾಯ ನಿರ್ಮಾಣದಲ್ಲಿ ಕೊನೆಯಾಗುವ ಬದಲು ಸಮುದಾಯ ವಿಘಟನೆಯಲ್ಲಿ ಕೊನೆಗೊಂಡಿದೆ. ದಲಿತರ ಬದುಕಿನ ನೆಲೆಗಳು ಚೆಲ್ಲಾಪಿಲ್ಲಿಯಾಗಿವೆ. ದಲಿತ ಅಸ್ತಿತ್ವವನ್ನು ಪೂರ್ಣ ದಿವಾಳಿಯ ಹಂತಕ್ಕೆ ಒಯ್ಯಲಾಗುತ್ತಿದೆ. ದಲಿತ ಪ್ರಜ್ಞೆಯ ಭಾಗವಾದ ದಲಿತ ಚಳವಳಿಯನ್ನು ವಾರಸುದಾರಿಕೆಯ ವ್ಯಾಧಿ ವ್ಯಾಪಿಸಿ ಸಮಷ್ಠಿಯನ್ನೇ ತಿಂದು ಹಾಕುತ್ತಿದೆ. ದಲಿತ ಸಮುದಾಯದ ಸಬಲೀಕರಣ ಮುಂದೊಡ್ಡಿ ವಿದೇಶಿ ಹಣ ಪಡೆಯುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಸರ್ಕಾರಿ ಸ್ವಾಮ್ಯದ ಸೇವಾ ಸಂಸ್ಥೆಗಳ ಧನಬಲ ಸಮಷ್ಠಿ ನಡಿಗೆಯ ಹೆಜ್ಜೆಗುರುತುಗಳನ್ನು ಅಳಿಸಿ ಹಾಕಿ ಅಲ್ಲಿ ತಮ್ಮ ವಾರಸುದಾರಿಕೆಯನ್ನು ರುಜುವಾತುಪಡಿಸಿಕೊಳ್ಳುವ ಚಾರಿತ್ರಿಕ ವಂಚನೆಯಲ್ಲಿ ತೊಡಗಿವೆ.

ಇದು ದಲಿತ ಸಮುದಾಯವನ್ನು ಇನ್ನಷ್ಟು ಪರಾಧೀನತೆಗೆ ದೂಡುವುದರಲ್ಲಿ ಕೊನೆಯಾಗುತ್ತದೆ. ಸಂವಿಧಾನಾತ್ಮಕ ಮೀಸಲಾತಿ ಖಾಸಗೀಕರಣದ ಫಲವಾಗಿ ಹೇಳ ಹೆಸರಿಲ್ಲದಂತಾಗಿದೆ. ಒಟ್ಟಾರೆ ದಲಿತ ಸಮುದಾಯದ ಅಸ್ತಿತ್ವ ಕಣ್ಮರೆಯ ಅಂಚಿಗೆ ಸರಿಸ್ಪಡುತ್ತಿದೆ. ಇದುವರೆಗೂ ಪಡೆದಿರುವ ಮೀಸಲಾತಿಯ ಫಲಾನುಭವಿಗಳು ಸಮುದಾಯಕ್ಕೆ ತಮ್ಮ ಕಿಂಚಿತ್ ಕೊಡುಗೆಯನ್ನು ನೀಡಿದಷ್ಟು ನಿಷ್ಕಾಳಜಿಯ ಚಿಪ್ಪಿನಲ್ಲಿ ಹುದುಗಿ ಹೋಗಿದ್ದಾರೆ. ಈ ಕಠೋರ ವಾಸ್ತವದ ಸೂಚನೆ ಇತ್ತೀಚೆಗೆ ದಲಿತ ಸಮುದಾಯದ ಮೇಲೆ ನಡೆದಿರುವ ಘೋರ ಹತ್ಯಾಕಾಂಡಗಳ ಬಗ್ಗೆ ಪ್ರತಿಕ್ರಿಯೆ ತೋರದಿರುವ ಜಡತ್ವದಲ್ಲಿ ಪ್ರತಿಫಲನಗೊಂಡಿದೆ.

ಈ ಎಲ್ಲಾ ನಿರಾಶಾದಾಯಕ ವಾಸ್ತವದ ಮಧ್ಯೆಯೂ ಭರವಸೆಯ ಬೆಳ್ಳಿಗೆರೆಗಳು ಇಲ್ಲದಿಲ್ಲ. ಮೂರು ದಶಕಗಳ ಚಳವಳಿಯಲ್ಲಿ ಹುಟ್ಟು ಬಂದಿರುವ ಎಷ್ಟೋ ಕಾರ್ಯಕರ್ತರಲ್ಲಿ ಅನುಭವಿಗಳು, ಬಿಡುಗಡೆಯ ಕನಸುಗಾರರೂ, ಹೊಸ ದಿಕ್ಕುಗಳ ಹುಡುಕಾಟಗಾರರೂ ಇದ್ದಾರೆ. ಇದಲ್ಲದೆ ಯಾವ ಚಳವಳಿಯ ಬಣಗಳೊಂದಿಗೂ ಇಲ್ಲದ ಆದರೆ ಚಳವಳಿ ಕಡೆಗಣಿಸಿದ ಎಷ್ಟೋ ನೆಲೆಗಳಲ್ಲಿ ಮೌನವಾಗಿ ತಮ್ಮ ಕಾರ್ಯವನ್ನು ತಾವು ಮುಂದುವರೆಸಿರುವ ಎಷ್ಟೋ ಅನಾಮಿಕರಿದ್ದಾರೆ. ಇವರೆಲ್ಲಾ ಚಳವಳಿಯ ಭೌತಿಕ ಕಾಯ ಕ್ಷಯಿಸಿದ್ದರೂ ಅದರ ಚೈತನ್ಯದ ಹರಿಕಾರರಾಗಿದ್ದಾರೆ. ಈ ಭರವಸೆಯೇ ಮುದೊಂದು ದಿನ ಈಗಿರುವ ದಲಿತ ಚಳವಳಿಯ ಸ್ವರೂಪಕ್ಕಿಂತ ಸಂಪೂರ್ಣ ಬೇರೆಯೇ ಆದ ಚಳವಳಿಯ ಹುಟ್ಟಿಗೆ ಕಾರಣವಾಗುತ್ತದೆ ಎಂಬ ನಂಬಿಕೆ ನಮ್ಮದು.

ಅಂತಹ ಚಳವಳಿಯ ಹುಟ್ಟಿಗಾಗಿ ಸಂಭ್ರಮಿಸುತ್ತಾ ಆತ್ಮ ನಿರೀಕ್ಷಣೆಯ ಸ್ವಜಾಗೃತಿಗೆ ಮುಂದಾಗುವ ಹಂಬಲಿಗರು ನಾವಾಗಿದ್ದೇವೆ. ಒಟ್ಟಾರೆ ಇದುವರೆಗೂ ಕಣ್ಣಿಗೆ ಕಾಣಿಸುತ್ತಿದ್ದ ಓತಿಕ್ಯಾತ ಸ್ಥಿತಿಯಿಂದ ಕಣ್ಣಿಗೆ ಕಾಣದ ಮಣ್ಣೊಳಗಿನ ಎರೆಹುಳುಗಳ ಹಂತಕ್ಕೆ ನಮ್ಮನ್ನು ನಾವು ಇಳಿಸಿಕೊಳ್ಳುವ ಪ್ರಯೋಗ ಮಾತ್ರ ನಮ್ಮ ಕಾಯಕ ಎಂದು ನಂಬಿರುವವರು ನಾವು. ಹೌದು ನಾವು ಕೂಡ ಈ ಪ್ರಕ್ರಿಯೆಗಳ ಒಂದು ಭಾಗ. ಇದುವರೆಗಿನ ಸಮಷ್ಠಿ ನಡಿಗೆಯ ಎಲ್ಲಾ ಒಳಿತು ಕೆಡುಕಿಗೆ ನಾವು ಕಾರಣರು. ನಮ್ಮೊಳಗಿನ ತಪ್ಪು ಆಲೋಚನೆ, ಕ್ರಿಯೆ, ಸ್ವಾರ್ಥ, ಕೆಡುಕು ಕೂಡ ಸಮುದಾಯದ ಇವತ್ತಿನ ಈ ದುಃಸ್ಥಿತಿಗೆ ಕಾರಣವಾಗಿದೆ ಎಂಬ ಪಶ್ಚಾತ್ತಾಪ ನಮಗಿದೆ. ಆದ್ದರಿಂದ ನಮ್ಮನ್ನು ನಾವು ಸರಿಗೊಳಿಸಿಕೊಳ್ಳಲು, ಶುದ್ಧಗೊಳಿಸಿಕೊಳ್ಳಲು ಇರುವ ಏಕೈಕ ಮಾರ್ಗ, ಸಮುದಾಯವನ್ನು ಒಳಗಿನಿಂದ ಕಟ್ಟುವ ಪ್ರಯತ್ನವೊಂದೇ ಎಂದು ನಂಬಿದವರಾಗಿದ್ದೇವೆ.

ಮಾನವ ಚರಿತ್ರೆಯಲ್ಲಿ ನಮಗಿಂತಲೂ ಅಧಿಕ ಛಿದ್ರೀಕರಣಕ್ಕೆ, ಹಲ್ಲೆ ಆಘಾತಗಳಿಗೆ ಈಡಾಗಿ ಕಣ್ಮರೆ ಅಂಚಿಗೆ ಸರಿಯಲ್ಪಟ್ಟ ಹಲವು ಸಮುದಾಯಗಳು ಮರಳಿ ಪುನಃಶ್ಚೇತನಗೊಂಡ ನಿದರ್ಶನಗಳು ನಮ್ಮೆದುರಿಗಿವೆ. ಮಾತೃಭೂಮಿಯೂ ಇಲ್ಲದ ಯಹೂದಿಗಳು, ಟಿಬೆಟಿಯನ್ನರು, ಕರಿಯರು ಮನುಕುಲದ ಕ್ಯಾನವಾಸ್ಸಿನಲ್ಲಿ ಅಸ್ತಿತ್ವ ದಾಖಲಿಸಿಕೊಂಡ ಚರಿತ್ರೆಯ ಪುಟಗಳು ನಮ್ಮ ಎದುರಿವೆ. ಆದ್ದರಿಂದ ಕೊಪ್ಪಳದಲ್ಲಿ ಅಂಬೇಡ್ಕರ್ ಪ್ರತಿಮೆಗೆ ನಾವೇ ಮಾಡಿರುವ ಅವಮಾನದ ನೈತಿಕ ಹೊಣೆ ಹೊರೋಣ. ಗುಜರಾತಿನಲ್ಲಿ ಕೋಮುವಾದಿಗಳ ಕೈಗೊಂಬೆಯಾಗಿ ಕೊಲೆಗಡುಕರಾಗಿರುವ ಅನೈತಿಕತೆಗೆ ಮರುಗೋಣ. ಮಾಫಿಯಾ ಸ್ವರೂಪ ತಾಳುತ್ತಿರುವ ಸಂಘಟನೆಗಳ ಕೃತ್ಯಗಳಿಂದ ಸಮುದಾಯದ ಮೇಲಾಗುವ ದುಷ್ಪರಿಣಾಮಗಳನ್ನು ಗಮನಿಸೋಣ. ಬಣಗಳ ರಾಜಕಾರಣದ ಕಣ್ಣಿಗೆ ಕಾಣದ ಅಮಾಯಕ ದಲಿತರ ಹತ್ಯೆಗಳ ಸೂತಕ ಕಳೆದುಕೊಳ್ಳುವ ಮಾರ್ಗಗಳನ್ನು ಹುಡುಕೋಣ. ಪ್ರಸ್ತುತ ಪ್ರಚಲಿತದಲ್ಲಿರುವ ಯಾವ ಬಣಗಳ ರಾಜಕೀಯ ಸಿದ್ಧಾಂತಕ್ಕೂ ನಾವು ಬದ್ಧರಲ್ಲ ಎನ್ನುವುದನ್ನು ಮನವರಿಕೆ ಮಾಡಿಕೊಡಲು ಯತ್ನಿಸೋಣ. ನಾವು ಯಾರನ್ನೂ ವ್ಯಕ್ತಿಗತಿವಾಗಿ ಬಹಿಷ್ಕರಿಸದಿರೋಣ. ದೂರ ಮಾಡುವುದಿಲ್ಲವೆಂದು ಒತ್ತಿ ಹೇಳೋಣ. ನಮ್ಮೊಂದಿಗೆ ಯಾವುದೇ ಜಾತಿ, ಮತ, ಪಂಥಗಳ ಯಾರೇ ಬಂದರೂ ಸ್ವಾಗತಿಸೋಣ. ಒಟ್ಟಾರೆ ನಮ್ಮ ಸಾಮೂಹಿಕ ಕ್ರಿಯೆಯನ್ನು, ನಡಿಗೆ ಸಮುದಾಯವನ್ನು ಒಳಗಿನಿಂದ ಗಟ್ಟಿಗೊಳಿಸುವುದಕ್ಕಷ್ಟೇ ಮಿತಿಗೊಳಿಸಿಕೊಳ್ಳೋಣ.

ಸಮುದಾಯದ ಎಲ್ಲರನ್ನೂ ನಮ್ಮೊಂದಿಗೆ ನಡೆಯಲು ಆಹ್ವಾನಿಸುತ್ತೇವೆ. ಅವರು ಮುಂದಿದ್ದರೆ ನಾವು ಅವರ ಹಿಂದೆ ನಡೆಯಲು ಸಿದ್ಧರಿದ್ದೇವೆ. ಯಾರೊಬ್ಬರನ್ನೂ ನಾವು ದೂರ ಇಡಲು ಬಯಸುವುದಿಲ್ಲ. ಎಲ್ಲರ ಉಳಿವಿನಲ್ಲಿ ಒಬ್ಬನ ಉಳಿವು ಒಬ್ಬನ ಉಳಿವಿನಲ್ಲಿ ಎಲ್ಲರ ಉಳಿವು ಎಂಬ ಎಚ್ಚರದಲ್ಲಿ ಯಾರೊಟ್ಟಿಗೆ ಬೇಕಾದರೂ ಹೆಜ್ಜೆ ಹಾಕಲು ಸಿದ್ಧರಿದ್ದೇವೆ. ಯಾವುದೇ ಬಣದವರಾದರೂ ಇರಲಿ ಎಲ್ಲರಿಗೂ ನಮ್ಮ ತೆರೆದ ಹೃದಯದ ಸ್ವಾಗತವಿದೆ.

ಇವತ್ತಿನ ದಲಿತ ಸಮುದಾಯದ ಈ ತಳಮಳ, ಸಂಕಟಗಳಿಗೆ ಸಿದ್ಧ ಪರಿಹಾರ ಏನೆಂಬುದು ನಮಗೆ ಗೊತ್ತಿಲ್ಲ. ಅಥವ ಈ ಸಂಕಟದ ಸ್ಥಿತಿಗೆ ಇಂಥ ವ್ಯಕ್ತಿ, ಸಂಘಟನೆ, ಬಣ ಕಾರಣವೆಂದು ಬೊಟ್ಟು ಮಾಡಿ ತೋರಿಸುವುದೂ ನಮ್ಮ ಉದ್ದೇಶವಲ್ಲ. ಅಥವಾ ನಮ್ಮದೇ ಒಂದು ಪ್ರತ್ಯೇಕ ಬಣ ನಿರ್ಮಿಸಿ ಉಳಿದ ಬಣಗಳೊಂದಿಗೆ ಸ್ಪರ್ಧೆಗಿಳಿದಿದು ಗೊಂದಲ ನಿರ್ಮಿಸುವುದು ಕೂಡ ನಮ್ಮ ಉದ್ದೇಶವಲ್ಲ. ಬದಲಿಗೆ ಈ ವಿಭಜಕ ರಾಜಕಾರಣದ ಆಚೆಗೆ ಎಲ್ಲ ಬಣ, ಗುಂಪುಗಳ ಒಳಗೂ ಇರುವ ವಿವೇಕವಂತರ ಅದರಲ್ಲೂ ಮುಖ್ಯವಾಗಿ ಬರಹಗಾರ, ಕಲಾವಿದರನ್ನು ದಲಿತ ಸಮುದಾಯವನ್ನು ಆಂತರಿಕವಾಗಿ ತಮ್ಮ ಸೃಜನಶೀಲತೆಯ ಮೂಲಕ ಸಶಕ್ತಗೊಳಿಸುವುದಕ್ಕಾಗಿ ಒಂದು ವೇದಿಕೆಯ ಮೇಲ ತರುವುದು ಮಾತ್ರ ನಮ್ಮ ಉದ್ದೇಶವಾಗಿದೆ. ಹಾಗೂ ಈ ವೇದಿಕೆ ಎರೆಹುಳಗಳಂತೆ ಹೊರಗಿನ ಯಾವ ಕಣ್ಣುಗಳಿಗೂ ಕಾಣದೆ ಸಮುದಾಯ ನಿರ್ಮಾಣಕ್ಕಾಗಿ ನಮ್ಮ ನಮ್ಮ ಮಿತಿಗಳಲ್ಲಿ ಶ್ರಮಿಸುವುದಾಗಿದೆ.

ಇವತ್ತಿನ ದಲಿತ ಸಮುದಾಯದ ಈ ತಳಮಳ, ಸಂಕಟಗಳಿಗೆ ಸಿದ್ಧ ಪರಿಹಾರ ಏನೆಂಬುದು ನಮಗೆ ಗೊತ್ತಿಲ್ಲ. ಅಥವ ಈ ಸಂಕಟದ ಸ್ಥಿತಿಗೆ ಇಂಥ ವ್ಯಕ್ತಿ, ಸಂಘಟನೆ, ಬಣ ಕಾರಣವೆಂದು ಬೊಟ್ಟು ಮಾಡಿ ತೋರಿಸುವುದೂ ನಮ್ಮ ಉದ್ದೇಶವಿಲ್ಲ ಅಥವಾ ನಮ್ಮದೇ ಒಂದು ಪ್ರತ್ಯೇಕ ಬಣ ನಿರ್ಮಿಸಿ ಉಳಿದ ಬಣಗಳೊಂದಿಗೆ ಸ್ಪರ್ಧೆಗಿಳಿದು ಗೊಂದಲ ನಿರ್ಮಿಸುವುದು ಕೂಡ ನಮ್ಮ ಉದ್ದೇಶವಲ್ಲ. ಬದಲಿಗೆ ಈ ವಿಭಜಕ ರಾಜಕಾರಣದ ಆಚೆಗೆ ಎಲ್ಲ ಬಣ, ಗುಂಪುಗಳ ಒಳಗೂ ಇರುವ ವಿವೇಕವಂತರ ಅದರಲ್ಲೂ ಮುಖ್ಯವಾಗಿ ಬರಹಗಾರ, ಕಲಾವಿದರನ್ನು ದಲಿತ ಸಮುದಾಯವನ್ನು ಆಂತರಿಕವಾಗಿ ತಮ್ಮ ಸೃಜನಶೀಲತೆಯ ಮೂಲಕ ಸಶಕ್ತಗೊಳಿಸುವುದಕ್ಕಾಗಿ ಒಂದು ವೇದಿಕೆಯ ಮೇಲೆ ತರುವುದು ಮಾತ್ರ ನಮ್ಮ ಉದ್ದೇಶವಾಗಿದೆ. ಹಾಗೂ ಈ ವೇದಿಕೆ ಎರೆಹುಳಗಳಂತೆ ಹೊರಗಿನ ಯಾವ ಕಣ್ಣುಗಳಿಗೂ ಕಾಣದೆ ಸಮುದಾಯ ನಿರ್ಮಾಣಕ್ಕಾಗಿ ನಮ್ಮ ನಮ್ಮ ಮಿತಿಗಳಲ್ಲಿ ಶ್ರಮಿಸುವುದಾಗಿದೆ.

ಬೇಕು; ವೃತ್ತಿ ವಿಮುಖತೆ
ಪೌರ ಕಾರ್ಮಿಕರಿಗೆ

ಸರಸ್ವತಿ ಬಂದಿದ್ದರು. ಅವರನ್ನು ಹಿಂದೆ ನಮ್ಮ ಕಾರ್ಯಕ್ರಮದಲ್ಲಿ ನೋಡಿದ್ದೆ. ತಾವು ಹೇಳುವ ವಿಷಯವನ್ನು ಒತ್ತಾಯ ಪೂರ್ವಕವಾಗಿ ಅಂತಃಕರಣದಿಂದ ಹೇಳುವುದು ಅವರ ದಾಟಿ. ಸಂಪೂರ್ಣವಾಗಿ ತಮ್ಮ ಸಮಯವನ್ನೆಲ್ಲಾ ಪೌರ ಕಾರ್ಮಿಕರೊಡನೆ ಕಳೆಯುತ್ತಿರುವುದಾಗಿ ಹೇಳಿದರು. ಅವರಿಗಾಗಿ ಸಂಘ ಕಟ್ಟಿರುವುದಾಗಿ, ಹೋರಾಡುತ್ತಿರುವುದಾಗಿ ಹೇಳಿದರು. ಆಡಳಿತ ಶಾಹಿಯ ನಿರ್ಲಕ್ಷ್ಯದ ಬಗ್ಗೆ ಮಾತನಾಡಿದರು. ಈವರೆಗೂ ಪೌರಕಾರ್ಮಿಕರಿಗೆ ಕನಿಷ್ಠ ವೇತನ ಎಂಬುದೇ ಇಲ್ಲ. ಅದನ್ನು ಜಾರಿಗೆ ತರುವ ಉತ್ಸಾಹ ಯಾರಲ್ಲಿಯೂ ಇಲ್ಲ. ತಿಂಗಳಿಗೆ 700-800 ರೂಪಾಯಿಗಳಿಗೆಲ್ಲಾ ಅವರು ಕೆಲಸ ಮಾಡುತ್ತಾರೆ. ಆರೋಗ್ಯದ ಕನಿಷ್ಠ ಮಾಹಿತಿ ಇಲ್ಲ. ಕೊಳೆತು ನಾರುವ ನಾಯಿಗಳನ್ನು ಬರಿ ಕೈಯಲ್ಲಿ ಎಳೆದುಕೊಂಡು ಹೋಗುತ್ತಾರೆ. ಎಂತಹ ಹೊಲಸನ್ನೂ ಬರಿಗೈಯಲ್ಲಿ ಬಾಚುತ್ತಾರೆ. ಕೈತೊಳೆದುಕೊಳ್ಳಬೇಕೆಂದರೆ ಒಂದು ತಂಬಿಗೆ ನೀರು ಕೂಡ ಯಾರೂ ಹಾಕುವುದಿಲ್ಲ. ಹೊಲಸಿನಲ್ಲಿಯೇ ಬದುಕುತ್ತಾರೆ. ಎಲ್ಲರೂ ಒಂದಲ್ಲ ಒಂದು ಖಾಯಿಲೆಯಿಂದ ನರಳುವವರೆ. ಕ್ಷಯ, ಉಬ್ಬಸ ಸಾಮಾನ್ಯ. ಕಡಿದರೆ ಒಂದು ತೊಟ್ಟು ರಕ್ತವೂ ಬೀಳುವುದಿಲ್ಲ. ಅವರ ಪರಿಸ್ಥಿತಿ ನೆನೆದರೆ ಕರುಳು ಚುರ್ ಎನ್ನುತ್ತದೆ. ಸರಸ್ವತಿ ಹೆಣ್ಣಿನ ಸಹಜ ಅಂತಃಕರಣದಿಂದ ಮಾತನಾಡುತ್ತಿದ್ದರು. ಅವರು ಹೇಳುತ್ತಿದ್ದುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇರಲಿಲ್ಲ.

ಪೌರಕಾರ್ಮಿಕರು ಇಲ್ಲವೆ ಜಾಡಮಾಲಿಗಳು ಅತ್ಯಂತ ದುಸ್ಥಿತಿಯಲ್ಲಿರುವ ಜನ. ಅವರು ಮಾಡುವುದು ಸಮಾಜದ ಹೊಲಸು ತೊಳೆಯುವ ಕೆಲಸ. ಬೀದಿ ಕಸ ಗುಡಿಸುವುದು, ಮೋರಿ ಸ್ವಚ್ಛಗೊಳಿಸುವುದು, ಸತ್ತ ನಾಯಿ ಮುಂತಾದ ಪ್ರಾಣಿಗಳನ್ನು ಸಾಗಿಸುವುದು, ಕೊನೆಗೆ ಅನೇಕ ಕಡೆ ಇತರರ ಮಲವನ್ನು ಹೊತ್ತು ಸಾಗಿಸುವುದು. ಅವರ ಈ ದುಡಿಮೆಗೆ ಸಿಗುವ ಕೂಲಿ ಬಿಡಿಗಾಸು, ಉಂಡು ಮಿಕ್ಕಿದ ಎಂಜಲು, ಇಲ್ಲವೆ ಹಳಸಲು. ಅನೇಕ ಪೀಳಿಗೆಯಿಂದ ಈ ಕೆಲಸ ಮಾಡುತ್ತಿರುವ ಅವರು ಭವಿಷ್ಯದ ಬಗ್ಗೆ ಯಾವುದೇ ಆಶಯವನ್ನು ಹೊಂದಿದವರಲ್ಲ. ತಮಗೆ ಸಿಕ್ಕಿದ ಬಿಡಿಗಾಸನ್ನು ಹೆಂಡ ಸಾರಾಯಿಗಳ ಮೇಲೆ ಹಾಕುವವರು. ಹೊಲಸನ್ನು ಸ್ವಚ್ಛಗೊಳಿಸುವ ಮುನ್ನ ದುರ್ವಾಸನೆಯನ್ನು ತಾಳಲು ಕುಡಿಯಬೇಕು. ನಂತರ ಅದನ್ನು ಮರೆಯಲು ಕುಡಿಯಬೇಕು. ಹೆಂಡತಿ ಮಕ್ಕಳು, ಅವರ ಬೆಳವಣಿಗೆ, ವಿದ್ಯಾಭ್ಯಾಸ, ತಮ್ಮದೆ ಆದ ಮನೆ, ನಾಗರೀಕ ಸಹಜ ಆಸೆಗಳಿಗೆ ಅವರಲ್ಲಿ ಸ್ಥಾನವಿಲ್ಲ. ಈ ಪರಿಸರದಲ್ಲಿ ಬೆಳೆದ ಅವರ ಮಕ್ಕಳಿಗೂ ಭವಿಷ್ಯವಿಲ್ಲ. ಹತ್ತಾರು ರೀತಿಯ ಬೆಳವಣಿಗೆ ನೋಡಿ ತಾವೂ ಹಾಗಾಗಬೇಕು ಎಂದುಕೊಂಡರೆ ತಾನೆ ಬದಲಾವಣೆ,

ಪೌರ ಕಾರ್ಮಿಕರು ಮಾಡುವುದು ಸಮಾಜದ ಹೊಲಸು ತೊಳೆಯುವ ಕೆಲಸ. ಬೀದಿ ಕಸ ಗುಡಿಸುವುದು, ಮೋರಿ ಸ್ವಚ್ಛಗೊಳಿಸುವುದು, ಸತ್ತ ನಾಯಿ ಮುಂತಾದ ಪ್ರಾಣಿಗಳನ್ನು ಸಾಗಿಸುವುದು, ಕೊನೆಗೆ ಅನೇಕ ಕಡೆ ಇತರರ ಮಲವನ್ನು ಹೊತ್ತು ಸಾಗಿಸುವುದು. ಅವರ ಈ ದುಡಿಮೆಗೆ ಸಿಗುವ ಕೂಲಿ ಬಿಡಿಗಾಸು, ಉಂಡು ಮಿಕ್ಕಿದ ಎಂಜಲು, ಇಲ್ಲವೆ ಹಳಸಲು. ತಮಗೆ ಸಿಕ್ಕಿದ ಬಿಡಿಗಾಸನ್ನು ಹೆಂಡ ಸಾರಾಯಿಗಳ ಮೇಲೆ ಹಾಕುವವರು. ಹೊಲಸನ್ನು ಸ್ವಚ್ಛಗೊಳಿಸುವ ಮುನ್ನ ದುರ್ವಾಸನೆಯನ್ನು ತಾಳಲು ಕುಡಿಯಬೇಕು. ನಂತರ ಅದನ್ನು ಮರೆಯಲು ಕುಡಿಯಬೇಕು.

○ ಎಸ್. ಮರಿಸ್ವಾಮಿ

ಬೆಳವಣಿಗೆ. ದೊಡ್ಡವರ ಧುರ್ಭರವೃತ್ತಿ ಮತ್ತು ಜೀವನ ಎಳೆಯ ಮನಸ್ಸುಗಳ ಎಲ್ಲ ಬೆಳವಣಿಗೆಯನ್ನು ಅತಿ ಚಿಕ್ಕಂದಿನಲ್ಲಿಯೇ ಕಮರಿಸಿ ಬಿಡುತ್ತದೆ. ವಯಸ್ಸಿಗೆ ಬಂದರೆಂದರೆ ಅವರೂ ಅಂತಹ ಕೆಲಸವನ್ನೆ ಮುನ್ನೋಡುವವರೆ.

ಹಲವು ವರ್ಷಗಳಿಗೊಮ್ಮೆ ನಮ್ಮ ನಾಯಕರು ಈ ಜನರ ಸ್ಥಿತಿ-ಗತಿಯ ಬಗ್ಗೆ ಪ್ರಚೋದನೆಗೊಳ್ಳುವುದುಂಟು. ಆಗ ಕಮಿಷನ್‌ಗಳು, ಕಮಿಟಿಗಳು ಎಲ್ಲ ಹುಟ್ಟಿಕೊಳ್ಳುತ್ತವೆ. ಅನುಕಂಪದ ಅಲೆಯೂ ಹರಿಯುತ್ತದೆ. ಅನೇಕ ಕೋಟಿ ರೂಪಾಯಿಗಳೂ ಖರ್ಚಾಗುತ್ತವೆ. ಕಮಿಷನ್‌ಗಳಿಗೆ ನೇಮಕವಾದವರು ಬಂಗ್ಲೆ ಕೇಳುತ್ತಾರೆ. ಕಾರು ಮತ್ತು ಅಂತಸ್ತು ಕೇಳುತ್ತಾರೆ. ಅನೇಕ ಕಡೆ ಸುತ್ತಿ ಆ ಜನರ ಸ್ಥಿತಿ-ಗತಿಯನ್ನೂ ನೋಡಬಹುದು. ಅಷ್ಟಕ್ಕೆ ಅವರು ಸುಸ್ತಾಗಿ ಬಿಡುತ್ತಾರೆ. ಅಲ್ಲಿಗೆ ಅವರ ಕಾಲವೂ ಮುಗಿದಿರುತ್ತದೆ. ಬೇರೆಯವರು ಬರಬಹುದು. ಒಬ್ಬರು ಮಾಡಿದ ಅಲ್ಪ ಸ್ವಲ್ಪ ಯೋಜನೆಯನ್ನು ಇನ್ನೊಬ್ಬರು ಮುಂದುವರೆಸುವುದಿಲ್ಲ. ಬದಲಾವಣೆಯ ಯತ್ನ ಅಲ್ಲಿಗೆ ಮುಗಿಯುತ್ತದೆ.

ಈ ಜನರ ಸ್ಥಿತಿ ಮಾತ್ರ ಯಥಾವತ್ತಾಗಿ ಮುಂದುವರೆಯುತ್ತದೆ. ಈ ಬಗ್ಗೆ ಅನುಕಂಪ ಹೊಂದಿದ ಇತರರ ವಿಚಾರವೂ ಅಷ್ಟೇ. ಇವರು ಎಲ್ಲ ಹೊರೆಯನ್ನು ಸರ್ಕಾರದ ಮೇಲೆ ಹಾಕುವವರು. ಸರ್ಕಾರ ಹಾಗೆ ಮಾಡಬೇಕು, ಹೀಗೆ ಮಾಡಬೇಕು, ಎಂದು ದೊಡ್ಡಪಟ್ಟಿ ತಯಾರಿಸಿಕೊಡುವವರು. ಈ ಮೂಲಭೂತ ಸಮಸ್ಯೆಯ ತಿರುಳೇನು, ಆಯಾಮಗಳೇನು ಎಂಬುದನ್ನು ವಿಮರ್ಶಿಸಿ ಯಾರ್ಯಾರು ಏನೇನು ಮಾಡಬೇಕೆಂಬುದರ ಬಗ್ಗೆ ಕಾಲಮಿತಿಯ ಯೋಜನೆ ತಯಾರಿಸಿ ಜಾರಿಗೊಳಿಸಬೇಕೆನ್ನುವವರು ಅತಿ ಕಡಿಮೆ. ಆದ್ದರಿಂದಲೇ ಈ ಸಮಸ್ಯೆ ಬದಲಾವಣೆ ಇಲ್ಲದೆ ಮುಂದುವರೆದಿದೆ.

ಜಾಡಮಾಲಿಗಳ ಸಮಸ್ಯೆ ಕೇವಲ ಸರ್ಕಾರಿ ಕ್ರಮಗಳಿಂದ ಮಾತ್ರ ನಿವಾರಣೆಯಾಗುವಂತಹುದಲ್ಲ. ಹಾಗೆ ನೋಡಿದರೆ ಯಾವುದೇ ಸಮಸ್ಯೆಯನ್ನು ತೀವ್ರವಾಗಿ ಪರಿಗಣಿಸಿ ಅದರ ಸಂಪೂರ್ಣ ನಿರ್ಮೂಲನೆಯವರೆಗೆ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಕೆಲಸವನ್ನು ಸರ್ಕಾರ ಎಲ್ಲಿ ಮಾಡಿದೆ? ಆದುದರಿಂದ ಇಂತಹ ಜ್ವಲಂತ ಸಮಸ್ಯೆಯನ್ನು ಸರ್ಕಾರ ತನ್ನ ಕ್ರಮಗಳಿಂದಲೆ ನಿವಾರಿಸಬಲ್ಲದು ಎಂದು ನಂಬುವುದು ಸರಿಯಲ್ಲ. ಹಾಗೆಂದ ಮಾತ್ರಕ್ಕೆ ಸರ್ಕಾರವನ್ನು ಈ ಜವಾಬ್ದಾರಿಯಿಂದ ಮುಕ್ತಗೊಳಿಸಿದ್ದೇವೆ ಎಂದು ಅರ್ಥವಲ್ಲ. ಸರ್ಕಾರದ ಆಳ, ವಿಸ್ತಾರ ಬಹಳ ಹೆಚ್ಚು. ಸಮಸ್ಯೆಯ ನಿವಾರಣೆಗೆ ಬೇಕಾದ ಕಾನೂನನ್ನು ಸರ್ಕಾರ ಮಾಡಬಲ್ಲದು. ಈ ಕೆಲಸದಲ್ಲಿ ತೊಡಗಿರುವವರಿಗೆ

ಈ ಕೆಲಸ ಮಾಡುತ್ತಿರುವ ಹೆಚ್ಚು ಜನರು ಈ ಕೆಲಸದಿಂದ ವಿಮುಖರಾಗಬೇಕು. ಇದೇನು ಅಸಾಧ್ಯವಾದ ಮಾತಲ್ಲ. ತಮ್ಮ ಅಸಹಾಯಕ ಸ್ಥಿತಿಯಿಂದ ಈ ಜನರು ಬದಲಿ ಹುದ್ದೆಗಳ ಬಗ್ಗೆ ಗಮನ ನೀಡದಾಗಿದ್ದಾರೆ. ಅದೆಷ್ಟೇ ಅನ್ನಪೇಕ್ಷಣೀಯವಾಗಿದ್ದರೂ ಅವರು ಈ ಹೊಲಸು ಕೆಲಸದಲ್ಲಿಯೇ ಮುಂದುವರೆಯ ಬಯಸುತ್ತಾರೆ. ಸ್ವಲ್ಪ ಸುತ್ತ ನೋಡಿದ್ದರೆ ಅವರು ಸುಲಭವಾಗಿ ಇತರ ಗೌರವಯುತವಾದ ಕೆಲಸಗಳಲ್ಲಿ ತೊಡಗಬಹುದು. ಮಕ್ಕಳ ವಿದ್ಯಾಭ್ಯಾಸ ಮತ್ತು ಬೆಳವಣಿಗೆಯ ಬಗ್ಗೆ ಆಮೂಲಾಗ್ರ ಬದಲಾವಣೆಯಾಗಬೇಕು. ಅವರ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು ಮತ್ತು ಅತಿ ಚಿಕ್ಕಂದಿನಿಂದ ಅವರು ತಮ್ಮ ಭವಿಷ್ಯದ ಬಗ್ಗೆ ಆಲೋಚನೆ ಹೊಂದಿ ಬೇರೆ ಬೇರೆ ಆಸಕ್ತಿಗಳನ್ನು ಬೆಳೆಸಿಕೊಳ್ಳುವಂತೆ ನೋಡಿಕೊಳ್ಳಬೇಕು. ಅವರಿಗೆ ಬೇಕಾದ ಕೌಶಲ್ಯಗಳನ್ನು ನೀಡಿ ಬೇರೆ ಬೇರೆ ರಂಗಗಳಲ್ಲಿ ಅವರು ಪ್ರಗತಿ ಹೊಂದುವಂತೆ ಯೋಜಿಸಬೇಕು.

ಕನಿಷ್ಠ ವೇತನ ನಿರ್ಧರಿಸಿ ಅದನ್ನು ನೀಡುವಂತೆ ಕ್ರಮಕೈಗೊಳ್ಳಬಲ್ಲದು. ಅವರ ಕೆಲಸದ ಪರಿಸರವನ್ನು ನಿರ್ಧರಿಸಿ ಅದೇ ರೀತಿ ಎಲ್ಲ ಮುನಿಸಿಪಾಲಿಟಿಗಳು, ಕಾರ್ಪೋರೇಷನ್‌ಗಳು ನಡೆದುಕೊಳ್ಳುವಂತೆ ಮಾಡಬಲ್ಲದು. ಈ ಜನರಿಗೆ ನೀಡಬೇಕಾದ ಸೌಲತ್ತುಗಳ ಬಗ್ಗೆ ನಿರ್ದೇಶನ ನೀಡಬಲ್ಲದು. ಇನ್ನೂ ಅನೇಕ ಕೆಲಸವನ್ನು ಅದು ಮಾಡಬಲ್ಲದು.

ಆದರೆ ಅದು ಮಾಡುತ್ತದೆಯೆ ಎಂಬುದು ಮುಖ್ಯ. ಯಾವುದೇ ಮೂಲಭೂತ ಸಮಸ್ಯೆಯನ್ನು ತೆಗೆದುಕೊಳ್ಳಲಿ, ಕೆಲ ಸಮಯ ಆ ಬಗ್ಗೆ ಚೀರಾಡಿ ನಂತರ ಬೇರೊಂದು ಸಮಸ್ಯೆಯನ್ನು ತೆಗೆದುಕೊಂಡು ಅದನ್ನು ಕೈ ಬಿಡುವುದು ಎಲ್ಲೆಲ್ಲೂ ನಾವು ಕಾಣುವ ದೃಶ್ಯ. ಆದುದರಿಂದ ಸರ್ಕಾರ ಈ ದಿಸೆಯಲ್ಲಿ ಕೆಲಸ ಮಾಡುವಂತೆ ಮಾಡಬೇಕಾದರೆ ಸತತವಾಗಿ ಅದನ್ನು ಒತ್ತಾಯಿಸುವ ಒಂದು ಪರಿಸ್ಥಿತಿ ನಿರ್ಮಾಣವಾಗಬೇಕಾಗುತ್ತದೆ. ಇದು ಎಲ್ಲ ಪ್ರಜ್ಞಾವಂತರ ಕೆಲಸ.

ಎರಡನೆಯದಾಗಿ ಈ ಜನರು ಮಾಡುವ ಕೆಲಸಕ್ಕೆ ಬೆಲೆ ಬರುವಂತಾಗಬೇಕು. ಅಂದರೆ ಅವರಿಗೆ ಒಳ್ಳೆಯ ಸಂಬಳ, ಸಾರಿಗೆ, ಕೂಲಿ ದೊರೆಯುವಂತಾಗಬೇಕು. ಅವರು ಮಾಡುವ ಕೆಲಸದ ಕೊಳಕು, ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಅದರ ಪರಿಣಾಮ ಇವುಗಳನ್ನು ಗಣನೆಗೆ ತೆಗೆದುಕೊಂಡು ಇವುಗಳಿಗೆ ಪ್ರತ್ಯೇಕ ಬೆಲೆಕಟ್ಟಿ ಇದನ್ನು ಸಾಮಾನ್ಯ ಸಂಬಳದ ಜತೆ ಸೇರಿಸಿ ಅವರಿಗೆ ನೀಡಬೇಕಾಗುತ್ತದೆ.

ಇದು ಸಾಧ್ಯವಾಗಬೇಕಾದರೆ ಈ ಕೆಲಸ ಮಾಡುತ್ತಿರುವ ಹೆಚ್ಚು ಜನರು ಈ ಕೆಲಸದಿಂದ ವಿಮುಖರಾಗಬೇಕು. ಇದೇನು ಅಸಾಧ್ಯವಾದ ಮಾತಲ್ಲ. ತಮ್ಮ ಅಸಹಾಯಕ ಸ್ಥಿತಿಯಿಂದ ಈ ಜನರು ಬದಲಿ ಹುದ್ದೆಗಳ ಬಗ್ಗೆ ಗಮನ ನೀಡದಾಗಿದ್ದಾರೆ. ಅದೆಷ್ಟೇ ಅನಪೇಕ್ಷಣೀಯವಾಗಿದ್ದರೂ ಅವರು ಈ ಹೊಲಸು ಕೆಲಸದಲ್ಲಿಯೇ ಮುಂದುವರೆಯ ಬಯಸುತ್ತಾರೆ. ಸ್ವಲ್ಪ ಸುತ್ತ ನೋಡಿದ್ದರೆ ಅವರು ಸುಲಭವಾಗಿ ಇತರ ಗೌರವಯುತವಾದ ಕೆಲಸಗಳಲ್ಲಿ ತೊಡಗಬಹುದು.

ಉದಾಹರಣೆಗೆ ಕಟ್ಟಡ ಕಟ್ಟುವ ಉದ್ಯಮವನ್ನೇ ನೋಡಿ. ಇದೊಂದು ಬೆಳೆಯುತ್ತಿರುವ ಉದ್ಯಮ. ಎಷ್ಟು ಜನರನ್ನಾದರೂ ಇದು ತೊಡಗಿಸಿಕೊಳ್ಳಬಲ್ಲದು, ಮತ್ತು ಗೌರವಯುತ ಪ್ರತಿಫಲ ನೀಡಬಲ್ಲದು. ಈ ಜನರನ್ನು ಬೇರೆ ಉದ್ಯಮಗಳಲ್ಲಿ ತೊಡಗಿಸುವ ಕಡೆ ನಮ್ಮ ಗಮನ ಹೋಗಬೇಕು. ಹಾಗಾದಾಗ ಈ ಹೊಲಸು ಕೆಲಸ ಮಾಡುವ ಜನರ ಸಂಖ್ಯೆ ಕಡಿಮೆಯಾಗಿ ಅಲ್ಲಿಯೂ ಕೂಲಿ ಹೆಚ್ಚುತ್ತದೆ.

ಮೂರನೆಯದಾಗಿ ಈ ರಂಗದಲ್ಲಿ ಪರಿಸ್ಥಿತಿ ಬದಲಾಗಬೇಕಾದರೆ ಹೆಚ್ಚು ಹೆಚ್ಚು ತಾಂತ್ರಿಕತೆ ಇಲ್ಲಿ ಬರಬೇಕು. ಮೋರಿಗಳ ಸ್ವಚ್ಛತೆಯಿಂದ ಹಿಡಿದು ಸತ್ತ ಪ್ರಾಣಿಗಳನ್ನು ಸಾಗಿಸುವವರೆಗೆ ಯಂತ್ರಗಳನ್ನು ಉಪಯೋಗಿಸಬೇಕು. ಇಂತಹ ಸಂದರ್ಭಗಳಲ್ಲಿ ಉಂಟಾಗುವ ದುರ್ನಾತ ಮುಂತಾದವುಗಳಿಂದ ಸೂಕ್ತ ಪರಿಕರಗಳ ಉಪಯೋಗದ ಮೂಲಕ ರಕ್ಷಣೆ ಬಯಸುವುದು ಅಸಹಜ.

ಕೊನೆಯದಾಗಿ ಈ ಜನರ ಮಕ್ಕಳ ವಿದ್ಯಾಭ್ಯಾಸ ಮತ್ತು ಬೆಳವಣಿಗೆಯ ಬಗ್ಗೆ ಆಮೂಲಾಗ್ರ ಬದಲಾವಣೆಯಾಗಬೇಕು. ಅವರ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು ಮತ್ತು ಅತಿ ಚಿಕ್ಕಂದಿನಿಂದ ಅವರು ತಮ್ಮ ಭವಿಷ್ಯದ ಬಗ್ಗೆ ಆಲೋಚನೆ ಹೊಂದಿ ಬೇರೆ ಬೇರೆ ಆಸಕ್ತಿಗಳನ್ನು ಬೆಳೆಸಿಕೊಳ್ಳುವಂತೆ ನೋಡಿಕೊಳ್ಳಬೇಕು. ಅವರಿಗೆ ಬೇಕಾದ ಕೌಶಲ್ಯಗಳನ್ನು ನೀಡಿ ಬೇರೆ ಬೇರೆ ರಂಗಗಳಲ್ಲಿ ಅವರು ಪ್ರಗತಿ ಹೊಂದುವಂತೆ ಯೋಜಿಸಬೇಕು.

ಒಟ್ಟಿನಲ್ಲಿ ಇದೊಂದು ಬೃಹತ್ ಸಮಸ್ಯೆ. ಸ್ವಾತಂತ್ರ್ಯ ಬಂದು 55 ವರ್ಷಗಳಾದರೂ ಈ ಸಮಸ್ಯೆ ಹಾಗೆಯೇ ಉಳಿದಿರುವುದು ಶೋಚನೀಯ. ಸರಸ್ವತಿಯಂತಹವರು ಅಸಮಾನ್ಯ ಕೆಲಸವನ್ನು ಮಾಡುತ್ತಿದ್ದರೂ ಅವರು ಏಕಮುಖವಾಗಿ ಯೋಚಿಸುವ ಬದಲು ಬಹುಮುಖ ಯೋಜನೆ ಹೊಂದಿದ್ದಲ್ಲಿ ಮಾತ್ರ ಸಮಸ್ಯೆಗೆ ಪರಿಹಾರ ಕಾಣಲು ಸಾಧ್ಯ.

ದಲಿತರ ಮೇಲೆ ಆರ್ಥಿಕ ಸುಧಾರಣೆಗಳ ದುಷ್ಪರಿಣಾಮಗಳು

ಆರ್ಥಿಕ ಸುಧಾರಣೆಗಳ ಜಾರಿಯು ತೀವ್ರಗೊಂಡಂತೆಲ್ಲ, ದಲಿತರಿಗೆ ಸಂವಿಧಾನವು ಒದಗಿಸಿರುವ ರಕ್ಷಣಾ ಕ್ರಮಗಳು ಹೆಚ್ಚು ಹೆಚ್ಚು ಅರ್ಥಹೀನವಾಗಲಿವೆ. ಆಗ ಸಮಗ್ರ ದೇಶದ ವಿಶೇಷವಾಗಿ ದಲಿತರ ಸ್ಥಿತಿಯು ಭಯಾನಕವಾಗುತ್ತದೆ.

○ ಡಾ. ಆನಂದ್ ತೆಲ್‌ತುಂಬ್ಡೆ ಸಂಗ್ರಹಾನುವಾದ : ಮಂಗ್ಳೂರ ವಿಜಯ

1991ರ ಆದಿಭಾಗದಲ್ಲಿ ಭಾರತವು ಆರ್ಥಿಕ ಮತ್ತು ರಾಜಕೀಯ ಬಿಕ್ಕಟ್ಟನ್ನು ಎದುರಿಸಿತ್ತು. ಆಗ ವಿದೇಶಿ ವಿನಿಮಯ ರಿಸರ್ವ್‌ನಲ್ಲಿ ತೀವ್ರ ಕುಸಿತ ಕಾಣಿಸಿತ್ತು; ಹಣದುಬ್ಬರ ಮಿತಿ ಮೀರಿತ್ತು. ಸಾರ್ವಜನಿಕ ಹಾಗೂ ಚಾಲ್ತಿ ಖಾತೆಗಳಲ್ಲಿ ಖೋತಾ ಆಗಿತ್ತು. ದೇಶಿ ಮತ್ತು ವಿದೇಶಿ ಸಾಲದ ಒತ್ತಡ ತೀವ್ರವಾಗಿತ್ತು. 1990ರ ನವೆಂಬರ್-1991ರ ಮಾರ್ಚ್‌ವರೆಗಿನ ಐದು ತಿಂಗಳ ಕಾಲದಲ್ಲಿ ಎರಡು ಸರ್ಕಾರಗಳು ಉರುಳಿದ್ದವು. ಚುನಾವಣೆ ಮುಗಿಯುವವರೆಗೆ ಕೇಂದ್ರ ಸರ್ಕಾರದ ಬಜೆಟ್ ಮಂಡನೆಯನ್ನು ಮುಂದೂಡಲಾಗಿತ್ತು. ಕೆಲಕಾಲದ ಹಿಂದಷ್ಟೇ ಮಾಜಿ ಪ್ರಧಾನಮಂತ್ರಿ ರಾಜೀವ ಗಾಂಧಿ ಕೊಲೆ ನಡೆದಿತ್ತು. ಹೊಸ ಪ್ರಧಾನಿ ಅಲ್ಪ ಮತ ಬೆಂಬಲದಿಂದ ಸರ್ಕಾರ ರಚಿಸಿದ್ದರು. ಇವೆಲ್ಲವೂ ಒಟ್ಟಾರೆ ಬಿಕ್ಕಟ್ಟನ್ನು ಇನ್ನೂ ಉಲ್ಬಣಗೊಳಿಸಿದ ಸಂಗತಿಗಳಾಗಿದ್ದವು. ಸಾಲ ನೀಡಿದವರು ಭಾರತದ ಬಗ್ಗೆ ಅಪನಂಬಿಕೆ ತಾಳಲು ಇಷ್ಟು ಸಾಕಾಗಿತ್ತು. ಭಾರತದ ಸಾಲ ಪಡೆಯುವ ಸಾಮರ್ಥ್ಯ ಅನುಮಾನಕ್ಕೆ ಗುರಿಯಾಗಿತ್ತು. ಅಂತರರಾಷ್ಟ್ರೀಯ ಸಾಲ ಪಡೆಯುವುದು ಭಾರತಕ್ಕೆ ಅಸಾಧ್ಯವೆನಿಸಿದ ಕಾಲವದಾಗಿತ್ತು. ಈ ಹಿನ್ನೆಲೆಯಲ್ಲಿ ಜುಲೈ 91ರಲ್ಲಿ ಆರ್ಥಿಕ ಸುಧಾರಣೆಗಳನ್ನು ಜಾರಿಗೊಳಿಸಲಾಯ್ತು.

ಸುಧಾರಣೆಗಳ ನೀಲಿ ನಕ್ಷೆ :

ಸುಧಾರಣೆಗಳಿಗೆ ನೀಲಿನಕ್ಷೆಯನ್ನು ಒದಗಿಸಿದ್ದು ಅಂತರರಾಷ್ಟ್ರೀಯ ಹಣಕಾಸು ನಿಧಿ (IMF) ಮತ್ತು ವಿಶ್ವಬ್ಯಾಂಕ್ (World Bank)ನ ಸಾಲ ಮರು ಪಾವತಿ ಅಮೂಲಾಗ್ರ ಹೊಂದಾಣಿಕಾ ಕಾರ್ಯಕ್ರಮ (Structural Adjustment Programme)ಗಳು. ತೀವ್ರ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಲುಕಿದ ಅನೇಕ ರಾಷ್ಟ್ರಗಳೂ ಹಿಂದೆ ಮೊರೆಹೋಗಿದ್ದು ಇಂಥವೇ ಸುಧಾರಣೆಗಳಿಗೆ. ಭಾರತವೂ ಅದೇ ದಾರಿ ಹಿಡಿದಿತ್ತು. ಈ ಸುಧಾರಣೆಗಳ ವಿಶಿಷ್ಟ ಲಕ್ಷಣಗಳೆಂದರೆ

ನಿಯಂತ್ರಣಾ ಕ್ರಮಗಳು :

❑ ವಿನಿಮಯ ದರವನ್ನು ಹೆಚ್ಚು ವಾಸ್ತವಗೊಳಿಸಲು ಕರೆನ್ಸಿಯನ್ನು ಅಪಮೌಲ್ಯಗೊಳಿಸುವುದು.

❑ ಆಮದಿನ ಮೇಲಿನ ನಿರ್ಬಂಧಗಳನ್ನು ತೆಗೆದು ಹಾಕುವುದು.

❑ ಎಲ್ಲಾ ಸಬ್ಸಿಡಿಗಳನ್ನು ಕಡಿಮೆಗೊಳಿಸುವುದು ಅಥವಾ ಕಿತ್ತು ಹಾಕುವುದು.

❑ ಬೆಲೆಗಳು, ವಿನಿಮಯ ದರ ಮತ್ತು ಬಡ್ಡಿ ದರದ ಮೇಲಣ ಎಲ್ಲಾ ನಿರ್ಬಂಧಗಳನ್ನು ರದ್ದುಪಡಿಸುವುದು.

❑ ಪಾವತಿಯ ಬಾಕಿ ಮತ್ತು ಫಿಸ್ಕಲ್ ಖೋತಾವನ್ನು ಕಡಿಮೆ ಮಾಡುವುದು ಅಥವಾ ತೆಗೆದು ಹಾಕುವುದು.



❑ ಆರ್ಥಿಕ ಸ್ವರೂಪದಲ್ಲಿ ಸುಧಾರಣೆಗಳನ್ನು ಜಾರಿಗೊಳಿಸುವುದು ಹಾಗೂ ವಿದೇಶಿ ಹಣಕಾಸು ಸಂಸ್ಥೆಗಳಿಗೆ ಮುಕ್ತ ಅವಕಾಶವನ್ನು ಒದಗಿಸುವುದು.

❑ ಸ್ವತಂತ್ರ ಹಣಕಾಸು ನೀತಿಯನ್ನು ಹೊಂದಲು ರಿಸರ್ವ್ ಬ್ಯಾಂಕಿಗೆ ಸಂಪೂರ್ಣ ಸ್ವಾಯತ್ತತೆಯನ್ನು ನೀಡುವುದು.

ಅಮೂಲಾಗ್ರ ಹೊಂದಾಣಿಕೆಗಳು :

❑ ಕೈಗಾರಿಕೆಗಳನ್ನು ನಿರ್ಬಂಧಗಳಿಂದ ಮುಕ್ತಗೊಳಿಸುವುದು.

❑ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸುವುದು.

❑ ರಫ್ತು ಪೂರಕ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಅಮೂಲಾಗ್ರ ಬದಲಾವಣೆಗಳನ್ನು ಅರ್ಥ ವ್ಯವಸ್ಥೆಯಲ್ಲಿ ಅಳವಡಿಸುವುದು.

❑ ಯಾವುದೇ ಅಡ್ಡಿ, ನಿರ್ಬಂಧನೆಗಳನ್ನು ಒಡ್ಡದೆ ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನಕ್ಕೆ ಮುಕ್ತ ಪ್ರವೇಶ ಒದಗಿಸುವುದು.

❑ ಬಂಡವಾಳ ಮತ್ತಿತರ ನಿಧಿಗಳು ಮುಕ್ತವಾಗಿ ಗಡಿ ದಾಟುವ ಅವಕಾಶ ಕಲ್ಪಿಸುವುದು.

❑ ಬೌದ್ಧಿಕ ಆಸ್ತಿ ಹಕ್ಕುಗಳ ರಕ್ಷಣೆಗೆ ಶಾಸನ ಬದ್ಧ ಕ್ರಮಗಳನ್ನು ರೂಪಿಸುವುದು.

❑ ಕಾಯ್ದೆಬದ್ಧ ಒಪ್ಪಂದಗಳನ್ನು ಮಾಡಿಕೊಳ್ಳಲು, ಖಾಸಗಿ ಆಸ್ತಿ ಹಕ್ಕು ಹೊಂದಿರಲು ಮತ್ತು ವ್ಯಾಪಾರ ಕೈಗಾರಿಕೆ ಹಾಗೂ ಹಣಕಾಸು ಸಂಸ್ಥೆಗಳು ಮುಕ್ತವಾಗಿ ಒಳಬರಲು ಮತ್ತು ಹೊರ ಹೋಗಲು ಸಾಧ್ಯವಾಗುವಂತೆ ವಿಧಿಬದ್ಧ ವಾತಾವರಣವನ್ನು ನಿರ್ಮಿಸುವುದು.

ಈ ಆರ್ಥಿಕ ನೀತಿಯ ಪ್ರಮುಖ ಬೇರುಗಳಿರುವುದು ಮಾರುಕಟ್ಟೆ ಶಕ್ತಿಗಳ ಮೇಲಣ ಅವಲಂಬನೆಯಲ್ಲಿ; ನಿರ್ಬಂಧಗಳ ಸಡಿಲಿಕೆಯಲ್ಲಿ; ಪ್ರಭುತ್ವದ ಪಾತ್ರವನ್ನು

ಕಡಿತಗೊಳಿಸುವುದರಲ್ಲಿ ಹಾಗೂ ಸಾರ್ವಜನಿಕ ವಲಯದ ಜಾಗದಲ್ಲಿ ಖಾಸಗಿ ವಲಯವನ್ನು ಪ್ರತಿಷ್ಠಾಪಿಸುವುದರಲ್ಲಿ, ಆರ್ಥಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಸಾರ್ವಜನಿಕ ವಲಯವು ಬಳಸಿಕೊಳ್ಳುವಲ್ಲಿ ಅಸಮರ್ಥವಾಗಿದೆ ಎಂಬ ಪೂರ್ವಾಗ್ರಹದ ಪರಿಣಾಮವಾಗಿಯೂ ಈ ಆರ್ಥಿಕ ನೀತಿ ರೂಪು ತಾಳಿದೆ.

ಭಾರತದಲ್ಲಿ ದಲಿತರು :

ಹಿಂದೆ ಅಸ್ಪೃಶ್ಯರೆಂದು ಗುರುತಿಸಲ್ಪಡುತ್ತಿದ್ದ ಜನರೇ ದಲಿತರು. ಇವರದೊಂದು ವಿಭಿನ್ನ ಸಾಮಾಜಿಕ ಗುಂಪು. ಆರ್ಥಿಕವಾಗಿ ಅತಿ ದುರ್ಬಲವಾಗಿರುವ ವರ್ಗದಲ್ಲಿ ಪ್ರಮುಖ ಗುಂಪು. ಇದು, ಸಾಮಾಜಿಕ ತಾರತಮ್ಯವನ್ನು ಅನುಭವಿಸುತ್ತದೆ. ಈ ಗುಂಪಿನಲ್ಲಿ ಬಡತನದ ಗೆರೆ ದಾಟಿರುವ ಜನಸಂಖ್ಯೆ ನಗಣ್ಯ. ಈ ಜನಸಂಖ್ಯೆಯು, ಅರ್ಥ ವ್ಯವಸ್ಥೆಯ ಆಧುನಿಕ ವಿಭಾಗಗಳಲ್ಲಿ ಪ್ರವೇಶ ಪಡೆಯಲು ಮೀಸಲಾತಿ ನೀತಿಯ ಆಸರೆ ಪಡೆಯಿತು. ಆದರೆ ಸಾಮಾಜಿಕ ಮನ್ನಣೆ ದೃಷ್ಟಿಯಿಂದ, ಆರ್ಥಿಕ ಮಟ್ಟ ಏನೇ ಇದ್ದರೂ, ದಲಿತರು ತೀವ್ರವಾಗಿ ಅವಮಾನಿತರಾಗಿದ್ದಾರೆ. ಹಳ್ಳಿಗಾಡಿನಲ್ಲಿ ಇನ್ನೂ ಜಾರಿಯಲ್ಲಿರುವ ಅಸ್ಪೃಶ್ಯತೆಗೆ, ನಗರಗಳ ಆಧುನಿಕ ಕ್ಷೇತ್ರಗಳಲ್ಲಿ ಜಾರಿಯಲ್ಲಿರುವ ಪರೋಕ್ಷ ತಾರತಮ್ಯಕ್ಕೆ ದಲಿತರು ಗುರಿಯಾಗಿದ್ದಾರೆ.

ಅಂಕಿ ಅಂಶಗಳು ಹೇಳುವಂತೆ, ಸ್ವಾತಂತ್ರ್ಯ ನಂತರದ ಐವತ್ತು ವರ್ಷಗಳಲ್ಲಿ ದಲಿತರು ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದ್ದಾರೆ; ಆದರೆ ಇದೇ ಐವತ್ತು ವರ್ಷಗಳಲ್ಲಿ ದಲಿತರು ಮತ್ತು ಇತರರ ನಡುವಣ ಅಂತರ ಮಾತ್ರ ಐವತ್ತು ವರ್ಷಗಳ ಹಿಂದೆ ಇದ್ದಷ್ಟೇ ಇದೆ ಅಥವಾ ತುಸು ಜಾಸ್ತಿಯೇ ಆಗಿದೆ. ದಲಿತರ ಪೈಕಿ ನೂರಕ್ಕೆ 95 ಜನ ಈಗಲೂ ಕೃಷಿಯನ್ನೇ ಅವಲಂಬಿಸಿದ್ದಾರೆ; ನೂರಕ್ಕೆ 75 ಜನ ಭೂ ಹೀನ ಕೃಷಿ ಕೂಲಿಕಾರರು. ನಗರಗಳಲ್ಲಿ ಅಸಂಘಟಿತ ಕಾರ್ಮಿಕರಲ್ಲಿ ಇವರದೇ ಸಿಂಹಪಾಲು. ರಾಷ್ಟ್ರದ 138 ದಶಲಕ್ಷ ದಲಿತರಲ್ಲಿ, ಮೀಸಲಾತಿ ಇದ್ದಾಗ್ಯೂ, ಸರ್ಕಾರಿ ಸೇವಾ ಕ್ಷೇತ್ರ ಪ್ರವೇಶಿಸಿದವರ ಪ್ರಮಾಣ ಕೇವಲ ಒಂದು ದಶಲಕ್ಷ; ಅಂದರೆ ನೂರಕ್ಕೆ ಒಬ್ಬರೂ ಇಲ್ಲ.

ದಲಿತರು ಆರ್ಥಿಕವಾಗಿಯೂ ಶೋಷಿತ ಗುಂಪಿಗೆ ಸೇರುವವರು ಹಾಗೂ ಸಾಮಾಜಿಕವಾಗಿಯೂ ಶೋಷಿತ ಗುಂಪಿಗೆ ಸೇರುವವರು. 1991ರ ನಂತರ ಭಾರತವು ಕೈಗೊಂಡ ಆರ್ಥಿಕ ಸುಧಾರಣೆಗಳ ದುಷ್ಪರಿಣಾಮ ಬಡವರ ಮೇಲೆ ಒಂದು ಪಟ್ಟಾದರೆ, ದಲಿತರ ಮೇಲೆ ಎರಡು ಪಟ್ಟಾಗಿದೆ. ಈ ಸುಧಾರಣೆಗಳು ಭಾರತದ ಆಹಾರ ಭದ್ರತೆ, ಹಣದುಬ್ಬರ, ಮುಂತಾದ ಕ್ಷೇತ್ರಗಳ ಮೇಲೆ ಹೇಗೆ ಚೆಲ್ಲಾಟ ಆಡಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಇನ್ನು ಸುಧಾರಣೆಯ ದುಷ್ಪರಿಣಾಮವು ಶಿಕ್ಷಣ, ಉದ್ಯೋಗ, ಖಾಸಗೀಕರಣ, ದೌರ್ಜನ್ಯಗಳು ಇತ್ಯಾದಿಗಳ ಮೇಲೆ ಹೇಗಾಗಿದೆ ಎಂಬುದನ್ನು ನೋಡಿದಾಗ, ದಲಿತರು ಬಡವರಾಗಿರುವುದಷ್ಟೇ ಅಲ್ಲದೇ ದಲಿತರೂ ಆಗಿರುವ ಕಾರಣದಿಂದ ಹೇಗೆ ಪದಾಘಾತಕ್ಕೆ ಸಿಲುಕಿದ್ದಾರೆ ಎಂಬುದು ವೇದ್ಯವಾಗುತ್ತದೆ.

ದಲಿತರ ಮೇಲೆ ದುಷ್ಪರಿಣಾಮ :

ನಿಮ್ಮ ವರ್ಗಗಳು ನಡೆಸಿದ ಜಾತಿ ವಿರೋಧಿ ಆಂದೋಲನ ನೇತಾರರು ಡಾ॥ಅಂಬೇಡ್ಕರ್. ಅವರ ಅಧ್ಯಕ್ಷತೆಯಲ್ಲಿನ ಸಂವಿಧಾನ ಸಮಿತಿಯು, ಭಾರತದ ದಲಿತರ ಹಿತ ರಕ್ಷಣೆಗೆ ಸಂಬಂಧಿಸಿದಂತೆ ತೀವ್ರ ಕಾಳಜಿ ವಹಿಸಿ, ಸಂವಿಧಾನವನ್ನು ಸಿದ್ಧಪಡಿಸಿತು. ದಲಿತರಿಗೆ ಅನೇಕ ರಕ್ಷಣಾ ಕ್ರಮಗಳನ್ನು ಒದಗಿಸಲಾಯಿತು. ಮುಖ್ಯವಾದವೆಂದರೆ

(1) ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ (2) ಆರ್ಥಿಕ (3) ರಾಜಕೀಯ (4) ಉದ್ಯೋಗವಕಾಶ ಸಂಬಂಧ ರಕ್ಷಣಾ ಕ್ರಮಗಳು.

ಇಂಗ್ಲೀಷ್‌ಗೆ ಸಿಕ್ಕಿರುವ ಪ್ರಾಧಾನ್ಯದಿಂದಾಗಿ ಭಾರತದ ನಗರಗಳು ಹಳ್ಳಿಗಳೊಂದಿಗೆ ಸಂಬಂಧವನ್ನೆ ಕಡಿದುಕೊಂಡಿವೆ. ಹಳ್ಳಿಗಳಲ್ಲಿನ ದಲಿತರು ಇನ್ನೂ ಅತಂತ್ರರಾಗಿದ್ದಾರೆ. ಈಗ, ಸರ್ಕಾರದ ಕಡೆಯಿಂದ ಅಷ್ಟೋ ಇಷ್ಟೋ ರಕ್ಷಣಾ ಕ್ರಮಗಳು ಜಾರಿಯಾಗುತ್ತಿರುವಾಗಲೇ, ದಲಿತ ಮಕ್ಕಳು ಶಾಲೆಯನ್ನು ಅರ್ಧಕ್ಕೆ ಬಿಡುವ ಪ್ರಮಾಣ ಗಾಬರಿ ಹುಟ್ಟಿಸುವಷ್ಟಿದೆ.

ಆರ್ಥಿಕ ಸುಧಾರಣೆಗಳ ನೀತಿಯ ಮೂಲವಿರುವುದು ಮುಕ್ತ ಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ. ಈ ವ್ಯವಸ್ಥೆಯು, ಭಾರತದ ಸಂವಿಧಾನದ ಮೂಲಭೂತ ಆಶಯವಾದ ಒಂದು ಮತ; ಒಂದು ಮೌಲ್ಯ ಎಂಬ ತತ್ವವನ್ನಾಗಲಿ, ಸಂವಿಧಾನವು ಜಾರಿಗೊಳಿಸುವ ಸಕಾರಾತ್ಮಕ ತಾರತಮ್ಯವನ್ನಾಗಲಿ ಎತ್ತಿ ಹಿಡಿಯುವುದಿಲ್ಲ. ಏಕೆಂದರೆ ಮುಕ್ತ ಮಾರುಕಟ್ಟೆ ಮಣೆ ಹಾಕುವುದು ಹಣವಿರುವ ವ್ಯಕ್ತಿಗೆ, ಗುಂಪಿಗೆ, ಸಮುದಾಯಕ್ಕೆ, ರಾಷ್ಟ್ರಕ್ಕೆ ಹಾಗೂ ರಾಷ್ಟ್ರಗಳ ಬಣಗಳಿಗೆ. ಅಂದರೆ ಇದು ಒಪ್ಪುವುದು ಕಾಡ ನೀತಿಯನ್ನು ಅರ್ಥಾತ್ (ಹಣದ) ಶಕ್ತಿಯ ಔನ್ನತ್ಯವನ್ನು. ನಮ್ಮ ಸಂವಿಧಾನವು ಪ್ರತಿಧ್ವನಿಸಿದ್ದು, ಈ ಮುಂಚಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಕಾಣಿಸಿಕೊಂಡಿದ್ದ ಉದಾರವಾದಿ, ಪ್ರಜಾಪ್ರಭುತ್ವವಾದಿ ಆಶೋತ್ತರಗಳನ್ನು, ಆದರೆ ಸ್ವಾತಂತ್ರ್ಯ ನಂತರ, ಈ ಆಶೋತ್ತರಗಳನ್ನು ಗಾಳಿಗೆ ತೂರಿ, ಸಂವಿಧಾನದಲ್ಲಿ ಅಡಕಗೊಳಿಸಲಾಗಿದ್ದ ರಕ್ಷಣಾ ಕ್ರಮಗಳನ್ನು ಕೇವಲ ಚುನಾವಣಾ ರಾಜಕೀಯಕ್ಕೆ ಮಾತ್ರ ಸೂಕ್ತವಾಗುವಂತೆ ಉಪಯೋಗಿಸಿಕೊಳ್ಳಲಾಯಿತು. ಜೊತೆ ಕಾರ್ಯಾಂಗವೂ ಶಾಮೀಲಾಗಿ, ಭಾರತವು ಪಟ್ಟಭದ್ರರ ಬಿಗಿಮುಷ್ಟಿಯಲ್ಲೇ ಉಳಿದು ದುರಂತ ಸಂಭವಿಸಿತು.

ಈಗ ಜಾರಿಗೆ ಬಂದಿರುವ ಆರ್ಥಿಕ ಸುಧಾರಣೆಗಳು ಈ ದುರಂತವನ್ನು ಖಾಯಂಗೊಳಿಸುವ ಗುರಿಯನ್ನೇ ಹೊಂದಿರುವ ಅಪಾಯ ಸಾಬೀತಾಗಿದೆ. ಆರ್ಥಿಕ ಸುಧಾರಣೆಗಳ ಜಾರಿಯು ತೀವ್ರಗೊಂಡಂತೆಲ್ಲ, ದಲಿತರಿಗೆ ಸಂವಿಧಾನವು ಒದಗಿಸಿರುವ ರಕ್ಷಣಾ ಕ್ರಮಗಳು ಹೆಚ್ಚು ಹೆಚ್ಚು ಅರ್ಥಹೀನವಾಗಲಿವೆ. ಆಗ ಸಮಗ್ರ ದೇಶದ ವಿಶೇಷವಾಗಿ, ದಲಿತರ ಸ್ಥಿತಿಯು ಭಯಾನಕವಾಗುತ್ತದೆ.

ಶಿಕ್ಷಣ-ಧನಸಹಾಯ-ಮೀಸಲಾತಿ

ದಲಿತರಿಗಾಗಿ ರೂಪಿಸಲಾಗಿರುವ ಅಭಿವೃದ್ಧಿ ಯೋಜನೆಗಳ ಪೈಕಿ ಪ್ರಧಾನವಾದುದೆಂದರೆ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಮತ್ತು ವಿದ್ಯಾರ್ಥಿ ವೇತನ ನೀಡಿಕೆ. ದಲಿತರನ್ನು ಸಶಕ್ತರನ್ನಾಗಿಸುವ ಪ್ರಮುಖ ಸಾಧನವೇ ಶಿಕ್ಷಣ. ಇದಿಲ್ಲದೇ ಹೋದರೆ, ಉದ್ಯೋಗ ಮೀಸಲಾತಿಯೂ ಸೇರಿದಂತೆ ಎಲ್ಲಾ ರಕ್ಷಣಾ ಕ್ರಮಗಳೂ ನಿರುಪಯುಕ್ತವಾಗಿ ಬಿಡುತ್ತವೆ. ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಹಾಗೂ ವಿದ್ಯಾರ್ಥಿ ವೇತನ/ಹಾಸ್ಟೆಲ್ ಸೌಲಭ್ಯ ಇಲ್ಲದಿದ್ದರೆ, ಈಗಲೂ ಬಹುತೇಕ ದಲಿತರು ಶಿಕ್ಷಣದಿಂದ ವಂಚಿತರಾಗೇ ಉಳಿಯುವ ಪರಿಸ್ಥಿತಿಯಿದೆ. ಆರ್ಥಿಕ ಸುಧಾರಣೆಗಳ ದುಷ್ಪರಿಣಾಮ ಈಗಾಗಲೇ ಶಿಕ್ಷಣ ಕ್ಷೇತ್ರದ ಮೇಲಾಗಿದೆ. ಶಿಕ್ಷಣ ಸಂಸ್ಥೆಗಳಿಗೆ ಸಿಗುತ್ತಿದ್ದ ಸಹಾಯ ಧನಕ್ಕೆ ಕಡಿತ ಬಿದ್ದಿದೆ. ಶಿಕ್ಷಣದ ಮೇಲಣ ವೆಚ್ಚದ ಹೊರೆಯನ್ನು ಆಯಾ ಕ್ಷೇತ್ರ ಸಂಬಂಧಿ ಖಾಸಗಿ ಕ್ಷೇತ್ರ/ಕೈಗಾರಿಕೆ/ಉದ್ದಿಮೆಗಳೇ ವಹಿಸಿಕೊಳ್ಳಬೇಕು ಎಂಬ ನೀತಿ ರೂಪುಗೊಳ್ಳುತ್ತಿದೆ.

ಮುಕ್ತ ಮಾರುಕಟ್ಟೆ ವ್ಯವಸ್ಥೆಯ ಕರಿನೆರಳು ಶಿಕ್ಷಣ ಕ್ಷೇತ್ರವನ್ನು ಈಗಾಗಲೇ ಆವರಿಸಿಕೊಳ್ಳುತ್ತಿದೆ. ಶಿಕ್ಷಣದ ವ್ಯಾಪಾರೀಕರಣ ಎಂಬುದು ಈಗ ಬರೀ ಆರೋಪ ಅಥವಾ ಆತಂಕದ ವಿದ್ಯಮಾನವಾಗಿ ಉಳಿದಿಲ್ಲ. ಆದೀಗ ವಸ್ತುಸ್ಥಿತಿ ಚಿತ್ರಿಸುವ ಪದಪುಂಜವಾಗಿದೆ. ಮುಕ್ತ ಮಾರುಕಟ್ಟೆ ವ್ಯವಸ್ಥೆಗೆ ಪ್ರಯೋಜನಕಾರಿಯಾಗುವ ಶಿಕ್ಷಣ ಹಾಗೂ ತರಬೇತಿಯ ವೆಚ್ಚವನ್ನು, ಪ್ರಯೋಜನದಲ್ಲಿ ಪಾಲುದಾರರಾಗುವ ಖಾಸಗಿ ಸಂಸ್ಥೆಗಳೇ ಭರಿಸಬೇಕೆಂಬ ಅಂಶವು ದೇಶದ ಪಟ್ಟಣಗಳತ್ತಲೂ ಪಸರಿಸುತ್ತಿದೆ. ಇಂಥ ಖಾಸಗಿ ಸಂಸ್ಥೆಗಳ ಉತ್ಪಾದನೆಗಳ ಬೆಲೆಯು ಕೇವಲ ಬೇಡಿಕೆ-ಪೂರೈಕೆ ನೀತಿಯನ್ನಷ್ಟೆ ಅಲ್ಲದೇ, ಉತ್ಪಾದನೆಯನ್ನು ಮಾರುಕಟ್ಟೆಗೆ ಬಿಡುವುದಕ್ಕೆ ಸಂಬಂಧಿಸಿದ ಹಲವಾರು ಕಾರ್ಯತಂತ್ರಗಳನ್ನೂ ಅವಲಂಭಿಸಿದೆ. ಜಾಗತೀಕರಣದ ಅಂಗವಾಗಿ ವಿದೇಶಿ ವಿಶ್ವವಿದ್ಯಾಲಯಗಳು ದೇಶಿ ಶಿಕ್ಷಣ ಸಂಸ್ಥೆಗಳ ಮೇಲೆ ಹತೋಟಿ ಹೊಂದುತ್ತಲಿವೆ; ಈ ಪ್ರಕ್ರಿಯೆಯಲ್ಲಿ ಅನೇಕ ಖಾಸಗಿ ಸಂಸ್ಥೆಗಳು ಪಾತ್ರವಹಿಸುತ್ತಿವೆ. ಒಂದೆಡೆ, ಇಲ್ಲಿನ ತಾಂತ್ರಿಕ ಶಿಕ್ಷಣದ ಗುಣಮಟ್ಟವನ್ನು ಅನಿವಾರ್ಯವಾಗಿ ಅಂತರರಾಷ್ಟ್ರೀಯ

ಮಟ್ಟಕ್ಕೆ ಏರಿಸುವ ಪ್ರಯತ್ನಗಳು ನಡೆದಿವೆ; ಇದರಿಂದಾಗಿ ಉನ್ನತ ಶಿಕ್ಷಣ ದುಬಾರಿಯಾಗುತ್ತಿದೆ. ಇನ್ನೊಂದೆಡೆ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಕಡ್ಡಾಯ ಶಿಕ್ಷಣ ಮುಂತಾದವುಗಳು ಸರ್ಕಾರಗಳ ನಿರ್ಲಕ್ಷ್ಯಕ್ಕೆ ಗುರಿಯಾಗುತ್ತಿವೆ.

ಆರ್ಥಿಕ ಸುಧಾರಣೆಗಳ ದುಷ್ಪರಿಣಾಮದಿಂದಾಗಿ ಶಿಕ್ಷಣ ಕ್ಷೇತ್ರಕ್ಕೆ ಒದಗಿಸಲಾಗುತ್ತಿದ್ದ ಧನಸಹಾಯದಲ್ಲಿ ಕಡಿತವಾಗುತ್ತಿದ್ದು, ಇದರಿಂದ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಸೊರಗುತ್ತಿವೆ; ಕ್ರಮೇಣ ಇವುಗಳು ಅಸಂಬದ್ಧವೆನಿಸಲಿವೆ. ಇಂಥ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ದಲಿತರಿಗೆ ಈ ಹಿಂದೆಯೇ ದೂರವಾಗಿದ್ದವು; ಸರ್ಕಾರಿ ಸಂಸ್ಥೆಗಳಲ್ಲಿದ್ದ ಮೀಸಲಾತಿ ನೀತಿಯ ಒತ್ತಾಸೆಯಿಂದಷ್ಟೇ, ಕೆಲವು ಸ್ಥಾನಗಳನ್ನು ದಲಿತರು ಪಡೆಯಬಹುದಾಗಿತ್ತು. ಈಗ ಪ್ರಾಪಂಚೀಕರಣದ ಪ್ರಕ್ರಿಯೆಯ ಅಂಗವಾಗಿ ನಡೆದಿರುವ ಜಾಗತೀಕರಣದ ದೆಸೆಯಿಂದ ದಲಿತರು ಇನ್ನೂ ದೂರ ಉಳಿಯಲಿದ್ದಾರೆ. ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ಆರ್ಥಿಕ ಸಂಪನ್ಮೂಲವನ್ನು ತಾವೇ ಕ್ರೋಢಿಕರಿಸಿಕೊಳ್ಳಲು ಮುಂದಾದಾಗ, ಶಿಕ್ಷಣ ಶುಲ್ಕ ಎಲ್ಲೆ ಮೀರಿ ಏರುತ್ತದೆ; ವಿದ್ಯಾರ್ಥಿ ವೇತನ ಎಂಬುದು ಅರ್ಥಹೀನ ಪದವಾಗಿ ಬಿಡುತ್ತದೆ. ಆಗ ಶಿಕ್ಷಣ ಕ್ಷೇತ್ರವನ್ನು ಭಾರತದ ಉನ್ನತ ವರ್ಗದವರೇ ಪ್ರವೇಶಿಸುವರು. ಅವರ ಕಣ್ಣುಗಳು ಅಂತರ-ರಾಷ್ಟ್ರೀಯ ಮಟ್ಟದತ್ತ ನೆಟ್ಟಿರುತ್ತದೆ.

ಜಾಗತೀಕರಣದಿಂದ ಉದ್ಯೋಗಾವಕಾಶಗಳು ಕ್ಷೀಣಿಸುತ್ತವೆ. ಉದ್ಯೋಗಕ್ಕಾಗಿ ಸ್ಪರ್ಧೆಯು ತೀವ್ರಗೊಳ್ಳುತ್ತದೆ; ಅಲ್ಲದೇ ವರ್ಗಗಳ ನಡುವಣ ಅಂತರವೂ ಹೆಚ್ಚಾಗುತ್ತದೆ. ಹೀಗೆ ಆರ್ಥಿಕ ಸುಧಾರಣೆಗಳು ದಲಿತರ ಅಭಿವೃದ್ಧಿ ಪಥದಲ್ಲಿ ಭಾರಿ ಅಡ್ಡಿಯನ್ನು ನಿರ್ಮಿಸುತ್ತವೆ. ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಈಗಿನ ವಸ್ತುಸ್ಥಿತಿಯೇ ಭಯಾನಕವಾಗಿದೆ. ಆದರೂ ಆರ್ಥಿಕ ಸುಧಾರಣೆಗಳ ದುಷ್ಪರಿಣಾಮ ಈ ಕ್ಷೇತ್ರದ ಮೇಲೂ ತೀವ್ರವಾಗಿ ಉಂಟಾಗಲಿದೆ. ಪ್ರಾಥಮಿಕ ಕಡ್ಡಾಯ ಶಿಕ್ಷಣ ಎಂಬುದು ಬೊಗಳೆಯಾಗಿರುವ, ಇಂಗ್ಲೀಷ್ ಹಾಗೂ ದೇಶಿಭಾಷಾ ಶಾಲೆಗಳೆಂಬ ಕಂದರವು ತಾರತಮ್ಯವನ್ನು ನಿರ್ಮಿಸಿರುವ ಈ ಹೊತ್ತಿನಲ್ಲಿ, ಆರ್ಥಿಕ ಸುಧಾರಣೆಗಳಿಂದಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರವು ಇನ್ನಷ್ಟು ನರಕವಾಗಲಿದೆ. ಇಂಗ್ಲೀಷ್‌ಗೆ ಸಿಕ್ಕಿರುವ ಪ್ರಾಧಾನ್ಯದಿಂದಾಗಿ ಭಾರತದ ನಗರಗಳು ಹಳ್ಳಿಗಳೊಂದಿಗೆ ಸಂಬಂಧವನ್ನೆ ಕಡಿದುಕೊಂಡಿವೆ. ಹಳ್ಳಿಗಳಲ್ಲಿನ ದಲಿತರು ಇನ್ನೂ ಅತಂತ್ರರಾಗಿದ್ದಾರೆ. ಈಗ, ಸರ್ಕಾರದ ಕಡೆಯಿಂದ ಅಷ್ಟೋ ಇಷ್ಟೋ ರಕ್ಷಣಾ ಕ್ರಮಗಳು ಜಾರಿಯಾಗುತ್ತಿರುವಾಗಲೇ, ದಲಿತ ಮಕ್ಕಳು ಶಾಲೆಯನ್ನು ಅರ್ಧಕ್ಕೆ ಬಿಡುವ ಪ್ರಮಾಣ ಗಾಬರಿ ಹುಟ್ಟಿಸುವಷ್ಟಿದೆ. ಇನ್ನು, ರಕ್ಷಣಾ ಕ್ರಮಗಳೇ ಮೊಟಕುಗೊಂಡಾಗ ಇನ್ನೆಂಥ, ಭೀಕರ ಪರಿಸ್ಥಿತಿ ನಿರ್ಮಾಣವಾದೀತು! ಹೀಗಾದಾಗ, ತಮ್ಮ ಬದುಕನ್ನು ಬದಲಾಯಿಸಬಲ್ಲ ಶಕ್ತಿಯು ಶಿಕ್ಷಣಕ್ಕಿದೆ ಎಂಬ ಸತ್ಯದಲ್ಲೇ ದಲಿತರು ನಂಬಿಕೆಯನ್ನು ಕಳೆದುಕೊಂಡರೂ ಆಶ್ಚರ್ಯವಿಲ್ಲ.

ದೌರ್ಜನ್ಯ ಮತ್ತು ತುಳಿತಕ್ಕೆ ಗುರಿಯಾಗದ ಕ್ಷಣವೇ ದಲಿತರ ಬದುಕಿನಲ್ಲಿಲ್ಲ. ಸರ್ಕಾರಗಳು ದಲಿತರ ಮೇಲಿನ ದೌರ್ಜನ್ಯ, ಕೊಲೆ, ಅತ್ಯಾಚಾರ, ಹಲ್ಲೆ, ಅಪಮಾನ, ಅಸ್ಪೃಶ್ಯತೆ, ಮಾನಭಂಗ ಮುಂತಾದ ಪ್ರಕರಣಗಳ ಬಗ್ಗೆ ಅಂಕಿ-ಅಂಶಗಳನ್ನು ಸಂಗ್ರಹಿಸುವುದು ಹಾಗೂ ಪ. ಜಾತಿ/ಪಂಗಡಗಳ ರಾಷ್ಟ್ರೀಯ ಆಯೋಗ ಈ ಬಗ್ಗೆ ಸರ್ಕಾರಕ್ಕೆ ವರದಿ ನೀಡುವುದು ನಡೆದೇ ಇದೆ. ಆದರೆ ದಲಿತರ ಮೇಲಿನ ದೌರ್ಜನ್ಯಗಳ ಸಂಖ್ಯೆ ಮಾತ್ರ ಕಮ್ಮಿಯಾಗಿಲ್ಲ.

ಉದ್ಯೋಗ ಮೀಸಲಾತಿ

ದಲಿತರ ಹಿತಕ್ಕಾಗಿ ಬಳಕೆಯಾದ ಇನ್ನೊಂದು ರಕ್ಷಣಾ ಕ್ರಮ, ಉದ್ಯೋಗ ಮೀಸಲಾತಿ. ಸರ್ಕಾರಿ, ಅರೆ ಸರ್ಕಾರಿ, ಸಾರ್ವಜನಿಕ, ಅನುದಾನಿತ ಹಾಗೂ ಸ್ವಾಯತ್ತ ಸಂಸ್ಥೆ/ಇಲಾಖೆಗಳಲ್ಲಿ ಈ ಕ್ರಮದ ಅಡಿಯಲ್ಲಿ ಕೊಂಚವಾದರೂ ಆಸರೆ ದಲಿತರಿಗೆ ಸಿಕ್ಕಿದೆ. ಇದರ ಜಾರಿಯಲ್ಲಿ ಆಗಿರುವ ಅಕ್ರಮಗಳೇನೇ ಇದ್ದರೂ, ಇದೊಂದು ಉಪಯುಕ್ತ ರಕ್ಷಣಾ ಕ್ರಮ ಎಂಬುದಂತೂ ನಿರ್ವಿವಾದ. ಖಾಸಗಿ ಕ್ಷೇತ್ರದಲ್ಲಿ ದುರ್ಬೀನು ಹಿಡಿದು ನೋಡಿದರೂ ದಲಿತರು ಕಾಣುವುದಿಲ್ಲ. (ಕಸ ಗುಡಿಸುವ ಹಾಗೂ ಇತರ ಕೊಳೆ ತೊಳೆಯುವ ಕೆಲಸಗಳಲ್ಲಿ ಇವರೇ ತುಂಬಿರುತ್ತಾರೆ ಎಂಬುದು ಬೇರೆ ವಿಚಾರ). ಹೀಗೆ ಹೋಲಿಕೆ ಮಾಡಿದಾಗ ಮಾತ್ರ ಮೀಸಲಾತಿಗಿರುವ ಮಹತ್ವ ಮನದಟ್ಟಾಗುತ್ತದೆ.

ಒಟ್ಟಾರೆ, ಭಾರತದಲ್ಲಿ ಸುಮಾರು 50,000 ದಲಿತರು ನೌಕರಶಾಹಿಯಲ್ಲಿ ಏರಿ, ಕೊಂಚ ಮಟ್ಟಿಗೆ ಆರ್ಥಿಕ ಚೈತನ್ಯ ಪಡೆದು ಆಗೂ ಕೊಂಚ ಸ್ವಾಭಿಮಾನ ಹೊಂದುವ ಹಂತವನ್ನು ತಲುಪಿದ್ದರೆ, ಅದಕ್ಕೆ ಮೀಸಲಾತಿ ನೀತಿಯೇ ಕಾರಣ. ಒಂದು ಅರ್ಥದಲ್ಲಿ, ವಿದ್ಯಾವಂತ ದಲಿತರ ಪಾಲಿನ ಸಂಜೀವಿನಿ ಮೀಸಲಾತಿ.

ದಲಿತರಲ್ಲಿ ಶಿಕ್ಷಣದ ಬಗ್ಗೆ ಕೊಂಚವಾದರೂ ಆಸಕ್ತಿ ಮೂಡುತ್ತಿದ್ದರೆ ಅದು ಮೀಸಲಾತಿ ಬಗೆಗಿನ ನಂಬಿಕೆಯಿಂದಲೇ. ದಿನ ನಿತ್ಯ ಅಸಂಖ್ಯ ಅನ್ಯಾಯ-ಅಪಮಾನ-ದೌರ್ಜನ್ಯ ಪ್ರಕರಣಗಳಲ್ಲಿ ಸಿಲುಕಿದರೂ, ದಲಿತರು ಈ ದೇಶದ ಬಗ್ಗೆ ಹಾಗೂ ಸಂವಿಧಾನದ ಬಗ್ಗೆ ಪ್ರೀತಿ, ವಿಶ್ವಾಸಗಳನ್ನು ಇನ್ನೂ ಉಳಿಸಿಕೊಂಡಿದ್ದರೆ, ಅದು ಈ ಮೀಸಲಾತಿಯ ಕಾರಣದಿಂದಲೇ ಎಂದು ಹೇಳಬಹುದು. ಆರ್ಥಿಕ ಸುಧಾರಣೆಗಳ ಭಾಗವಾಗಿ ಖಾಸಗೀಕರಣದ ಗಾಳಿ ಬೀಸುತ್ತಿದೆ. ಈ ಗಾಳಿಯಿಂದಾಗಿ ಈಗಾಗಲೇ ಮೀಸಲಾತಿಯ ಆಶಯ ತರಗುಟ್ಟಿದೆ. ವಿಶ್ವಬ್ಯಾಂಕ್‌ನ ಅಪಮೂಲಾಗ್ರ ಹೊಂದಾಣಿಕಾ ಕಾರ್ಯಕ್ರಮದ ಅನ್ವಯ, ಆರ್ಥಿಕ ಸುಧಾರಣೆಗಳು ಜಾರಿಗೊಂಡ ಎಲ್ಲಾ ರಾಷ್ಟ್ರಗಳಲ್ಲಿ ಸಾರ್ವಜನಿಕ ವಲಯವನ್ನು ರಾಷ್ಟ್ರೀಕರಣದ ರಕ್ಷಣೆಯಿಂದ ಹೊರಗೆಳೆದು ತಂದು ಖಾಸಗೀಕರಣಗೊಳಿಸಲಾಗಿದೆ. ಭಾರತವು ಕೊಂಚ ತಡವಾಗಿ ವಿಶ್ವ ಬ್ಯಾಂಕಿನ ಸರಪಳಿಗೆ ಸಿಕ್ಕು ಬಿದ್ದಿರುವುದರಿಂದ ಲ್ಯಾಟಿನ್ ಅಮೇರಿಕನ್ ರಾಷ್ಟ್ರಗಳಿಗೆ ಬಂದೊದಗಿರುವ ಘನಘೋರ ಪರಿಸ್ಥಿತಿಯು ಭಾರತದಲ್ಲಿ ಕೊಂಚ ತಡವಾಗಿ ಕಾಣಲಿದೆ; ಆದರೆ ಅಂಥ ಪರಿಸ್ಥಿತಿ ಬರುವುದಂತೂ ಶತಸ್ಸಿದ್ಧ.

ಭಾರತದಲ್ಲಿ ಆರ್ಥಿಕ ಸುಧಾರಣೆಗಳು ಜಾರಿಗೊಂಡು ಐದು ವರ್ಷಗಳಾಗುತ್ತಿರುವ ಈ ಹೊತ್ತಿಗೆ, ಬಹುತೇಕ ಎಲ್ಲಾ ಸಾರ್ವಜನಿಕ ವಲಯಗಳ ತಲೆಯ ಮೇಲೆ ಖಾಸಗೀಕರಣವೆಂಬ ತೂಗು ಕತ್ತಿ ನೇತಾಡುತ್ತಿದೆ. ಸ್ವಯಂ ನಿವೃತ್ತಿ ಉತ್ತೇಜನ ಯೋಜನೆಯಿಂದ ಈ ದಿಕ್ಕಿನಲ್ಲಿ ಆರಂಭವಾದ ಕ್ರಮಗಳಲ್ಲಿ ಇತ್ತೀಚಿನದೆಂದರೆ, ಶೇ. 49ರವರೆಗೆ ಸಾರ್ವಜನಿಕ ವಲಯಗಳಲ್ಲಿಂದ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಯೋಜನೆಗೆ ಅನುಮೋದನೆ ದಕ್ಕಿರುವುದು. ಶೇ. 51ರಷ್ಟಾದರೂ ಸಾರ್ವಜನಿಕ ಉದ್ದಿಮೆಗಳ ಒಡೆತನ ರಾಷ್ಟ್ರದ ಕೈಯಲ್ಲಿ ಇದೆಯೆಂಬುದೇ ಸದ್ಯಕ್ಕೆ ಸಮಾಧಾನದ ಸಂಗತಿ. (ಇದಕ್ಕೂ ಗಂಡಾಂತರ ಬರುವ ಕಾಲ ದೂರವಿಲ್ಲ). ಆದ್ದರಿಂದ ಈ ಸಾರ್ವಜನಿಕ ವಲಯಗಳಲ್ಲಿ ಇನ್ನೂ ಮೀಸಲಾತಿ ಉಳಿದುಕೊಂಡಿದೆ. ಅದಾಗ್ಯೂ, ಆರ್ಥಿಕ ಸುಧಾರಣೆಗಳ ಜಾರಿ ಕ್ರಮಗಳಲ್ಲೇ ಮೀಸಲಾತಿ ನೀತಿಯನ್ನು ಅಸಂಬದ್ಧಗೊಳಿಸುವ ಹುನ್ನಾರಗಳನ್ನು ಹೆಣೆಯಲಾಗಿದೆ ಎಂಬುದು ಕಠೋರ ವಾಸ್ತವ.

ಮುಕ್ತಗೊಂಡಿರುವ ವಿಶ್ವ ಮಾರುಕಟ್ಟೆಯಲ್ಲಿ ನಮ್ಮ ಸಾರ್ವಜನಿಕ ಉದ್ದಿಮೆಗಳು ಸಾಮರ್ಥ್ಯವನ್ನು ಸಾಬೀತು ಪಡಿಸಬೇಕೆಂಬ ನಿರ್ಧಾರದ ಪರಿಣಾಮವಾಗಿ, ಈಗಾಗಲೇ ಹಲವು ಸಾರ್ವಜನಿಕ ಉದ್ದಿಮೆಗಳು, ದೇಶಿ ಹಾಗೂ ವಿದೇಶಿ ಖಾಸಗಿ ಕಂಪನಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿವೆ. ಇದಕ್ಕೆ ಸರ್ಕಾರಗಳೇ ಅನುಮತಿ ನೀಡುತ್ತಿವೆ; ಹಲವೊಮ್ಮೆ ಸರ್ಕಾರಗಳು ಈ ಬಗ್ಗೆ ಸಾರ್ವಜನಿಕ ಉದ್ದಿಮೆಗಳನ್ನು ಉತ್ತೇಜಿಸಿದ ಉದಾಹರಣೆಗಳೂ ಇವೆ. ಹಾಗಾಗೇ ಕಳೆದ ಐದು

ವರ್ಷಗಳಲ್ಲಿ ಅನೇಕ ಲಾಭದಾಯಕ ಸಾರ್ವಜನಿಕ ಉದ್ದಿಮೆಗಳು ಜಂಟಿ ಕಂಪನಿಗಳನ್ನು ರಚಿಸಿಕೊಂಡಿವೆ.

ಸಾರ್ವಜನಿಕ ಉದ್ದಿಮೆಗಳನ್ನು ನಿರ್ಬಂಧಿಸುವ ತಾಂತ್ರಿಕ ನಿಯಮಾವಳಿಗಳಿಂದ ಈ ಕಂಪನಿಗಳನ್ನು ಮುಕ್ತಗೊಳಿಸಲಾಗಿದೆ. ಇಲ್ಲಿನ ಸಾರ್ವಜನಿಕ ಉದ್ದಿಮೆ ಮತ್ತು ಖಾಸಗಿ ಕಂಪನಿಗಳ ಷೇರು ಮೊತ್ತ 49:51 ಇರಬಹುದಾಗಿದೆ. ಅಂದರೆ ಈ ಜಂಟಿ ಕಂಪನಿಗಳಲ್ಲಿ ಮೀಸಲಾತಿ ಕಡ್ಡಾಯವಾಗಿರುವುದಿಲ್ಲ. ಅಂದರೆ, ಸಾರ್ವಜನಿಕ ಉದ್ದಿಮೆಗಳನ್ನು ಪರೋಕ್ಷವಾಗಿ ಖಾಸಗೀಕರಣಗೊಳಿಸಿ, ಮೀಸಲಾತಿಯನ್ನು ಅಸಂಬದ್ಧಗೊಳಿಸುವ ಕುಟಿಲ ಕ್ರಮ ಇದು.

ಒಂದು ರೀತಿಯಲ್ಲಿ ಸಾರ್ವಜನಿಕ ಉದ್ದಿಮೆಯ ಅಸ್ತಿತ್ವ ತಾಂತ್ರಿಕವಾಗಿ ಹಾಗೇ ಉಳಿದಿರುತ್ತದೆ; ಆದರೆ ವ್ಯಾವಹಾರಿಕವಾಗಿ ಅದರ ಅಸ್ತಿತ್ವ ನಾಶವಾಗಿ, ಅದು ಖಾಸಗಿ ವಲಯವಾಗಿ ಮಾರ್ಪಟ್ಟು, ಸರ್ಕಾರಿ ನೀತಿ-ನಿಯಮಗಳಿಂದ ವಿನಾಯ್ತಿಯನ್ನು ಗಿಟ್ಟಿಸಿಕೊಂಡಿರುತ್ತದೆ. ಇಂಥ ಜಂಟಿ ಕಂಪೆನಿಗಳು ಹೆಚ್ಚು ಹೆಚ್ಚು ಆಧುನಿಕಗೊಳ್ಳುತ್ತವಾದ್ದರಿಂದ, ವಿಶೇಷ ನೈಪುಣ್ಯವನ್ನು ನಿರೀಕ್ಷಿಸುತ್ತವಾದ್ದರಿಂದ ಇಲ್ಲಿ ದಲಿತರಿಗೆ ಅವಕಾಶಗಳು ಇನ್ನೂ ಕ್ಷೀಣಿಸುತ್ತವೆ.

ಒಟ್ಟಾರೆ, ಜಂಟಿ ಕಂಪನಿಗಳ ರಚನೆಯಿಂದಾಗಿ ಮೀಸಲಾತಿ ನೀತಿ ಅಸಂಬದ್ಧವಾಗುತ್ತದೆ ಹಾಗೂ ದಲಿತರು ಬೀದಿಗೆ ತಳ್ಳಲ್ಪಡುತ್ತಾರೆ. ಆರ್ಥಿಕ ಸುಧಾರಣೆಗಳ ಗಾಳಿಯೂ ಇನ್ನೂ ವೇಗ ಪಡೆದುಕೊಂಡಿಲ್ಲ; ಹಾಗಾಗಿ ಸದ್ಯಕ್ಕೆ ಒಂದು ಸೀಮಿತ ಪ್ರಮಾಣದಲ್ಲಿ ಮಾತ್ರ, ಸಾರ್ವಜನಿಕ ಉದ್ದಿಮೆಗಳಲ್ಲಿ ಬಂಡವಾಳ ಹೂಡಿಕೆಯ ಪ್ರಮಾಣವನ್ನು ಕಡಿತಗೊಳಿಸಲಾಗುತ್ತಿದೆ.

ಆದರೆ ಬರಲಿರುವ ವರ್ಷಗಳಲ್ಲಿ, ವಿಶ್ವಬ್ಯಾಂಕ್ ಒತ್ತಡದಿಂದಾಗಿ, ಎಲ್ಲಾ ರೀತಿಯ ನಿರ್ಬಂಧಗಳನ್ನು ಮುರಿದು ಹಾಕಿ ಈ ಪ್ರಕ್ರಿಯೆಯನ್ನು ಗರಿಷ್ಠ ವೇಗದಲ್ಲಿ ಜಾರಿಗೊಳಿಸುವುದು ಭಾರತಕ್ಕೆ ಅನಿವಾರ್ಯವಾಗಲಿದೆ. ಸಾರ್ವಜನಿಕ ಉದ್ದಿಮೆಗಳನ್ನು ಹಾಡು ಹಗಲೇ ಖಾಸಗೀಕರಣಗೊಳಿಸುವ, ಮಾರಾಟ ಮಾಡಿಬಿಡುವ ಮೂರ್ಖತನವನ್ನೇನೂ ಸರ್ಕಾರಗಳು ಮಾಡಲಿಕ್ಕಿಲ್ಲ.

ಏಕೆಂದರೆ, ಭಾರತದ ಸರ್ಕಾರಗಳಿಗೆ ಇನ್ನೂ ಜನ ಚಳುವಳಿಗಳ ಬಗ್ಗೆ, ಕಾರ್ಮಿಕ ಸಂಘಟನೆಗಳ ಬಗ್ಗೆ ಸಾಕಷ್ಟು ಆತಂಕವಿದೆ. ಆದರೆ ಪರೋಕ್ಷವಾಗಿ, ಯಾವುದೋ ಬಳಸು ಮಾರ್ಗದಲ್ಲಿ ಈ ಪ್ರಕ್ರಿಯೆ ನಡೆದೇ ನಡೆಯುತ್ತದೆ. ಇದು ಗ್ಯಾರಂಟಿ. ಏಕೆಂದರೆ ವಿಶ್ವಬ್ಯಾಂಕು, ಅಂತರರಾಷ್ಟ್ರೀಯ ಹಣಕಾಸು ನಿಧಿ, ವಿಶ್ವ ವ್ಯಾಪಾರ ಸಂಸ್ಥೆಗಳ ಜಾಲದಲ್ಲಿ ಸಿಕ್ಕಿ ಬಿದ್ದಿರುವ ಭಾರತ, ತನ್ನ ದಿಕ್ಕನ್ನು ನಿರ್ಧರಿಸಿಕೊಳ್ಳುವ ಅವಕಾಶವನ್ನು ಎಂದೋ ಕಳೆದುಕೊಂಡಿದೆ.

ಭಾರತ ಇಟ್ಟಿರುವ ಹೆಜ್ಜೆಗಳಿಂದಾಗಿ ಮೊದಲ ಬಲಿ ಪಶುಗಳಾಗಲಿರುವವರು ದಲಿತರು. ಖಾಸಗೀಕರಣದ ಬುನಾದಿ, ಸ್ಪರ್ಧಾತ್ಮಕ ಪೈಪೋಟಿಯ ಗುಂಗು,

ಭಾರತಕ್ಕೆ ಹಣದ ಕೊರತೆಯಿಲ್ಲ; ಹಣವನ್ನು ಹೊಂದಿಸಿ, ಸಾಮಾನ್ಯ ಜನತೆಯ ಸಮಸ್ಯೆಗಳನ್ನು ಬಗೆಹರಿಸಬಲ್ಲ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ, ಭಾರತ ಸರ್ಕಾರ ರಾಜಕೀಯ ಇಚ್ಛಾಶಕ್ತಿಯನ್ನು ತೋರಿದರೆ, ಹಣ ದೊರಕುವಲ್ಲಿ ಸಂದೇಹವಿಲ್ಲ; ಭಾರತದಲ್ಲಿ ಸಮಸ್ತ ಜನತೆಯ ಬದುಕು ಹಸನಾಗುವಲ್ಲಿ ಸಂದೇಹವಿಲ್ಲ.

ಅತ್ಯಾಧುನಿಕೀಕೃತ ಪ್ರತಿಭೆಯ ನಿರೀಕ್ಷೆ, ಸಾಂಪ್ರದಾಯಕವಾಗಿ ಭಾರತೀಯ ಸಮಾಜದಲ್ಲಿ ಜಾತಿಗಿರುವ ವಿಶಿಷ್ಟ ಸ್ಥಾನ ಇವೆಲ್ಲವೂ, ಮೀಸಲಾತಿ ನೀತಿಯನ್ನು ಹಾಗೂ ದಲಿತರ ಭವಿಷ್ಯವನ್ನು ಹೊಸಕಿ ಹಾಕಲಿವೆ.

ದೌರ್ಜನ್ಯಗಳು ಮತ್ತು ಸಾಮಾಜಿಕ-ಸಾಂಸ್ಕೃತಿಕ ತುಳಿತ :

ದೌರ್ಜನ್ಯ ಮತ್ತು ತುಳಿತಕ್ಕೆ ಗುರಿಯಾಗದ ಕ್ಷಣವೇ ದಲಿತರ ಬದುಕಿನಲ್ಲಿಲ್ಲ. ಸರ್ಕಾರಗಳು ದಲಿತರ ಮೇಲಿನ ದೌರ್ಜನ್ಯ, ಕೊಲೆ, ಅತ್ಯಾಚಾರ, ಹಲ್ಲೆ, ಅಪಮಾನ, ಅಸ್ಪೃಶ್ಯತೆ, ಮಾನಭಂಗ ಮುಂತಾದ ಪ್ರಕರಣಗಳ ಬಗ್ಗೆ ಅಂಕಿ-ಅಂಶಗಳನ್ನು ಸಂಗ್ರಹಿಸುವುದು ಹಾಗೂ ಪ. ಜಾತಿ/ಪಂಗಡಗಳ ರಾಷ್ಟ್ರೀಯ ಆಯೋಗ ಈ ಬಗ್ಗೆ ಸರ್ಕಾರಕ್ಕೆ ವರದಿ ನೀಡುವುದು ನಡೆದೇ ಇದೆ. ಆದರೆ ದಲಿತರ ಮೇಲಿನ ದೌರ್ಜನ್ಯಗಳ ಸಂಖ್ಯೆ ಮಾತ್ರ ಕಮ್ಮಿಯಾಗಿಲ್ಲ. ಈ ಬಗ್ಗೆ ಸಮಗ್ರವಾದ ಚಿಂತನೆಯೂ ನಡೆದಿಲ್ಲ; ಕಾಲಬದ್ಧ ಹಾಗೂ ಹಂತ ಹಂತದ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಲಾಗಿಲ್ಲ.

ಸರ್ಕಾರಗಳು, ಆಡಳಿತ ಯಂತ್ರ, ಸಾಮಾಜಿಕ ಸಂಘಟನೆಗಳು...ಯಾರಿಗೂ ದೃಢವಾದ ಇಚ್ಛಾಶಕ್ತಿ ಇದ್ದಂತಿಲ್ಲ. ಸಂವಿಧಾನದ ಹಲವು ಅನುಚ್ಛೇದಗಳು ವಾಸ್ತವದಲ್ಲಿ ವ್ಯಂಗ್ಯವಾಗಿ ಉಳಿದಿವೆ. ಪ.ಜಾತಿ/ಪಂಗಡಗಳ ರಾಷ್ಟ್ರೀಯ ಆಯೋಗದ ಅಧ್ಯಯನವು ಸ್ಪಷ್ಟಪಡಿಸುವಂತೆ ಭಾರತದಲ್ಲಿ ಪ್ರತಿ ದಿನ ಸುಮಾರು 50 ದೌರ್ಜನ್ಯಗಳು ದಲಿತರ ಮೇಲೆ ನಡೆದ ಬಗ್ಗೆ ಪ್ರಕರಣಗಳು ದಾಖಲಾಗುತ್ತವೆ. (ಸರಿ ಸುಮಾರು 500 ಪ್ರಕರಣಗಲು ದಾಖಲಾಗದೇ ಹೋಗುತ್ತವೆಂಬ ಅಂದಾಜು ಇದೆ). ಈ ದೌರ್ಜನ್ಯಗಳನ್ನು 45 ಬಗೆಯಲ್ಲಿ ವಿಂಗಡಿಸಿರುವ ಆಯೋಗವು, ಈ ಪೈಕಿ ಕನಿಷ್ಠ 15 ಬಗೆಯ ದೌರ್ಜನ್ಯಗಳಿಗೆ ದಲಿತರ ಆರ್ಥಿಕ ಹಿಂದುಳಿದಿರುವಿಕೆ/ಪರಾವಲಂಬನೆಯೇ ಪ್ರಧಾನ ಕಾರಣವೆಂದು ಸ್ಪಷ್ಟಪಡಿಸಿದೆ. ಇತ್ತೀಚಿನ ವರ್ಷಗಳಲ್ಲಿ ದಲಿತರ ಮೇಲಣ ದೌರ್ಜನ್ಯಗಳು ಹೆಚ್ಚುತ್ತಿರುವುದಕ್ಕೆ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ದೌರ್ಜನ್ಯ ಪ್ರಕರಣಗಳು ದಾಖಲಾಗುತ್ತಿರುವುದಕ್ಕೆ, ದಲಿತರಲ್ಲಿ ಹೆಚ್ಚುತ್ತಿರುವ ಜಾಗೃತಿ, ತಿಳುವಳಿಕೆ, ಹಕ್ಕಿನ ಬಗೆಗಿನ ಮಾಹಿತಿ ಸ್ವಾಭಿಮಾನಗಳೇ ಮುಖ್ಯ ಅಂಶಗಳಾಗಿವೆ.

ಒಂದು ಹುಸಿ ಗ್ರಹಿಕೆ :

ಜಾರಿಗೊಳ್ಳುತ್ತಿರುವ ಆರ್ಥಿಕ ಸುಧಾರಣೆಗಳಿಂದ ಗ್ರಾಮೀಣ ಭಾಗದ ಭಾರಿ ಹಿಡುವಳಿದಾರರು, ಹಲವು ಬಗೆಯಲ್ಲಿ ಲಾಭ ಗಿಟ್ಟಿಸುತ್ತದೆ. ಆಗ ಗ್ರಾಮೀಣ ಭಾಗದ ಶ್ರಮಜೀವಿಗಳ/ದಲಿತರ ಗತಿ ಏನಾಗುತ್ತದೆ? ಭಾರತೀಯ ಗ್ರಾಮ ವ್ಯವಸ್ಥೆಯ ಮೇಲೆ ಯಾವ ಪರಿಣಾಮ ಆಗುತ್ತದೆ? ಆರ್ಥಿಕ ಸುಧಾರಣೆಗಳ ಅಂತಃ ಸತ್ವವಾಗಿರುವ ಬಂಡವಾಳವಾದ ಮತ್ತು ಭಾರತದ ಗ್ರಾಮೀಣ ಪ್ರದೇಶದಲ್ಲಿರುವ ಪಾಳೆಯಶಾಹಿ-ಎರಡಕ್ಕೂ ಹೊಂದಾಣಿಕೆಯಾಗುವುದಿಲ್ಲ ಎಂಬುದು ಹುಸಿ ಗ್ರಹಿಕೆ.

ಭಾರತದ ಅನುಭವವು ನಿಜ ಗ್ರಹಿಕೆ ಏನೆಂಬುದನ್ನು ಸಾಬೀತುಪಡಿಸಿದೆ. ಯುರೋಪ್‌ನಲ್ಲಿ ಸಂಭವಿಸಿದಂತೆ ಬಂಡವಾಳವಾದವು, ಪಾಳೆಯಶಾಹಿಯನ್ನು ಸದೆ ಬಡಿದು ಭಾರತದಲ್ಲೂ ತಲೆಯೆತ್ತುತ್ತದೆಂಬ ಎಣಿಕೆ ಒಂದೋ ಅಮಾಯಕತೆಯದ್ದು ಅಥವಾ ದುರುದ್ದೇಶಿತವಾದದ್ದು. ಏಕೆಂದರೆ, ಭಾರತದಲ್ಲಿ ಬಂಡವಾಳವಾದವು ತನ್ನನ್ನು ತಾನು ಪಾಳೆಯ ಶಾಹಿಯೊಳಗೆ ವಿಲೀನಗೊಳಿಸಿಕೊಂಡಿದೆ. ಪಾಳೆಯಶಾಹಿ ಜೊತೆಗೇ ತಾನೂ ಬೆಳೆಯಲು ಅಗತ್ಯವಾದ ಮೂಲದ್ರವ್ಯವನ್ನು ಅದು ರೂಢಿಸಿಕೊಂಡಿದೆ. ಭಾರತೀಯ ಬಂಡವಾಳವಾದದ ವೈಶಿಷ್ಟ್ಯ ಇದು. ಹಾಗಾಗಿ, ಆರ್ಥಿಕ ಸುಧಾರಣೆಗಳ ಜಾರಿಯು ತೀವ್ರಗೊಂಡ ಹಾಗೆ, ಭಾರತದಲ್ಲಿ ಪಾಳೆಯಶಾಹಿಯು ಅವನತಿ ಹೊಂದುತ್ತದೆಂಬ, ತನ್ಮೂಲಕ ಜಾತಿ ವ್ಯವಸ್ಥೆಯು ಕ್ಷೀಣಗೊಳ್ಳುತ್ತದೆಂಬ ಚಿಂತನೆಯಲ್ಲಿ ಮೂಲಭೂತ ದೋಷವಿದೆ. ಜಾತಿ ವ್ಯವಸ್ಥೆಯು ಪಾಳೆಯಶಾಹಿಯ ಸ್ವರೂಪವನ್ನು ಈಗಾಗಲೇ ಗಮನಾರ್ಹವಾಗಿ ಬದಲಾಯಿಸಿದೆ.

ಜಾತಿ ವ್ಯವಸ್ಥೆಯು ಒಂದು ಪ್ರಧಾನ ಪ್ರಕ್ರಿಯೆಯಾಗಿ ರೂಪಾಂತರಗೊಳ್ಳುವಿಕೆಯನ್ನು ಹಾಗೂ ಬ್ರಾಹ್ಮಣೀಕರಣ-ಸಂಸ್ಕೃತೀಕರಣಗಳನ್ನು ರೂಢಿಸಿಕೊಂಡಿದೆ. ಇಂದು ನಾವು ಕಾಣುತ್ತಿರುವ ಜಾತಿ ರಾಜಕಾರಣವು ಈ ಬಗೆಯ ಪ್ರಕ್ರಿಯೆಯ ಫಲಿತಾಂಶ. ಬಂಡವಾಳ ಶಾಹಿಯು ಪಾಳೆಯಶಾಹಿಗೆ ಪೂರಕವಾಗಿ ನಿಂತ ನಿಚ್ಚಳ ಉದಾಹರಣೆ ಇದು. ಜಾತಿ ವ್ಯವಸ್ಥೆ ಇಲ್ಲಿ ಸ್ವಲಾಭದ ಪಕ್ಷವಹಿಸದೆ ವರಸೆಯನ್ನು ಮೆರೆದಿದೆ ಆದರೆ, ಭಾರತದಲ್ಲಿ ಜಾತಿ ವ್ಯವಸ್ಥೆ ಕ್ಷೀಣಿಸಬೇಕೆಂದಾದರೆ, ಪಾಳೆಯಶಾಹಿಯ ಪ್ರಭುತ್ವಕ್ಕೆ ಪೆಟ್ಟು ಬೀಳಬೇಕೆಂದಾದರೆ, ದಲಿತರೇ ಮೊದಲಾದ ದುರ್ಬಲ ವರ್ಗಗಳಿಗೆ ಆರ್ಥಿಕ ಸಶಕ್ತತೆ ಪಡೆಯುವ ಬಗ್ಗೆ, ದೌರ್ಜನ್ಯಗಳಿಗೆ ಕಾರಣವಾದ ಆರ್ಥಿಕೇತರ ಅಂಶಗಳ ಬಗ್ಗೆ ನಿರಂತರ, ವ್ಯವಸ್ಥಿತ ಹಾಗೂ ರಾಜಿರಹಿತ ಹೋರಾಟಗಳನ್ನು ರೂಪಿಸುವುದೊಂದೇ ಮಾರ್ಗ.

ಭಾರತದಲ್ಲಿ ಬೀಸುತ್ತಿರುವ ಆರ್ಥಿಕ ಸುಧಾರಣೆಗಳ ಗಾಳಿಯು ದಲಿತರಿಗೆ ಈ ಬಗೆಯ ಆರ್ಥಿಕ ಸಶಕ್ತತೆಯನ್ನು ಒದಗಿಸೀತೇ? ಭೂರಹಿತ ಕೃಷಿ

ಕೂಲಿಕಾರರಿಗೆ ಭೂಮಿ ದೊರಕೀತೇ? ಜಾತಿ ವ್ಯವಸ್ಥೆಯ ಶಕ್ತಿಯನ್ನು ಮುರಿಯುವ ಯಾವುದೇ ಸಾಧನವನ್ನು ಆರ್ಥಿಕ ಸುಧಾರಣೆಗಳು ದಲಿತರಿಗೆ ನೀಡಿಯಾವೇ? ಊಹೂಂ. ಖಂಡಿತ ಇಲ್ಲ.

ಭೂಹಂಚಿಕೆಯು ಮಾತಿರಲಿ; ಆರ್ಥಿಕ ಸುಧಾರಣೆಗಳು ಭೂ ಹಿಡುವಳಿಯನ್ನು ಮುಕ್ತಗೊಳಿಸುವ, ಕೃಷಿಯನ್ನು ಕಾರ್ಪೋರೇಟ್ ಗೊಳಿಸುವ ನೀತಿಯನ್ನು ಹೊಂದಿವೆ. ಬ್ರಿಟನ್‌ವುಡ್ ಸಂಸ್ಥೆಗಳಿಂದ ನಿರ್ದೇಶಿತವಾದ ಎಲ್ಲಾ ಆರ್ಥಿಕ ಸುಧಾರಣೆಗಳು ಆರ್ಥಿಕ ಅಸಮಾನತೆಯನ್ನು ತೀವ್ರಗೊಳಿಸಿವೆ. ಭಾರತದಲ್ಲಿ ಈಗ ಜಾರಿಯಾಗಲಾರಂಭಿಸಿರುವ ಆರ್ಥಿಕ ಸುಧಾರಣೆಗಳು, ಈ ಹಿಂದೆಯೇ ಇತರ ರಾಷ್ಟ್ರಗಳಲ್ಲಿ ಜಾರಿಯಾಗಿವೆ. ಅಲ್ಲೆಲ್ಲ ಆರ್ಥಿಕ ಅಸಮಾನತೆ ಇನ್ನೂ ಹೆಚ್ಚಾಗಿದೆ. ಅಲ್ಲೆಲ್ಲ ಸಾಮಾಜಿಕ/ಸಾರ್ವಜನಿಕ ಅಶಾಂತಿ ಹೆಚ್ಚಾಗಿದೆ. ಆರ್ಥಿಕ ಸುಧಾರಣೆಗಳ ಪ್ರಯೋಜನವು ನಗರಗಳ ಬಂಡವಾಳಿಗರಿಗೆ ಹಾಗೂ ಗ್ರಾಮೀಣ ಭೂಮಾಲಿಕರಿಗೆ ಮಾತ್ರ ಸಿಕ್ಕುತ್ತದೆ.

ಅಭಿವೃದ್ಧಿಯ ಮಾದರಿಯಲ್ಲೇ ಆಗಲಿರುವ ಬದಲಾವಣೆಯಿಂದಾಗಿ, ನಗರಗಳ ಹಾಗೂ ಗ್ರಾಮೀಣ ಪ್ರದೇಶದ ದಲಿತರು ಹಾಗೂ ಇತರ ದುರ್ಬಲ ವರ್ಗಗಳವರು ಪ್ರಧಾನ ಬಲಿಪಶುಗಳಾಗುತ್ತಾರೆ. ನಿರುದ್ಯೋಗ-ಅಸಂತೋಷವು ಅರಾಜಕತೆಯ ಸೃಷ್ಟಿಗೆ ಕಾರಣವಾಗುತ್ತದೆ. ದುರ್ಬಲ ವರ್ಗಗಳಲ್ಲಿ ಏಕತೆ ಮೂಡದಿರಲು, ಆಳುವ ವರ್ಗಗಳು ಜಾತಿ/ಧರ್ಮ/ಭಾಷೆ/ಪ್ರಾಂತಗಳ ಹೆಸರಲ್ಲಿ ಭಾವನೆಗಳನ್ನು ಕೆರಳಿಸಿ, ತಮ್ಮ ಸಾಮ್ರಾಜ್ಯ ಉಳಿಸಿಕೊಳ್ಳಲು ಹವಣಿಸುತ್ತವೆ.

ತೀರ್ಮಾನ

ಭಾರತದಲ್ಲಿ ಜಾರಿಗೊಂಡಿರುವ ಸುಧಾರಣೆಗಳ ಪ್ರಯೋಜನ ದಕ್ಕುವುದು, ಇಲ್ಲಿನ ಉಳ್ಳವರಿಗೇ. ಈ ಸುಧಾರಣೆಗಳು ದುರ್ಬಲರನ್ನು ಇನ್ನೂ ದುರ್ಬಲಗೊಳಿಸುತ್ತವೆ. ಇದು ಹಲವಾರು ರಾಷ್ಟ್ರಗಳಲ್ಲಿ ಸಾಬೀತಾಗಿದೆ. ಬಡವರಲ್ಲೇ ಕಡು ಬಡವರಾಗಿರುವ ಭಾರತದ ದಲಿತರ ಭವಿಷ್ಯದ ಮೇಲೆ, ಈ ಸುಧಾರಣೆಗಳು ದುಷ್ಪರಿಣಾಮ ಬೀರಲಿವೆ. ಅವರ ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿ ಇನ್ನೂ ದುರ್ಭರವಾಗಲಿದೆ. ಸರ್ಕಾರಗಳು ಆರ್ಥಿಕ ಸುಧಾರಣೆಗೆ ಮಾನವೀಯ ಮುಖವನ್ನು ಒದಗಿಸಿ ಜಾರಿಗೊಳಿಸಲು ಹೊರಟರೂ, ಪರಿಣಾಮದಲ್ಲಿ ಮಾತ್ರ ಗಮನಾರ್ಹ ಬದಲಾವಣೆಯಾಗುವ ಯಾವ ಭರವಸೆಯೂ ಇಲ್ಲ. ಭಾರತದ ಬಹುಸಂಖ್ಯಾತ ದುರ್ಬಲ ವರ್ಗಗಳ ಪಾಲಿಗೆ, ಆರ್ಥಿಕ ಸುಧಾರಣೆಗಳೆಂಬ ವಿಷಯವೇ ಭಾರಿ ದುಃಸ್ವಪ್ನವಾಗಿದೆ.

ಭಾರತದ ವಾಸ್ತವವೇ ಭಯಾನಕವಾಗಿದೆ. 1996ರ ಮಾನವ ಅಭಿವೃದ್ಧಿ ವರದಿ ಹೇಳುವಂತೆ 229 ದಶಲಕ್ಷ ಜನ ಆದಾಯದಿಂದ ಬಡವರಾಗಿದ್ದರೆ, 554 ದಶಲಕ್ಷ ಜನರು ಸಾಮರ್ಥ್ಯದಿಂದಲೇ ಬಡವರಾಗಿದ್ದಾರೆ. ಅಂದರೆ, ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಶೇ. 86.7ರಷ್ಟು ಜನರು ಒಟ್ಟಾರೆ ಬಡವರಾಗಿದ್ದಾರೆ. ಪ್ರಪಂಚದ ಒಟ್ಟು 174 ರಾಷ್ಟ್ರಗಳಲ್ಲಿ ಭಾರತವು 135ನೇ ಸ್ಥಾನದಲ್ಲಿದೆ. ಇದೆಲ್ಲಾ ಕೇವಲ ಆರ್ಥಿಕ ಮಾನದಂಡದಿಂದ ತೀರ್ಮಾನವಾದ ದುಃಸ್ಥಿತಿಯ ಚಿತ್ರಣವಾಯಿತು. ಇನ್ನು, ಸಾಮಾಜಿಕ-ಸಾಂಸ್ಕೃತಿಕ ಮಾನದಂಡದಿಂದ ತೀರ್ಮಾನವಾಗುವ ದುಃಸ್ಥಿತಿಯ ಚಿತ್ರಣ ಇನ್ನೂ ಘನಘೋರ. ಈಗ ಜಾರಿಗೊಳಿಸಲಾಗುತ್ತಿರುವ ಸುಧಾರಣೆಗಳ ಮೂಲಾಧಾರ ಮುಕ್ತ ಮಾರುಕಟ್ಟೆಯ ನಿರ್ಮಾಣ ಎಂದು ಹೇಳಲಾಗುತ್ತದೆ. ಆದರೆ, ರಾಷ್ಟ್ರದ ಜನತೆಯ ಕೊಳ್ಳುವ ಶಕ್ತಿಯು ಅಭಿವೃದ್ಧಿಯಾಗದೇ ಹೋದರೆ ಮುಕ್ತ ಮಾರುಕಟ್ಟೆಯು ಮುಕ್ತವಾಗಿ ಉಳಿಯುವುದಿರಲಿ, ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದಲಾದರೂ ಭಾರತದ ಜನತೆಯ ಕೊಳ್ಳುವ ಶಕ್ತಿಯು ವೃದ್ಧಿಯಾಗಬೇಕು; ಬಹುಸಂಖ್ಯಾತ ಜನರು ಆರ್ಥಿಕ ಸಶಕ್ತತೆ ಪಡೆಯುವಂತಾಗಬೇಕು; ಈ ಕಾರಣದಿಂದಲಾದರೂ, ದಲಿತರೇ ಮೊದಲಾದ ಸಮಸ್ತ ದುರ್ಬಲ ವರ್ಗಗಳವರಿಗೆ ಕೊಳ್ಳುವ ಶಕ್ತಿ ಪ್ರಾಪ್ತವಾಗಬೇಕು.

ಭಾರತದ ವಾಸ್ತವವೇ ಭಯಾನಕವಾಗಿದೆ. 1996ರ ಮಾನವ ಅಭಿವೃದ್ಧಿ ವರದಿ ಹೇಳುವಂತೆ 229 ದಶಲಕ್ಷ ಜನ ಆದಾಯದಿಂದ ಬಡವರಾಗಿದ್ದರೆ, 554 ದಶಲಕ್ಷ ಜನರು ಸಾಮರ್ಥ್ಯದಿಂದಲೇ ಬಡವರಾಗಿದ್ದಾರೆ. ಅಂದರೆ, ರಾಷ್ಟ್ರದ ಒಟ್ಟು ಜನಸಂಖ್ಯೆಯಲ್ಲಿ ಶೇ. 86.7ರಷ್ಟು ಜನರು ಒಟ್ಟಾರೆ ಬಡವರಾಗಿದ್ದಾರೆ. ಪ್ರಪಂಚದ ಒಟ್ಟು 174 ರಾಷ್ಟ್ರಗಳಲ್ಲಿ ಭಾರತವು 135ನೇ ಸ್ಥಾನದಲ್ಲಿದೆ. ಇದೆಲ್ಲಾ ಕೇವಲ ಆರ್ಥಿಕ ಮಾನದಂಡದಿಂದ ತೀರ್ಮಾನವಾದ ದುಃಸ್ಥಿತಿಯ ಚಿತ್ರಣವಾಯಿತು. ಇನ್ನು, ಸಾಮಾಜಿಕ-ಸಾಂಸ್ಕೃತಿಕ ಮಾನದಂಡದಿಂದ ತೀರ್ಮಾನವಾಗುವ ದುಃಸ್ಥಿತಿಯ ಚಿತ್ರಣ ಇನ್ನೂ ಘನಘೋರ. ಈಗ ಜಾರಿಗೊಳಿಸಲಾಗುತ್ತಿರುವ ಸುಧಾರಣೆಗಳ ಮೂಲಾಧಾರ ಮುಕ್ತ ಮಾರುಕಟ್ಟೆಯ ನಿರ್ಮಾಣ ಎಂದು ಹೇಳಲಾಗುತ್ತದೆ. ಆದರೆ, ರಾಷ್ಟ್ರದ ಜನತೆಯ ಕೊಳ್ಳುವ ಶಕ್ತಿಯು ಅಭಿವೃದ್ಧಿಯಾಗದೇ ಹೋದರೆ ಮುಕ್ಕ ಮಾರುಕಟ್ಟೆಯು ಮುಕ್ಕವಾಗಿ ಉಳಿಯುವುದಿರಲಿ, ಅಸ್ತಿತ್ವವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದಲಾದರೂ ಭಾರತದ ಜನತೆಯ ಕೊಳ್ಳುವ ಶಕ್ತಿಯು ವೃದ್ಧಿಯಾಗಬೇಕು; ಬಹು ಸಂಖ್ಯಾತ ಜನರು ಆರ್ಥಿಕ ಸಶಕ್ತತೆ ಪಡೆಯುವಂತಾಗಬೇಕು; ಈ ಕಾರಣದಿಂದಲಾದರೂ, ದಲಿತರೇ ಮೊದಲಾದ ಸಮಸ್ತ ದುರ್ಬಲ ವರ್ಗಗಳವರಿಗೆ ಕೊಳ್ಳುವ ಶಕ್ತಿ ಪ್ರಾಪ್ತವಾಗಬೇಕು.

ಈ ದಿಕ್ಕಿನಲ್ಲಿ, ಆರಂಭದ ಕ್ರಮವಾಗಿ ಭೂ ಸುಧಾರಣೆಯನ್ನು ಸಮರ್ಪಕವಾಗಿ ಜಾರಿಗೊಳಿಸುವುದು ಅತ್ಯಗತ್ಯ. ಕೃಷಿಗೆ ಪೂರಕವಾಗುವ ಯೋಜನೆಗಳಲ್ಲಿ ಭಾರಿ ಬಂಡವಾಳ ಹೂಡಿಕೆಯೂ ತುರ್ತಾಗಿ ಆಗಬೇಕು. ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ ಕಾರ್ಯಕ್ರಮಗಳು ಆದ್ಯತೆಯ ಮೇಲೆ ಅನುಷ್ಠಾನಗೊಳ್ಳಬೇಕು. ಬದುಕುವ ಹಕ್ಕು ಸಮಸ್ತರಿಗೆ ಲಭ್ಯವಾದಾಗಲೇ ಜಾತೀಯತೆ ಎಂಬ ಮಹಾಮಾರಿಯನ್ನು ಮಟ್ಟ ಹಾಕಲು ಸಾಧ್ಯ. ತುಲನಾತ್ಮಕ ಸಮಾನತೆಯನ್ನು ಸಾಧಿಸುವುದು ಸದ್ಯದ ತುರ್ತು. ಇದನ್ನು ಸಾಧಿಸಲು ಕಾಲಬದ್ಧ ಹಾಗೂ ಪರಿಣಾಮಕಾರಿ ಯೋಜನೆ/ಕಾರ್ಯಕ್ರಮಗಳನ್ನು ರೂಪಿಸಿ, ಜಾರಿಗೊಳಿಸುವುದನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕು. ಭೂ ಹಿಡುವಳಿ, ಶಿಕ್ಷಣ, ಆರೋಗ್ಯ, ಉದ್ಯೋಗ, ಸಾಮಾಜಿಕ ಶ್ರೇಣಿ...ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ವಂಚಿತರಾಗಿರುವ ದಲಿತರ ಪರವಾಗಿ ಪ್ರತ್ಯೇಕ ಯೋಜನೆಗಳು ಸಿದ್ಧವಾಗಬೇಕಾಗಿರುವುದು ಅನಿವಾರ್ಯವಾಗಿದೆ. ಇವರಿಗಾಗಿ ಸಮಗ್ರ ಯೋಜನೆ ರೂಪುಗೊಳ್ಳಬೇಕು; ಈ ಪ್ರಕ್ರಿಯೆಯಲ್ಲಿ ದಲಿತರ ಹಾಗೂ ಪರಿಣತರ ಪಾಲ್ಗೊಳ್ಳುವಿಕೆಯನ್ನು ಖಾತ್ರಿಪಡಿಸುವುದು ಅತ್ಯಗತ್ಯ.

ಇವು ಮೂಲಭೂತ ಸುಧಾರಣೆಗಳು. ಇವನ್ನು ರೂಪಿಸಲು ಹಾಗೂ ಜಾರಿಗೊಳಿಸಲು ಹಣ ಎಲ್ಲಿದೆ ಎಂಬ ಪ್ರಶ್ನೆ ಏಳುತ್ತದೆ. ಬಹು ಕಠಿಣವಾದ ಪ್ರಶ್ನೆ ಇದು. ಆದರೆ ಉತ್ತರವಿಲ್ಲದ ಪ್ರಶ್ನೆ ಖಂಡಿತ ಅಲ್ಲ. ಭಾರತದ ಬಹುಸಂಖ್ಯಾತ ಜನತೆಯ ಸರ್ವನಾಶ ಮಾಡುವ ಆರ್ಥಿಕ ಸುಧಾರಣೆಗಳನ್ನು ಜಾರಿಗೊಳಿಸುವ ಮೂಲಕ, ಭಾರತ ಸರ್ಕಾರ ನಿರೀಕ್ಷಿಸುತ್ತಿರುವ ವಿದೇಶಿ ನೇರ ಬಂಡವಾಳ ಹೂಡಿಕೆಯ ಪ್ರಮಾಣ ವರ್ಷಕ್ಕೆ ನಾಲ್ಕು ಬಿಲಿಯನ್ ಡಾಲರ್ಸ್! ಆದರೆ, ಎಷ್ಟು ಬಿಲಿಯನ್ ಡಾಲರ್ಸ್ ಕಪ್ಪು ಹಣ ಭಾರತದೊಳಗೇ ಇದೆ? ಭಾರತೀಯರು ವಿದೇಶಿ ಬ್ಯಾಂಕ್‌ಗಳಲ್ಲಿ ಠೇವಣಿಯಾಗಿ ಎಷ್ಟು ಬಿಲಿಯನ್ಸ್ ಡಾಲರ್ಸ್ ಕಪ್ಪು ಹಣ ಇಟ್ಟಿದ್ದಾರೆ? ಇವೆರಡನ್ನು ಸೇರಿಸಿದರೆ 400 ರಿಂದ 170 ಬಿಲಿಯನ್ ಡಾಲರ್ಸ್ ಆಗುತ್ತದೆ.

ಭಾರತಕ್ಕೆ ಹಣದ ಕೊರತೆಯಿಲ್ಲ; ಹಣವನ್ನು ಹೊಂದಿಸಿ, ಸಾಮಾನ್ಯ ಜನತೆಯ ಸಮಸ್ಯೆಗಳನ್ನು ಬಗೆಹರಿಸಬಲ್ಲ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿದೆ, ಭಾರತ ಸರ್ಕಾರ ರಾಜಕೀಯ ಇಚ್ಛಾಶಕ್ತಿಯನ್ನು ತೋರಿದರೆ, ಹಣ ದೊರಕುವಲ್ಲಿ ಸಂದೇಹವಿಲ್ಲ; ಭಾರತದಲ್ಲಿ ಸಮಸ್ತ ಜನತೆಯ ಬದುಕು ಹಸನಾಗುವಲ್ಲಿ ಸಂದೇಹವಿಲ್ಲ. ಆದರೆ, ಭಾರತ ಸರ್ಕಾರಕ್ಕೆ ರಾಜಕೀಯ ಇಚ್ಛಾಶಕ್ತಿ ಎಂಬುದೇನಾದರೂ ಇದೆಯೇ? ●

ಸ್ಫೂರ್ತಿಧಾಮ : ಪರ್ಯಾಯಗಳ ಹುಡುಕಾಟದಲ್ಲಿ.....

ಸ್ಫೂರ್ತಿಧಾಮದ ಸಂವಾದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಪ್ರಮುಖರು

ಬೆಂಗಳೂರು-ಮಾಗಡಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಬಾಬಾ ಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಸಮಿತಿ ಟ್ರಸ್ಟ್‌ನ ಆಶ್ರಯದಲ್ಲಿ ಸ್ಥಾಪನೆಗೊಂಡಿರುವ "ಸ್ಫೂರ್ತಿಧಾಮ" ಸಂಸ್ಥೆಯು, ಸಮಾಜದ ಸಮಸ್ತ ಶೋಷಿತರ-ದುರ್ಬಲರ ಸರ್ವಾಂಗೀಣ ಪ್ರಗತಿಯ ಸಂಕಲ್ಪಹೊತ್ತು, ಕಳೆದ ಹಲವು ವರ್ಷಗಳಿಂದಲೂ ತನ್ನ ಹತ್ತಾರು ವಿಶಿಷ್ಟ ಕಾರ್ಯಗಳಿಂದ ನಾಡಿನ ಎಲ್ಲ ಪ್ರಗತಿಪರರ ಗಮನಸೆಳೆಯುತ್ತಿದೆ.

ಸಮಾಜದ ಎಲ್ಲ ಜನವರ್ಗದ, ಮುಖ್ಯವಾಗಿ ದೀನ ದಲಿತರ ಸಮಾಜಿಕ-ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಅಭ್ಯುದಯದಂತಹ ಅಮೂಲ್ಯ ಸಂಗತಿಗಳಿಗೆ ಆದ್ಯತೆ ನೀಡಿ, ಈ ವರ್ಗದ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಪರಿಹಾರ ಹುಡುಕುವ ಹಾಗೂ ಇವರಲ್ಲಿ ಸ್ವಾತಂತ್ರ್ಯ-ಸಮಾನತೆ, ಸ್ವಾಭಿಮಾನದ ಜತೆಗೆ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಅರಿವು ಮೂಡಿಸಿ, ಸಂಘಟನಾ ಶಕ್ತಿಯನ್ನು ವೃದ್ಧಿಗೊಳಿಸುವ ಮೂಲಕ ರಾಷ್ಟ್ರದ ಮುಖ್ಯವಾಹಿನಿಯತ್ತ ಕೊಂಡೊಯ್ಯುವ ಕಲ್ಪನೆಯನ್ನು "ಸಂಸ್ಥೆ" ಹೊತ್ತಿದೆ.

ಒಟ್ಟಾರೆ ಬಹುಸಂಖ್ಯಾತ ದಲಿತರ ಬದುಕಿನಲ್ಲಿ ಹೊಸ ಚೈತನ್ಯ ಮೂಡಿಸಲು ಹೊರಟಿರುವ ಸ್ಫೂರ್ತಿಧಾಮವು ಆ ನಿಟ್ಟಿನಲ್ಲಿ "ದಲಿತರು ತಾವೇ ಎದುರಿಸುತ್ತಿರುವ ಬಿಕ್ಕಟ್ಟುಗಳು", "ತೀವ್ರ ಬದಲಾವಣೆಯ ಕಾಲಘಟ್ಟದಲ್ಲಿ ಎದುರಿಸುತ್ತಿರುವ ಸವಾಲುಗಳು" "ಜಾಗತೀಕರಣ-ಖಾಸಗೀಕರಣದ ಸಂದರ್ಭದಲ್ಲಿ ಇವರ ಶೈಕ್ಷಣಿಕ-ಸಾಂಸ್ಕೃತಿಕ ಬದುಕು" "ಈ ವರ್ಗದ ಯುವ ಜನಾಂಗ ಮತ್ತು ಮಹಿಳೆಯರ ಮುಂದಿರುವ ಬಿಕ್ಕಟ್ಟುಗಳು" ಸಮಾಜ ಮತ್ತು ಸರ್ಕಾರಗಳ ನೀತಿ-ನಿರ್ಧಾರಗಳ ಪರಿಣಾಮ ಹಾಗೂ ಬುದ್ಧ-ಅಂಬೇಡ್ಕರ್‌ರ ಚಿಂತನೆಗಳನ್ನು ಕುರಿತ ಚರ್ಚೆ/ವಿಚಾರ ಸಂಕಿರಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ದಲಿತರ ಬದುಕಿನಲ್ಲಿ ಹೊಸದೊಂದು ಆಶಾಕಿರಣ ಮೂಡಿಸಲು ಪ್ರಯತ್ನಿಸುತ್ತಿದೆ. ಇದಕ್ಕಾಗಿ ನಾಡಿನ ಚಿಂತಕರು-ಬುದ್ಧಿ ಜೀವಿಗಳು, ಸಾಹಿತಿ-ಕಲಾವಿದರು, ಸಮಾಜ ಸೇವಕರು ಮತ್ತಿತರ ವಿವಿಧ ವರ್ಗದ ಜನಪ್ರತಿನಿಧಿಗಳನ್ನು ಆಹ್ವಾನಿಸಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿದೆ.

ಇಂದಿನ ಎಲ್ಲ ಸಂಕಷ್ಟಗಳ ನಡುವೆಯೂ ದಲಿತರ ಬದುಕಿಗೆ ಪರ್ಯಾಯಗಳನ್ನು ಹುಡುಕುವ ಮೂಲಕ ನಾಡಿನ ಎಲ್ಲ ದಲಿತರ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿ ರೂಪುಗೊಳ್ಳಬೇಕೆಂಬ ಮಹದಾಸೆಯನ್ನು ಸ್ಫೂರ್ತಿಧಾಮ ಹೊತ್ತಿದ್ದು, ಅದಕ್ಕಾಗಿ ಸಮಾಜದ ಎಲ್ಲ ಪ್ರಗತಿಪರರ, ಹಿತೈಷಿಗಳ ಬೆಂಬಲ ಮತ್ತು ಸಲಹೆಗಳನ್ನು ಸದಾ ಆಶಿಸುತ್ತದೆ.

ಅಂದರೆ ಹೆಚ್ಚುತ್ತಿರುವ ಜಾಗತೀಕರಣ ಹಾಗೂ ಉದಾರೀಕರಣ/ಖಾಸಗೀಕರಣಗಳಿಂದಾಗಿ ಉದ್ಯೋಗ, ಶಿಕ್ಷಣ, ನೌಕರಿ ಅಭಿವೃದ್ಧಿ ಮುಂತಾದವುಗಳನ್ನು ಒದಗಿಸುವಲ್ಲಿ ಸರ್ಕಾರ ತನ್ನ ಜವಾಬ್ದಾರಿಯಿಂದ ಜಾರಿಕೊಳ್ಳುತ್ತಿದ್ದು, ಸರ್ಕಾರಿ ನೌಕರಿ ಎಂಬ ಮಾಯಾ ಜಿಂಕೆಯ ಬೆನ್ನತ್ತಿ ಹೊರಟು ಅದು ದಕ್ಕದಿದ್ದಾಗ, ನಿರಾಶರಾಗಿ ಜೀವನ ನಿರ್ವಹಣೆಗಾಗಿ ವಾಮಮಾರ್ಗಗಳನ್ನು ಹಿಡಿದು ಸಮಾಜ ಕಂಟಕರಾಗಿ ಮುಂದೊಂದು ದಿನ ಬದುಕನ್ನು ಬರ್ಬಾದು ಮಾಡಿಕೊಳ್ಳುವ ಅಸಂಖ್ಯ ಯುವಜನರನ್ನು ಪ್ರತಿನಿತ್ಯ ನೋಡುತ್ತಲೇ ಇದ್ದೇವೆ.

ಈ ದುರಂತದಿಂದ ದೂರಮಾಡುವ ಇಚ್ಛಾಶಕ್ತಿಯನ್ನು ಹೊಂದಿರುವ ಸ್ಫೂರ್ತಿಧಾಮವು ನಿರುದ್ಯೋಗಿ ಯುವಜನರನ್ನು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲು ಹಲವಾರು ತರಬೇತಿ ಮತ್ತು ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

1997ರಿಂದ ನಿರಂತರವಾಗಿ ನಡೆಯುತ್ತಿರುವ ಈ ತರಬೇತಿಗಳ ಜತೆಗೆ ಅವರನ್ನು ಮಾನಸಿಕ ಮತ್ತು ಬೌದ್ಧಿಕವಾಗಿ ವಿಕಸನಗೊಳಿಸಿ ಜವಾಬ್ದಾರಿಯುತ ನಾಯಕತ್ವದಿಂದ ಕೂಡಿದ ಪರಿಪೂರ್ಣ ಮನುಷ್ಯರನ್ನಾಗಿ ರೂಪಿಸುವ ಉದ್ದೇಶದಿಂದ, ಅನೇಕ ಸಾಮಾಜಿಕ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳು, ಚರ್ಚೆ, ಸಂವಾದ, ಉಪನ್ಯಾಸ, ನಾಟಕ, ಸಂಗೀತ, ಕ್ರೀಡೆ ಮುಂತಾದ ಶೈಕ್ಷಣಿಕ-ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಪ್ರತಿ ವಾರಕ್ಕೊಮ್ಮೆ ನಡೆಸಿಕೊಂಡು ಬರಲಾಗುತ್ತಿದೆ.

ಇದಲ್ಲದೆ ತಮ್ಮ ಕಾಲ ಮೇಲೆ ತಾವೇ ನಿಂತು ಸ್ವಯಂ ಶ್ರಮದೊಂದಿಗೆ ಭವಿಷ್ಯದ ಬದುಕನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಪ್ರಸ್ತುತ ಸಂದರ್ಭದ ಬೇಡಿಕೆಯನ್ನು ಅರಿತು ಸಂಸ್ಥೆಯೇ ಹೊಲಿಗೆ, ಬೆರಳಚ್ಚು, ಕಂಪ್ಯೂಟರ್, ಲೆದರ್ ಬ್ಯಾಗ್ಸ್ ಮೇಕಿಂಗ್, ಎಲೆಕ್ಟ್ರಿಷೀಯನ್, ಮೋಟಾರ್ ರಿವೈಂಡಿಂಗ್ ಮುಂತಾದ ತರಬೇತಿಗಳನ್ನು ಆರಂಭಿಸಿದ್ದು ಮುಂದೆ ಸ್ಥಳೀಕರಲ್ಲದೆ ಇದರ ಪ್ರಯೋಜನವನ್ನು ತಾಲ್ಲೂಕು-ಜಿಲ್ಲೆಯ ಎಲ್ಲಾ ನಿರುದ್ಯೋಗಿಗಳಿಗೂ ಪಡೆದುಕೊಳ್ಳಲು ಅನುಕೂಲ ವಾಗುವಂತೆ ಹಾಸ್ಟೆಲ್ ಸೌಲಭ್ಯವನ್ನು ಸಹ ನೀಡಲು ಮುಂದಾಗಿದೆಯಲ್ಲದೆ ಹೆಚ್ಚು ಜನರನ್ನು ತಲುಪುವ ಗುಣಮಟ್ಟವನ್ನು ಕಾಯ್ದುಕೊಳ್ಳುವ ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳ ಸಾಮರ್ಥ್ಯವನ್ನು ಗಮನಿಸಿ ಉದ್ಯೋಗಕ್ಕೂ ಕೂಡ ನೆರವಾಗಿ ನಿಲ್ಲುವ ಮಹದಾಸೆಯನ್ನು ಹೊಂದಿದೆ.

○ ದೊಡ್ಡಿ ಶಿವರಾಮು

ಚಂದಾ ವಿವರ :

ಬಿಡಿ ಪ್ರತಿ : ಹತ್ತು ರೂಪಾಯಿಗಳು (ರೂ. 10/-)
ವಾರ್ಷಿಕ : ಒಂದು ನೂರು ರೂಪಾಯಿಗಳು (ರೂ. 100/-)
ಆಜೀವ : ಐದು ಸಾವಿರ ರೂಪಾಯಿಗಳು (ರೂ. 5,000/-)

ಚಂದಾ ಹಣವನ್ನು ಚೆಕ್, ಡಿಡಿ, ಎಂ.ಓ, ಮೂಲಕ ಮಾತ್ರ ಸ್ವೀಕರಿಸಲಾಗುವುದು

ಚಂದಾ ಕಳಿಸಬೇಕಾದ ವಿಳಾಸ : 'ಸಂವಾದ' ಮಾಸ ಪತ್ರಿಕೆ

ಬಾಬಾಸಾಹೇಬ್ ಅಂಬೇಡ್ಕರ್ ಸ್ಮಾರಕ ಕೇಂದ್ರ
ಅಂಚೆ ಪೆಟ್ಟಿಗೆ ಸಂಖ್ಯೆ : 9143, ಹೇರೋಹಳ್ಳಿ
ಮಾಗಡಿರಸ್ತೆ, ವಿಶ್ವನೀಡಂ ಅಂಚೆ
ಬೆಂಗಳೂರು - 560 091

ಅನಾಗರಿಕ-ಲಂಪಟ ಆರ್ಯರೂ ನಾಗರಿಕ ಮೂಲ ನಿವಾಸಿಗಳೂ...

ಭಾರತದ ಪುರಾತನ ಇತಿಹಾಸವನ್ನು ಬಾಬಾ ಸಾಹೇಬರ ಹೇಳಿಕೆಯ ಹಿನ್ನಲೆಯಲ್ಲಿ ಪರಿಶೀಲಿಸೋಣ. ಕ್ರಿ.ಪೂ. 2500 ವರ್ಷಗಳ ಹಿಂದೆ ಭಾರತದ ಮೂಲನಿವಾಸಿಗಳು ಜಗತ್ತಿನ ಅತ್ಯಂತ ಪ್ರಾಚೀನ ಹಾಗೂ ಶ್ರೀಮಂತ ನಾಗರೀಕತೆಯೊಂದನ್ನು ಸ್ಥಾಪಿಸಿದ್ದರು. ಅದುವೇ ಸಿಂಧೂನದಿ ನಾಗರೀಕತೆ. ಹರಪ್ಪ ಮತ್ತು ಮೊಹೆಂಜೋದಾರೋ ಎಂಬ ಅತ್ಯಂತ ಅಭಿವೃದ್ಧಿ ಹೊಂದಿದ ನಗರಗಳನ್ನು ಸ್ಥಾಪಿಸಿ, ಜಗತ್ತಿನ ನಾಗರೀಕತೆಯ ಬೆಳವಣಿಗೆಗೆ ನಾಂದಿ ಹಾಡಿದ್ದರು. ಸಿಂಧೂ ನಾಗರೀಕತೆಯ ಸಂಸ್ಥಾಪಕರಾದ ಮೂಲನಿವಾಸಿ ಜನಾಂಗಗಳನ್ನು ನಾಗ, ರಾಕ್ಷಸ, ಅಸುರ, ದ್ರಾವಿಡ, ದಾನವ, ಕಿನ್ನರ, ನಿಶಾದ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಈ ಮೂಲನಿವಾಸಿ ಜನಾಂಗಕ್ಕೆ ಸೇರಿದ ರಾಜರುಗಳು ಜಗತ್ತಿಗೆ ಮಾದರಿಯಾದ ಪ್ರಜಾಸತ್ತಾತ್ಮಕ ಸಮಾಜವನ್ನು ನಿರ್ಮಾಣ ಮಾಡಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಯ ತತ್ತ್ವಗಳಿಗೆ ಸಿಂಧೂ ನಾಗರೀಕತೆಯು ಹೆಸರು ವಾಸಿಯಾಗಿತ್ತು.

ಅನಿಷ್ಟ ಆರ್ಯರ ಆಗಮನ :

ಕ್ರಿ.ಪೂ. 1800ರಲ್ಲಿ ಮಧ್ಯ ಏಷಿಯಾದಿಂದ ಖೈಬರ್ ಕಣಿವೆಗಳ ಮೂಲಕ ದನ ಮೇಯಿಸಿಕೊಂಡು ಅಲೆಮಾರಿಯಾಗಿ ಬಿಳಿ ಬಣ್ಣದ ಆರ್ಯರು ಬಂದರು. ಸಂಪದ್ಭರಿತ ಸಿಂಧೂ ಪ್ರದೇಶವನ್ನು ನೋಡಿ ಇಲ್ಲೇ ನೆಲೆ ನಿಲ್ಲಬೇಕೆಂದು ತೀರ್ಮಾನಿಸಿ ವ್ಯವಸ್ಥಿತವಾಗಿ ಸಿಂಧೂ ನಾಗರೀಕತೆಯೊಳಗೆ ನುಸುಳಿಕೊಂಡರು. ಸಮಾನತೆಯಿಂದ ಬದುಕುತ್ತಿದ್ದ ಮೂಲನಿವಾಸಿಗಳ ಗುಂಪುಗಳ ನಡುವೆ ಇದ್ದ ಸಣ್ಣ ಪುಟ್ಟಭಿನ್ನಾಭಿಪ್ರಾಯಗಳನ್ನು ದೊಡ್ಡ ವೈರುಧ್ಯಗಳನ್ನಾಗಿ ಪರಿವರ್ತಿಸಿ, ಒಂದು ಗಣರಾಜ್ಯದ ಮೇಲೆ ಮತ್ತೊಂದು ಗಣರಾಜ್ಯವನ್ನು ಎತ್ತಿಕಟ್ಟಿ, ಅವರು ವೈರಿಗಳಾಗಿ ಕಾದಾಡುವಂತೆ ಮಾಡಿದರು. ಇದೇ ಸಂದರ್ಭವನ್ನು ಉಪಯೋಗಿಸಿಕೊಂಡು ಮೂಲ ನಿವಾಸಿ ಗುಂಪುಗಳ ಮೇಲೆ ವ್ಯವಸ್ಥಿತವಾದ ಆಕ್ರಮಣವನ್ನು ನಡೆಸಿ ಸಿಂಧೂ ನಾಗರೀಕತೆಯನ್ನು ನಾಶಮಾಡಿ ಅಲ್ಲಿನ ಮೂಲನಿವಾಸಿಗಳನ್ನು ತಮ್ಮ ಅಡಿಯಾಳುಗಳಾಗಿ ಮಾಡಿಕೊಂಡರು. ಮೂಲ ನಿವಾಸಿಗಳ ಮೇಲೆ ಅಧಿಕಾರ ಚಲಾಯಿಸಲು ಮತ್ತು ಅವರನ್ನು ಶತಮಾನಗಳ ಕಾಲ ಗುಲಾಮಗಿರಿಗೆ ತಳ್ಳಲು ಅನೇಕ ಕಪಟ ಧಾರ್ಮಿಕ ಕಥೆಗಳನ್ನು ಹೆಣೆದು, ಅದು ದೈವವಾಣಿ ಎಂದು ನಂಬಿಸಿದರು. ಮೂಲನಿವಾಸಿ ರಾಜರುಗಳನ್ನು ಮೋಸದಿಂದ ಕೊಂದು ಅದನ್ನು ದುಷ್ಟ ಶಿಕ್ಷಣೆ ಶಿಷ್ಟ ರಕ್ಷಣೆ ಎಂದು ಪ್ರಚಾರ ಮಾಡಿದರು. ರಾಮಾಯಣ, ಮಹಾಭಾರತ ಮತ್ತು ಪುರಾಣಗಳಲ್ಲಿ ಬರುವ ದಶಾವತಾರಗಳಲ್ಲಿ ರಾಕ್ಷಸರು ಮತ್ತು ದೇವತೆಗಳ ಯುದ್ಧವು ಆರ್ಯರು ಮೂಲನಿವಾಸಿಗಳನ್ನು ಮೋಸ, ಕಪಟ, ವಂಚನೆಗಳಿಂದ ಸಂಹಾರ ಮಾಡಿದ ಎಂಬ ಸತ್ಯವನ್ನು ಬಾಬಾ ಸಾಹೇಬರ ಬರಹಗಳಲ್ಲಿ ಕಾಣಬಹುದಾಗಿದೆ.

> **ಆರ್ಯರ ಆಡಳಿತದಿಂದಾಗಿ ನೀತಿಗೆಟ್ಟು, ಮತಿಗೆಟ್ಟಿದ್ದ ಸಮಾಜದ ಒಳಗಿನಿಂದ ಗೌತಮ ಬುದ್ಧ ಹುಟ್ಟಿ ಬಂದರು. ಮನುಷ್ಯ ಮನುಷ್ಯರ ನಡುವೆ ಬೇಧವನ್ನು ಸೃಷ್ಟಿ ಮಾಡಿ, ಅನೀತಿ, ಅಧರ್ಮ, ಮೂಢನಂಬಿಕೆ, ಯಜ್ಞ-ಯಾಗಾದಿಗಳನ್ನೊಳಗೊಂಡ ಆರ್ಯರ ವೈದಿಕ ವ್ಯವಸ್ಥೆಯ ವಿರುದ್ಧ ಪ್ರಥಮ ಬಾರಿಗೆ ಕ್ರಿ.ಪೂ. 500ರಲ್ಲಿ ಗೌತಮ ಬುದ್ಧ ಬಂಡಾಯ ಹೂಡಿದರು. ತಮ್ಮ ನಿರ್ಮಲ ಪ್ರಜ್ಞೆ, ಕರುಣೆ, ಶೀಲದಿಂದ ಇಡೀ ಸಮಾಜದ ಆಲೋಚನೆಯ ದಿಕ್ಕನ್ನೇ ಬದಲಾಯಿಸಿದ ಗೌತಮ ಬುದ್ಧರು, ಕಾರಣ ಮತ್ತು ಪರಿಣಾಮ ಎಂಬ ಸಹಜ ಸಿದ್ಧಾಂತದ ಮೇಲೆ ಧರ್ಮ ಸ್ಥಾಪನೆ ಮಾಡಿದರು. ನ್ಯಾಯಾ, ಸ್ವಾತಂತ್ರ್ಯ, ಸಮಾನತೆ, ಸೋದರತೆಯ ತತ್ತ್ವಗಳನ್ನು ಪ್ರಚಾರ ಮಾಡಿ ಜಾರಿಗೆ ತಂದ ಗೌತಮ ಬುದ್ಧ ನೈಜ ಪ್ರಜಾಪ್ರಭುತ್ವದ ಸಂಸ್ಥಾಪಕರಾದರು. ಬ್ರಾಹ್ಮಣ ಶಾಹಿ ಸಾಮಾಜಿಕ ವ್ಯವಸ್ಥೆಗೆ ಸಿಲುಕಿ ಜರ್ಝರಿತರಾಗಿದ್ದ ಜನತೆ, ಆರ್ಯರ ಅನೀತಿಯುತ ವ್ಯವಸ್ಥೆಯನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಈ ಬೌದ್ಧಕ್ರಾಂತಿಯ ಪರಿಣಾಮವಾಗಿ ಬ್ರಾಹ್ಮಣಶಾಹಿ, ವ್ಯವಸ್ಥೆಯ ಬುಡಮೇಲಾಯಿತು.**

ವರ್ಣ ವ್ಯವಸ್ಥೆಯ ಉಗಮ :

ಮೂಲನಿವಾಸಿ ನಾಗ ಜನಾಂಗದ ರಾಜ್ಯಭಾರವನ್ನು ನಾಶಮಾಡಿದ ನಂತರ, ಆರ್ಯರು ಇಡೀ ಸಮಾಜವನ್ನು ವರ್ಣ ವ್ಯವಸ್ಥೆಯ ಮೇಲೆ ವಿಭಜನೆ ಮಾಡಿದರು. ಅನೇಕ ಬ್ರಾಹ್ಮಣವಾದಿ ಸಾಹಿತ್ಯಗಳ ಪೈಕಿ ಋಗ್ವೇದದಲ್ಲಿನ ಪುರುಷ ಸೂಕ್ತವು ಬಹಳ ಮುಖ್ಯವಾದುದು. ಪುರುಷಸೂಕ್ತದ 10ನೇ ವ್ಯಾಖ್ಯಾನದ ಪ್ರಕಾರ; ದೇವರು ಮಾನವರನ್ನು ನಾಲ್ಕು ವರ್ಣಗಳಾಗಿ ಸೃಷ್ಟಿಸಿ ಅವರಿಗೆ ಕರ್ತವ್ಯಗಳನ್ನು ನಿಗದಿಪಡಿಸಿದ್ದಾನೆ. ಬ್ರಾಹ್ಮಣನು ವಿದ್ಯೆ ಗಳಿಕೆ ಮತ್ತು ಪೌರೋಹಿತ್ಯ ಮಾಡಬೇಕು; ಕ್ಷತ್ರಿಯರು ರಾಜ್ಯಭಾರ ಮಾಡಬೇಕು; ವೈಶ್ಯನು ವ್ಯಾಪಾರ, ವ್ಯವಸಾಯ ಮಾಡಬೇಕು. ಶೂದ್ರನು ಮೇಲಿನ ಮೂರು ವರ್ಣಗಳ ಸೇವೆ ಮಾಡಬೇಕು ಎಂದು ನಿಗಧಿಪಡಿಸಿ ಇದು ದೈವ ನಿಯಮವಾಗಿರುವುದರಿಂದ ಇದನ್ನು ಯಾರೂ ವಿರೋಧಿಸಬಾರದೆಂದು ಮುಗ್ಧ ಜನತೆಯನ್ನು ನಂಬಿಸಿದರು. ಮೂಲನಿವಾಸಿ ಬಹು ಜನರನ್ನು ಶೂದ್ರರೆಂದು ಪರಿಗಣಿಸಿ, ಅವರನ್ನು ಗುಲಾಮಗಿರಿಗೆ ತಳ್ಳಿ ಸಮಾಜವನ್ನು ವಿನಾಶದ ಅಂಚಿಗೆ ಕೊಂಡೊಯ್ದರು. ಬೌದ್ಧ ಪೂರ್ವ ಆರ್ಯ ಸಮಾಜಿಕ ಆಡಳಿತದಲ್ಲಿ ಇಡೀ ಸಮಾಜ ಕೆಟ್ಟು ಕೆರಹಿಡಿದಿತ್ತು.

ಯಜ್ಞಯಾಗಗಳು, ಜೂಜಾಟ :

ಯಜ್ಞ ಯಾಗಗಳ ಹೆಸರಿನಲ್ಲಿ ಲಕ್ಷಾಂತರ ಪ್ರಾಣಿ ಪಕ್ಷಿಗಳನ್ನು ಯಜ್ಞಕುಂಡಕ್ಕೆ ಬಲಿ ಕೊಡುತ್ತಿದ್ದರು. ಈ ಯಜ್ಞ ಕುಂಡಕ್ಕೆ ಕರುಗಳನ್ನು ಬಲಿ ಕೊಡುತ್ತಿದ್ದುದರಿಂದ ಕೃಷಿ ಮತ್ತು ಪಶು ಸಂಗೋಪನೆಯೇ ಆದಾಯದ ಮೂಲವಾಗಿದ್ದ ಮೂಲನಿವಾಸಿಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಇಡೀ ಸಮಾಜ ಬಡತನಕ್ಕೆ ತುತ್ತಾಯಿತು.

ಆರ್ಯ ಸಮಾಜವು ಅತ್ಯಂತ ಕೆಟ್ಟ ರೀತಿಯ ಜೂಜಾಟಗಳಲ್ಲಿ ತಲ್ಲೀನರಾಗಿರುತ್ತಿದ್ದರು. ಉದಾ : ಮಹಾಭಾರತದ ವಾನಪರ್ವದಲ್ಲಿರುವ ಎರಡು ಘಟನೆಗಳು ಇದಕ್ಕೆ ಸಾಕ್ಷಿ. ಒಂದು- ನಳರಾಜನು ಸಕ್ಕರನ ಜೊತೆ ಜೂಜಾಟದಲ್ಲಿ ತನ್ನ ಸಾಮ್ರಾಜ್ಯ, ತಾನು, ತನ್ನ ಪತ್ನಿ ದಮಯಂತಿಯನ್ನು ಸೋತು, ದರಿದ್ರನಾಗುತ್ತಾನೆ. ಎರಡು- ಮಹಾಭಾರತದ ಸಭಾ ಪರ್ವದಲ್ಲಿ ಧರ್ಮರಾಜರು ಜೂಜಾಟದಲ್ಲಿ ತನ್ನ ತಮ್ಮಂದಿರು ಮತ್ತು ಪತ್ನಿ ದ್ರೌಪದಿಯನ್ನು ಪಣಕ್ಕಿಟ್ಟು ಸೋಲುತ್ತಾನೆ. ಪ್ರತಿಯೊಬ್ಬ ರಾಜನು ತನ್ನ ಆಸ್ಥಾನದಲ್ಲಿ ಜೂಜಾಟಕ್ಕಾಗಿಯೇ ಒಂದು ಹಜಾರವನ್ನು ಮೀಸಲಿಡುತ್ತಿದ್ದನು. ವಿರಾಟರಾಜನು ಕಂಕ ಎಂಬ ನುರಿತ ಜೂಜುಗಾರನನ್ನು ತನ್ನ ಆಸ್ಥಾನದಲ್ಲಿ ನೇಮಕ ಮಾಡಿಕೊಂಡಿದ್ದನು. ಈ ಜೂಜಾಟದ ಚಟವು

ರಾಜರುಗಳಲ್ಲದೆ ಸಾಮಾನ್ಯ ಜನತೆಯನ್ನು ಬಲಿತೆಗೆದುಕೊಂಡಿತ್ತು. ಕೌಟಿಲ್ಯನ ಕಾಲದಲ್ಲಿ ಜೂಜಾಡಲು ಸರ್ಕಾರವೇ ಪರವಾನಗಿ ನೀಡಿತ್ತು.

ಮದ್ಯಪಾನ :

ಕುಡಿತವು ಮತ್ತೊಂದು ದುಷ್ಟ ಚಟವಾಗಿ ಆರ್ಯ ಸಮಾಜದಲ್ಲಿ ವ್ಯಾಪಕವಾಗಿ ಚಾಲ್ತಿಯಲ್ಲಿತ್ತು. ಕುಡಿತದಲ್ಲಿ ಎರಡು ರೀತಿ. ಸೋಮ ಮತ್ತು ಸುರ. ಸೋಮಪಾನವು ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಮೀಸಲು, ಸುರಪಾನ ಮಾಡಲು ಎಲ್ಲರಿಗೂ ಅವಕಾಶವಿತ್ತು. ಉದಾ : ಅಸುರರ ಗುರು ಶುಕ್ರಾಚಾರ್ಯರು ಕುಡಿತದ ಅಮಲಿನಲ್ಲಿ ತಮಗೆ ಮಾತ್ರ ಗೊತ್ತಿದ್ದ ಜೀವ ಉಳಿಸುವ ಮಂತ್ರಗಳನ್ನು ದೇವತೆಗಳ ಗುರುವಾದ ಬೃಹಸ್ಪತಿಯ ಮಗನಾದ ಕಚನಿಗೆ ಹೇಳಿಬಿಟ್ಟನು. ಮಹಾಭಾರತದ ಕಥೆಯಲ್ಲಿ ಕೃಷ್ಣ ಮತ್ತು ಅರ್ಜುನನು ಕಂಠಪೂರ್ತಿ ಕುಡಿದಿರುವ ಸಾಕಷ್ಟು ಉದಾಹರಣೆಗಳಿವೆ. ಆರ್ಯರ ಹೆಂಗಸರೂ ಸಹ ಕಂಠಪೂರ್ತಿ ಕುಡಿಯುತ್ತಿದ್ದರು. ಬ್ರಾಹ್ಮಣರಷ್ಟೆ ಅಲ್ಲದೆ ಸಮಾಜದ ಎಲ್ಲರೂ ಈ ಚಟಕ್ಕೆ ಬಲಿಯಾಗಿದ್ದರು.

ವ್ಯಭಿಚಾರ :

ಬುದ್ಧ ಪೂರ್ವ ಆರ್ಯ ಸಮಾಜದ ಮತ್ತೊಂದು ಅನಿಷ್ಟ ಪದ್ಧತಿ, ವ್ಯಭಿಚಾರ. ಉದಾಹರಣೆಗೆ: ಆರ್ಯರ ಪುರಾಣಗಳ ಪ್ರಕಾರ ಸೃಷ್ಟಿಕರ್ತ ಬ್ರಹ್ಮನಿಗೆ ಮೂವರು ಗಂಡು ಹಾಗೂ ಒಬ್ಬ ಹೆಣ್ಣು ಮಗಳಿದ್ದಳು. ಅವನ ಒಬ್ಬ ಮಗ ದಕ್ಷನು ತನ್ನ ತಂಗಿಯನ್ನೇ ಮದುವೆಯಾಗುತ್ತಾನೆ. ಈ ಇಬ್ಬರು ಸೋದರ ಸೋದರಿಯರಿಗೆ ಹುಟ್ಟಿದ ಹೆಣ್ಣು ಮಕ್ಕಳಲ್ಲಿ ಒಬ್ಬಳನ್ನು ಬ್ರಾಹ್ಮಣ ಮಾರೀಚನ ಮಗ ಕಶ್ಯಪನಿಗೆ ಮದುವೆ ಮಾಡುತ್ತಾನೆ. ಕೆಲವರನ್ನು ಬ್ರಹ್ಮನ ಮೂರನೆಯ ಮಗ ಧರ್ಮನಿಗೆ ಮದುವೆ ಮಾಡುತ್ತಾನೆ. ಋಗ್ವೇದದಲ್ಲಿ ಯಮಿ ಎಂಬ ತಂಗಿಯು ಯಮ ಎಂಬ ತನ್ನ ಅಣ್ಣನನ್ನು ಕಾಮ ಕೇಳಿಗೆ ಆಹ್ವಾನಿಸುವ ಉಲ್ಲೇಖವಿದೆ. ದಕ್ಷನು ತನ್ನ ಮಗಳನ್ನು ತಂದೆ ಬ್ರಹ್ಮನಿಗೆ ಮದುವೆ ಮಾಡುತ್ತಾನೆ. ಇವರಿಗೆ ಹುಟ್ಟಿದವನೇ ನಾರದ. ಯಜ್ಞ-ಯಾಗದ ಹೆಸರಿನಲ್ಲಿ ಬಹಿರಂಗ ಕಾಮಕೇಳಿ ನಡೆಸುತ್ತಿದ್ದರು ಎಂಬುದಕ್ಕೆ ಹರಿವಂಶದ ಅಧ್ಯಾಯಗಳಲ್ಲಿ ಸಾಕಷ್ಟು ಉಲ್ಲೇಖಗಳಿವೆ. ಆರ್ಯರಲ್ಲಿ ಹೆಣ್ಣುಮಕ್ಕಳನ್ನು ಬಾಡಿಗೆಗೆ ಕೊಡುವ ಪದ್ಧತಿ ಜಾರಿಯಲ್ಲಿತ್ತು. ಪುತ್ರ ಸಂತಾನಕ್ಕಾಗಿ ಹೆಣ್ಣನ್ನು ಉತ್ತಮದೇವ ಪುರುಷರ ಹತ್ತಿರ ಕಳುಹಿಸುತ್ತಿದ್ದರು. ಪ್ರಾಣಿಗಳ ಜೊತೆ ಕಾಮಕೇಳಿ ನಡೆಸುವ ವಕ್ರ ಪದ್ಧತಿಯೂ ಆರ್ಯರಲ್ಲಿ ಜಾರಿಯಲ್ಲಿತ್ತು.

ಭಯೋತ್ಪಾದನೆ :

ಆರ್ಯ ಸಮಾಜದಲ್ಲಿ ಜನತೆಯ ಧಾರ್ಮಿಕ ನೈತಿಕ ಹಾಗೂ ಸಾಮಾಜಿಕ ನಡವಳಿಕೆಗಳನ್ನು ರೂಪಿಸುತ್ತಿದ್ದವರು ಬ್ರಾಹ್ಮಣ ಪುರೋಹಿತರು. ಇವರು ಜನತೆಯಲ್ಲಿ ಭಯ ಹುಟ್ಟುವಂತಹ ಯಜ್ಞ ಯಾಗಗಳನ್ನು ಮಾಡುತ್ತಿದ್ದರು. ಶಾಸ್ತ್ರ ಹೇಳಿ ಜನತೆಯನ್ನು ಭಯದ ವಾತಾರವಣಕ್ಕೆ ತಳ್ಳಿದರು.

ಬೌದ್ಧ ಧರ್ಮದ ಸತ್ಯದ ಅಲೆಗಳಲ್ಲಿ ಸಿಕ್ಕಿ ಕೊಚ್ಚಿ ಹೋಗಿದ್ದ ಬ್ರಾಹ್ಮಣರು, ಬೌದ್ಧ ಧರ್ಮದ ವಿರುದ್ಧ ಸೇಡು ತೀರಿಸಿಕೊಳ್ಳಲು ಒಂದು ಅವಕಾಶಕ್ಕಾಗಿ ಕಾಯುತ್ತಿದ್ದರು. ಕ್ರಿ.ಪೂ. 185ರಲ್ಲಿ ಮೌರ್ಯ ಸಾಮ್ರಾಜ್ಯದ ಕೊನೆಯ ದೊರೆ ಬೃಹದ್ರಥ ಮೌರ್ಯನನ್ನು ಅವನ ಸೇನಾಧಿಪತಿ ಪುಷ್ಯಮಿತ್ರನೆಂಬ ಸಾಮವೇದಿ ಸುಂಗ ಬ್ರಾಹ್ಮಣನು ಮೋಸದಿಂದ ಕೊಲೆ ಮಾಡಿದನು.

ಗೌತಮ ಬುದ್ಧರ ಕ್ರಾಂತಿ :

ಆರ್ಯರ ಆಡಳಿತದಿಂದಾಗಿ ನೀತಿಗೆಟ್ಟು, ಮತಿಗೆಟ್ಟಿದ್ದ ಸಮಾಜದ ಒಳಗಿನಿಂದ ಗೌತಮಬುದ್ಧ ಹುಟ್ಟಿ ಬಂದರು. ಮನುಷ್ಯ ಮನುಷ್ಯರ ನಡುವೆ ಬೇಧವನ್ನು ಸೃಷ್ಟಿ ಮಾಡಿ, ಅನೀತಿ, ಅಧರ್ಮ, ಮೂಢನಂಬಿಕೆ, ಯಜ್ಞ-ಯಾಗಾದಿಗಳನ್ನು ಒಳಗೊಂಡ ಆರ್ಯರ ವೈದಿಕ ವ್ಯವಸ್ಥೆಯ ವಿರುದ್ಧ ಪ್ರಥಮ ಬಾರಿಗೆ ಕ್ರಿ.ಪೂ. 500ರಲ್ಲಿ ಗೌತಮ ಬುದ್ಧ ಬಂಡಾಯ ಹೂಡಿದರು. ತಮ್ಮ ನಿರ್ಮಲ ಪ್ರಜ್ಞೆ, ಕರುಣೆ, ಶೀಲದಿಂದ ಇಡೀ ಸಮಾಜದ ಆಲೋಚನೆಯ ದಿಕ್ಕನ್ನೇ ಬದಲಾಯಿಸಿದ ಗೌತಮ ಬುದ್ಧರು, ಕಾರಣ ಮತ್ತು ಪರಿಣಾಮ ಎಂಬ ಸಹಜ ಸಿದ್ಧಾಂತದ ಮೇಲೆ ಧರ್ಮ ಸ್ಥಾಪನೆ ಮಾಡಿದರು.

ಧರ್ಮ ಇರುವುದು ಮನುಷ್ಯನಿಗಾಗಿ, ಮನುಷ್ಯ ಇರುವುದು ಧರ್ಮಕ್ಕಾಗಿ ಅಲ್ಲ, ವೈದಿಕ ವ್ಯವಸ್ಥೆಯ ಶೋಷಣೆಯ ಮಾರ್ಗವಾದ ದೇವರು, ಆತ್ಮ ಪುರೋಹಿತರನ್ನು ಧಿಕ್ಕರಿಸಿ ಎಂದು ಜನರಲ್ಲಿ ಜಾಗೃತಿ ಉಂಟು ಮಾಡಿದರು. ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಸೋದರತೆಯ ತತ್ತ್ವಗಳನ್ನು ಪ್ರಚಾರ ಮಾಡಿ ಜಾರಿಗೆ ತಂದ ಗೌತಮಬುದ್ಧ ನೈಜ ಪ್ರಜಾಪ್ರಭುತ್ವದ ಸಂಸ್ಥಾಪಕರಾದರು. ಬ್ರಾಹ್ಮಣ ಶಾಹಿ ಸಾಮಾಜಿಕ ವ್ಯವಸ್ಥೆಗೆ ಸಿಲುಕಿ ಜರ್ಝರಿತರಾಗಿದ್ದ ಜನತೆ, ಆರ್ಯರ ಅನೀತಿಯುತ ವ್ಯವಸ್ಥೆಯನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಬೌದ್ಧ ಧರ್ಮದ ಅನುಯಾಯಿಗಳಾಗಿ ನೆಮ್ಮದಿ ಹಾಗೂ ಸಂತಸದ ಬದುಕನ್ನು ಕಂಡುಕೊಂಡರು. ಈ ಬೌದ್ಧ ಕ್ರಾಂತಿಯ ಪರಿಣಾಮವಾಗಿ ಬ್ರಾಹ್ಮಣಶಾಹಿ, ವ್ಯವಸ್ಥೆಯ ಬುಡಮೇಲಾಯಿತು.

ಬೌದ್ಧ ರಾಜರುಗಳು ಭಾರತವನ್ನು 500 ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಅದರಲ್ಲಿ ಅಶೋಕನಿಂದ ಬೃಹದ್ರಥ ಮೌರ್ಯನವರೆಗೆ ಸುಮಾರು 150 ವರ್ಷಗಳ ಕಾಲದ ಮೌರ್ಯ ಸಾಮ್ರಾಜ್ಯದಲ್ಲಿ ಅತ್ಯುನ್ನತ ಸಾಮಾಜಿಕ ಮತ್ತು ರಾಜಕೀಯ ಪ್ರಜಾಪ್ರಭುತ್ವ ವ್ಯವಸ್ಥೆಯು ಜಾರಿಯಲ್ಲಿದ್ದು ಅದು ಇಡೀ ಜಗತ್ತಿಗೆ ಮಾದರಿಯಾಯಿತು. ಈ ಅವಧಿಯಲ್ಲಿ ಭರತ ಖಂಡದಾದ್ಯಂತ ಬೌದ್ಧ ಧರ್ಮವು ನೆಲೆಗೊಂಡು ಜಗತ್ತಿನ ಇತರ ದೇಶಗಳಲ್ಲಿಯೂ ಪ್ರಚಾರಕ್ಕೆ ಬಂದಿತು. ಯಜ್ಞ ಯಾಗಗಳ ನಿಷೇಧದಿಂದಾಗಿ ಅದನ್ನೆ ಕಸುಬಾಗಿಸಿಕೊಂಡಿದ್ದ ಬ್ರಾಹ್ಮಣರು ಬಡ ಬ್ರಾಹ್ಮಣರಾದರು.

ಬೌದ್ಧ ಧರ್ಮದ ನಾಶ :

ಬೌದ್ಧ ಧರ್ಮದ ಸತ್ಯದ ಅಲೆಗಳಲ್ಲಿ ಸಿಕ್ಕಿ ಕೊಚ್ಚಿ ಹೋಗಿದ್ದ ಬ್ರಾಹ್ಮಣರು, ಬೌದ್ಧ ಧರ್ಮದ ವಿರುದ್ಧ ಸೇಡು ತೀರಿಸಿಕೊಳ್ಳಲು ಒಂದು ಅವಕಾಶಕ್ಕಾಗಿ ಕಾಯುತ್ತಿದ್ದರು. ಕ್ರಿ.ಪೂ. 185ರಲ್ಲಿ ಮೌರ್ಯ ಸಾಮ್ರಾಜ್ಯದ ಕೊನೆಯ ದೊರೆ ಬೃಹದ್ರಥ ಮೌರ್ಯನನ್ನು ಅವನ ಸೇನಾಧಿಪತಿ ಪುಷ್ಯಮಿತ್ರನೆಂಬ ಸಾಮವೇದಿ ಸುಂಗ ಬ್ರಾಹ್ಮಣನು ಮೋಸದಿಂದ ಕೊಲೆ ಮಾಡಿದನು. ಅಶ್ವಮೇಧ ಯಾಗವನ್ನು ಜಾರಿಗೆ ತಂದು ಬೌದ್ಧ ರಾಜರುಗಳ ವಿರುದ್ಧ ಯುದ್ಧ ಘೋಷಣೆ ಮಾಡಿ ಮೌರ್ಯ ಸಾಮ್ರಾಜ್ಯವನ್ನು ನಾಶ ಮಾಡಿ, ಸುಂಗ ಸಾಮ್ರಾಜ್ಯ ಸ್ಥಾಪನೆ ಮಾಡಿದನು. ಬೌದ್ಧರಾಜರುಗಳ ತಲೆ ಕತ್ತರಿಸಿ ತಂದವರಿಗೆ ನೂರು ಚಿನ್ನದ ನಾಣ್ಯಗಳನ್ನು ಬಹುಮಾನ ನೀಡುವುದಾಗಿ ಘೋಷಣೆ ಮಾಡಿ ಬೌದ್ಧ ಬಿಕ್ಖುಗಳ ಮಾರಣ ಹೋಮ ಮಾಡಿದನು. ಸುಮತಿ ಭಾರ್ಗವನೆಂಬ ಸಾಮವೇದಿ ಬ್ರಾಹ್ಮಣನ ಕೈಯಿಂದ ಮನುಸ್ಮೃತಿಯನ್ನು ಪುನರ್ ರಚಿಸಿ ಬ್ರಾಹ್ಮಣವಾದವನ್ನು ತನ್ನ ಸಾಮ್ರಾಜ್ಯದ ಸಿದ್ಧಾಂತವನ್ನಾಗಿ ಮಾಡಿದನು. ಪುಷ್ಯಮಿತ್ರನು ಹುಟ್ಟು ಹಾಕಿದ ರಾಜಕೀಯ ಪ್ರತಿಕ್ರಾಂತಿಯು ಬೌದ್ಧ ಸಾಮ್ರಾಜ್ಯದ ಸಾಮಾಜಿಕ-ರಾಜಕೀಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡಿತು.

ಸಮಾನತೆಯ ಸಮಾಜವನ್ನು ಮನುಸ್ಮೃತಿಯು ಮತ್ತೊಮ್ಮೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಸಮುದಾಯದ ಒಂದು ದೊಡ್ಡ ಗುಂಪು ಬಂಡಾಯವೆದ್ದಿತು. ಮನುಸ್ಮೃತಿಯ ನೀತಿ-ನಿಯಮಗಳನ್ನು ವಿರೋಧಿಸಿತು. ಬೌದ್ಧ ಭಿಕ್ಖುಗಳು ನಾಶವಾದ ನಂತರವೂ ಇವರು ಬೌದ್ಧರಾಗಿಯೇ ಉಳಿದರು. ಈ ಬಂಡಾಯಗಾರ ಬೌದ್ಧರನ್ನು ಮಣಿಸಲು ಅನೇಕ ಕಾನೂನು ಕಟ್ಟಳೆಗಳನ್ನು ಇವರ ಮೇಲೆ ಹೇರಲಾಯಿತು.

ಆ ಬಂಡಾಯಗಾರ ಬೌದ್ಧರೇ ಇಂದಿನ ಅಸ್ಪೃಶ್ಯರು-ಅವರ್ಣೀಯರು. ಇವರ ಮೇಲೆ ಸಾಮಾಜಿಕ ಬಹಿಷ್ಕಾರದಂತಹ ಕ್ರೂರ ಸಾಮಾಜಿಕ ಕಾನೂನನ್ನು ಹೇರಿ ದೈಹಿಕ ಮತ್ತು ಮಾನಸಿಕ ಹಿಂಸೆಗೆ ಒಳಪಡಿಸಿ ಅವರನ್ನು ಊರಿಂದ ಹೊರಗಿಡಲಾಯಿತು. ಮನುಸ್ಮೃತಿಯು ಪುಷ್ಯಮಿತ್ರನ ಆಡಳಿತ ವ್ಯವಸ್ಥೆಯ ಕಾನೂನಾಗಿ ಶೂದ್ರ-ಅತಿಶೂದ್ರರಿಗೆ ವಿದ್ಯೆ, ಅಧಿಕಾರ, ಸಂಪತ್ತು ಮತ್ತು ಆಯುಧಗಳಿಸುವುದನ್ನು ನಿಷೇಧಿಸಿತು. ಇದರ ಪರಿಣಾಮವಾಗಿ ಶೂದ್ರರು ಮತ್ತು ಅಸ್ಪೃಶ್ಯರು ಮಾನಸಿಕ ಮತ್ತು ದೈಹಿಕ ಗುಲಾಮಗಿರಿಗೆ ಅವರ ಜೀವನದ ಒಂದು ಅವಿಭಾಜ್ಯ ಅಂಗವಾಯಿತು. ಪುಷ್ಯಮಿತ್ರನ ನಂತರ ಭಾರತವನ್ನು ಆಳ್ವಿಕೆ ಮಾಡಿದ ಎಲ್ಲಾ ಹಿಂದೂ ರಾಜರುಗಳು ಈ ಶೋಷಣೆಯನ್ನು ಮುಂದುವರಿಸಿದರು. ಒಂದು ಸಾವಿರ ವರ್ಷಗಳ ಮೊಗಲರ ಆಡಳಿತದಲ್ಲೂ ಸಹ ಶೂದ್ರರ ಕತ್ತಲ ಬದುಕಿನಲ್ಲಿ ಬದಲಾವಣೆಯ ಬೆಳಕು ಮೂಡಲೇ ಇಲ್ಲ. ●

ಬೌದ್ಧ ಧರ್ಮ; ಜೀವನ ಮಾರ್ಗ

ಬೌದ್ಧಧರ್ಮ, ಮನುಷ್ಯ ದುಃಖದಿಂದ ಮುಕ್ತಿ ಪಡೆಯಬೇಕಾದರೆ ತನ್ನ ಸ್ವತಂತ್ರ ಪ್ರಯತ್ನದಿಂದ ಸಾಧ್ಯ ಎಂದು ಬೋಧಿಸುತ್ತದೆ. ಇದಕ್ಕೆ ದೈವದ ನೆರವಾಗಲಿ, ಇಲ್ಲವೆ ಮಧ್ಯವರ್ತಿ ಪೂಜಾರಿಗಳಾಗಲಿ ಬೇಕಿಲ್ಲ. ಆದುದರಿಂದ ಬೌದ್ಧ ಧರ್ಮವನ್ನು ಖಡಾಖಂಡಿತವಾಗಿ ಒಂದು ಧರ್ಮವೆಂದು ಕರೆಯಲಾಗುವುದಿಲ್ಲ. ಕಾರಣ ಇದೊಂದು ವ್ಯವಸ್ಥಿತವಾದ ಪೂಜೆಗಳಿಂದ ಕೂಡಿದ ಮತ ಧರ್ಮವಲ್ಲ. ಹೊರ ನಡವಳಿಕೆ ಮೂಲಕ ಮನುಷ್ಯರು ದೇವರ ಇರುವಿಕೆ ಬಗ್ಗೆ ಮಾನ್ಯತೆ ನೀಡುತ್ತಾ ಆ ದೇವರು ಅವರ ಬದುಕನ್ನು ನಿಯಂತ್ರಿಸುವುದಾಗಿ ಹಾಗೂ ಅವುಗಳಿಗೆ ವಿಧೇಯನಾಗಿ ಪ್ರೀತಿ ಹಾಗೂ ಗೌರವವನ್ನು ನೀಡಬೇಕೆಂಬುದರ ಮತ ಧರ್ಮದ ವ್ಯಾಪ್ತಿಯಲ್ಲಿ ಬೌದ್ಧ ಧರ್ಮ ಬರುವುದಿಲ್ಲ.

ಸಾಮಾನ್ಯವಾಗಿ ಅರ್ಥೈಸುವ ರೀತಿಯಲ್ಲಿ ಇದು ಧರ್ಮವಲ್ಲ. ಕಾರಣ ಇದು ಪರಮಾತ್ಮನಲ್ಲಿ ಶರಣಾಗುವ ಪೂಜಿಸುವ ಹಾಗೂ ಮನ ಶ್ರದ್ಧೆಯುಳ್ಳ ವ್ಯವಸ್ಥೆಯಲ್ಲ. ಬೌದ್ಧಧರ್ಮವು ತನ್ನ ಅನುಯಾಯಿಗಳಿಂದ ಅಂಧ ಶ್ರದ್ಧೆಯನ್ನು ಬಯಸುವುದಿಲ್ಲ. ಇಲ್ಲಿ ಬರಿ ನಂಬಿಕೆಯನ್ನು ತೆಗೆದು ಹಾಕಿ ಜ್ಞಾನಾಧಾರಿತ ಆತ್ಮವಿಶ್ವಾಸವನ್ನು ತರಲಾಗಿದೆ. ಇದನ್ನು ಪಾಲಿಯಲ್ಲಿ ಸದ್ಧಾ ಎಂದು ಕರೆಯಲಾಗಿದೆ. ಬುದ್ಧನಲ್ಲಿ ಇರಿಸುವ ವಿಶ್ವಾಸವು ರೋಗಿ ವೈದ್ಯನಲ್ಲಿ ಇರಿಸುವ ವಿಶ್ವಾಸದಂತೆ ಅಥವಾ ಒಬ್ಬ ವಿದ್ಯಾರ್ಥಿ ತನ್ನ ಗುರುವಿನಲ್ಲಿ ಇರಿಸಿದ ವಿಶ್ವಾಸ ರೀತಿಯಂತೆ. ಬೌದ್ಧರು ಬುದ್ಧನಲ್ಲಿ ಶರಣಾಗುತ್ತಾರೆ ಕಾರಣ ಆತನು ವಿಮೋಚನೆಯ ಮಾರ್ಗವನ್ನು ಕಂಡುಹಿಡಿದಿದ್ದಾನೆ. ಬೌದ್ಧರು ಬುದ್ಧನಿಗೆ ಆತನ ವೈಯಕ್ತಿಕ ಶುದ್ಧತೆಯಿಂದ ತಮ್ಮನ್ನು ಕಾಪಾಡಬಹುದೆಂದು ನಂಬಿ ಶರಣಾಗುವುದಿಲ್ಲ. ಬುದ್ಧ ಅಂತಹ ಯಾವುದೇ ಗ್ಯಾರಂಟಿ ನೀಡುವುದಿಲ್ಲ. ಬೇರೆಯವರ ಮಲಿನತೆಯನ್ನು ಶುದ್ಧಗೊಳಿಸುವುದೇ ಆಗಲಿ ಇಲ್ಲವೆ ಅಶುದ್ಧಗೊಳಿಸುವುದಾಗಲಿ ಆಗುವುದಿಲ್ಲ. ಬುದ್ಧ, ಒಬ್ಬ ಗುರುವಾಗಿ ನಮಗೆ ಬೋಧಿಸುವುದೇನೆಂದರೆ, ನಾವು ನಮ್ಮ ಶುದ್ಧತೆಗೆ ನೇರವಾಗಿ ಜವಾಬ್ದಾರರು. ಆದಾಗ್ಯೂ ಬೌದ್ಧರು ಬುದ್ಧನಲ್ಲಿ ಶರಣಾದರೂ ಅವನಲ್ಲಿ ಆತ್ಮಾರ್ಪಣೆ ಮಾಡಿಕೊಳ್ಳುವುದಿಲ್ಲ. ಅದೇ ರೀತಿ ಬೌದ್ಧರು ಬುದ್ಧನ ಅನುಯಾಯಿಯಾಗಿರುವುದರಿಂದ ತನ್ನ ವಿಚಾರ ಸ್ವಾತಂತ್ರ್ಯವನ್ನು ಬಲಿ ಕೊಡುವುದಿಲ್ಲ. ಬೌದ್ಧನು ತನ್ನ ಸ್ವತಂತ್ರ ಇಚ್ಛೆಯಿಂದ ಜ್ಞಾನವನ್ನು ಬೆಳೆಸಿ ತಾನೇ ಸ್ವತಃ ಬುದ್ಧನಾಗಬಹುದು. ಬೌದ್ಧಧರ್ಮದ ಪ್ರಾರಂಭದ ಕೇಂದ್ರ ಬಿಂದು ವೈಚಾರಿಕತೆ ಅಥವಾ ಅರಿವು ಪಾಲಿಯಲ್ಲಿ ಇದನ್ನು ಸಮ್ಮಾದಿಟ್ಟಿ ಎಂದು ಕರೆಯಲಾಗಿದೆ.

ಸತ್ಯಶೋಧಕರಿಗೆ ಬುದ್ಧ ಹೇಳುವುದೇನೆಂದರೆ (ಬಹುಕಾಲದಿಂದ ಇದನ್ನು ಕೇಳಿದ್ದೇನೆ ಎಂಬ ನಂಬಿಕೆಯಿಂದಾಗಿ ಅನೇಕ ತಲೆಮಾರುಗಳಿಂದ ಇದು ನಮಗೆ ಬಂದಿದೆ ಎಂದು) ಯಾವುದೇ ನಿರಾಧಾರಿತ ಮಾತನ್ನು ಒಪ್ಪಿಕೋ ಬೇಡ. ಯಾವುದನ್ನು ಕೇವಲ ಸಂಪ್ರದಾಯದ ಆಧಾರದ ಮೇಲೆ ಒಪ್ಪಬೇಡ. ಯಾವುದನ್ನು ಕೇವಲ ಗಾಳಿ ಸುದ್ದಿಯ ಆಧಾರದ ಮೇಲೆ (ಬೇರೆಯವರು ಸತ್ಯಾಸತ್ಯತೆಯನ್ನು ತಿಳಿಯದೆ ಹರಡುವ ಸುದ್ದಿ) ನಂಬಬೇಡ. ಯಾವುದೇ ವಿಷಯವು ನಿಮ್ಮ ಧರ್ಮಗ್ರಂಥ ಒಮ್ಮತವಾಗಿದ್ದರು ಸಹ ನಂಬಬೇಡ. ಯಾವುದನ್ನು ಕೇವಲ ಕಲ್ಪನೆಯ ಮೇಲೆ ನಂಬಬೇಡ. ಯಾವುದನ್ನು ಕೇವಲ ಊಹೆಯ ಮೇಲೆ ನಂಬಬೇಡ. ತರ್ಕವನ್ನೇ ಆಧರಿಸಿ ನಂಬಬೇಡ. ಯಾವುದೇ ವಿಷಯ ತನ್ನ ಪೂರ್ವಯೋಜಿತ ನಂಬಿಕೆ ಪ್ರಕಾರ ಇದ್ದರೂ ನಂಬಬೇಡ. ಯಾವುದೇ ಒಪ್ಪಿಗೆಯಾದಂತೆ ಕಂಡರು ಸಹ ನಂಬಬಾರದು. (ಉದಾ: ಭಾಷಣಕಾರ ಒಳ್ಳೆಯವನಂತೆ ಕಾಣುತ್ತಾನೆ. ಆದ್ದರಿಂದ ಒಪ್ಪಲೇಬೇಕೆಂಬ ಮನಸ್ಥಿತಿ) ಯಾವುದೇ ಸನ್ಯಾಸಿ ನಿಮ್ಮವರಿಂದ ಗೌರವಿಸಲ್ಪಟ್ಟರು ಸಹ ನಂಬಬಾರದು. ಅವನ ಪದ ಒಪ್ಪುವಂತಹುದಿರದು.

ಇವುಗಳು ಅನೈತಿಕ, ಇವುಗಳು ಆಕ್ಷೇಪಣೀಯ. ಇವುಗಳು ಜ್ಞಾನಿಗಳಿಂದ ಖಂಡನೀಯ, ಎಂದು ನಿನಗೆ ನೀನೇ ತಿಳಿದುಕೊಂಡಲ್ಲಿ ಹಾಗೂ ಯಾವತ್ತೂ ಇವುಗಳನ್ನು ಸ್ವೀಕರಿಸಿದಾಗ ಹಾಗೂ ಪಾಲಿಸಿದಾಗ ದುಃಖ ಹಾಗೂ ವಿನಾಶಕ್ಕೆ ಎಡೆಮಾಡಿ ಕೊಡುತ್ತೇವೆಯೋ, ಆಗ ನಿಜವಾಗಲು ನೀನು ಅವುಗಳನ್ನು ತಿರಸ್ಕರಿಸಬೇಕು. ಇವುಗಳು ನೈತಿಕ, ಇವುಗಳು ನಿರಾಕ್ಷೇಪಣೀಯ, ಇವುಗಳು ಜ್ಞಾನಿಗಳಿಂದ ಶ್ಲಾಘನೀಯ, ಯಾವತ್ತೂ ಇವುಗಳನ್ನು ಸ್ವೀಕರಿಸಿ, ಪಾಲಿಸಿದಾಗ ಸುಖ ಹಾಗೂ ಸಂತೋಷ ನೀಡುತ್ತದೆ ಎಂದು ನಿನಗೆ ನೀನೇ ತಿಳಿದುಕೊಂಡಲ್ಲಿ ಆಗ ನಿಜವಾಗಲೂ ನೀನು ಅದರಂತೆ ಕಾರ್ಯಮಗ್ನನಾಗು. ಬುದ್ಧನ ಸ್ಫೂರ್ತಿದಾಯಕ ನುಡಿಗಳು ಇಂದಿಗೂ ಮೂಲ ತಾಜಾತನ ಹಾಗೂ ಶಕ್ತಿಯನ್ನು ಹೊಂದಿದೆ.

ಬೌದ್ಧಧರ್ಮದಲ್ಲಿ ಕುರುಡು ನಂಬಿಕೆಯಿಲ್ಲ. ಆದಾಗ್ಯೂ ಇಲ್ಲಿ ವಿಗ್ರಹ ಆರಾಧನೆ ಇಲ್ಲವೆ ಎಂದು ಯಾರಾದರೂ ವಾದಿಸಬಹುದು. ಬೌದ್ಧರು ಪ್ರಾಪಂಚಿಕ ಹಾಗೂ ಆಧ್ಯಾತ್ಮಿಕ ವರಗಳನ್ನು ಒಂದು ವಿಗ್ರಹದಿಂದ ಪೂಜಿಸುವುದರಿಂದ ಬರುತ್ತದೆ ಎಂದು ಎಂದಿಗೂ ನಂಬುವುದಿಲ್ಲ. ಆದರೆ ವಿಗ್ರಹ ಏನನ್ನು ಪ್ರತಿನಿಧಿಸುತ್ತದೆಯೋ ಅದಕ್ಕೆ ತಮ್ಮ ಪೂಜ್ಯ ಭಾವನೆಯನ್ನು ವ್ಯಕ್ತಪಡಿಸುತ್ತಾರೆ.

ಬೌದ್ಧರ ತಿಳುವಳಿಕೆ ಏನೆಂದರೆ ಪುಷ್ಪ ಹಾಗೂ ಸುಗಂಧವನ್ನು ವಿಗ್ರಹಕ್ಕೆ ಅರ್ಪಿಸುವುದರಿಂದ ತಾನು ಜೀವಂತ ಬುದ್ಧನ ಸಾನಿಧ್ಯದಲ್ಲಿದ್ದೇನೆ ಎಂದು ಸನ್ನಿವೇಶ ಕಲ್ಪಿಸಿಕೊಂಡು ಆ ಮೂಲಕ ಬುದ್ಧನ ಶ್ರೇಷ್ಠ ವ್ಯಕ್ತಿತ್ವದಿಂದ ಸ್ಫೂರ್ತಿ ಪಡೆದು ಬುದ್ಧನ ಸೀಮಾತೀತ ಕರುಣೆಯನ್ನು ತನ್ನ ದೇಹದಾಳದಷ್ಟು ಉಸಿರಾಡಿ ಆ ಮಹಾನ್ ಗುರುವಿನ ಶ್ರೇಷ್ಠ ದಾರಿಯನ್ನು ತುಳಿಯುವುದಕ್ಕಾಗಿ ಪ್ರಯತ್ನಿಸುತ್ತಾರೆ.

ಬೋಧಿ ವೃಕ್ಷವು ಜ್ಞಾನೋದಯದ ಒಂದು ಸಂಕೇತವಾಗಿದೆ. ಈ ಹೊರಗಿನ ವಸ್ತುಗಳ ಬಗ್ಗೆ ಭಾವನೆ ಹೊಂದಿರುವುದು ಬೇಕಾಗದೆ ಇದ್ದರೂ ಒಬ್ಬನ ಗಮನವನ್ನು ಕೇಂದ್ರೀಕರಿಸಲು ನೆರವಾಗುತ್ತದೆ. ಜ್ಞಾನಿಗಳಿಗೆ ಇದಾವುದು ಬೇಕಿಲ್ಲ. ಅವರು ನೇರವಾಗಿ ತಮ್ಮ ಗಮನವನ್ನು ಸುಲಭವಾಗಿ ಕೇಂದ್ರೀಕರಿಸಿ ಬುದ್ಧನನ್ನು ಕಲ್ಪಿಸಿಕೊಳ್ಳಬಲ್ಲರು.

ನಮ್ಮ ಒಳ್ಳೆಯದಕ್ಕಾಗಿ, ಕೃತಜ್ಞತಾ ಭಾವದಿಂದ ನಾವು ಗೌರವವನ್ನು ತೋರುತ್ತದೆ. ಆದರೆ ಬುದ್ಧನು ಇದಾವ ಗೌರವ ಪ್ರಣಾಮಗಳನ್ನು ನಿರೀಕ್ಷಿಸುವುದಿಲ್ಲ.

ನನ್ನ ಈ ನೆಲದಲ್ಲಿ

ನಾ ನಡೆವ ನೆಲದಲ್ಲಿ-
ಸಾವಿರಾರು ಸವೆದ ಕವಲು ದಾರಿಗಳು
ಕಣಿವೆ ತಿಟ್ಟುಗಳ ತುಂಬಾ ಕಾರೆಪಾಪಾಸು
ಕಾದ ಬಂಡೆ ಮೇಲೆ ಕತ್ತು ಕುಣಿಸುವ ಓತಿಕ್ಯಾತ
ಮುಳ್ಳುಬೇಲಿಗಳಲ್ಲಿ ಅರಳಿಬಾಡಿದ ಆಶೆಯ ಹೂಗಳು
ನೊಂದ ಆತ್ಮಗಳ ಕೊರಳಿಂದ ಆಧ್ಯಾತ್ಮದ ಆಕ್ರಂಧನ
ಸದಾ ಪಿತೂರಿ ನಡೆಸುವ ರಕ್ಕಸ ರಾಜಕೀಯ.

ನಾ ನಿಂತ ಧರೆಯಲ್ಲಿ-
ಸೂಳೆ ಸೆರಗಿನ ಬೆಡಗಿನ ಗರತಿಯರ ಕಾಮುಟ ಕಣ್ಣುಗಳು
ಶಿಥಿಲಗೊಂಡ ಮೆದುಳ ಮೇಲೆ ಕುಂತು ಕೂಗುವ ಕಾಗೆ-ಗೂಬೆಗಳು
ಸದಾ ಕುಲಗೋತ್ರ ಹುಡುಕುವ ನೀಚ ಮನಸ್ಸು
ಕುದಿವ ಭೂಗರ್ಭದ ಕಾವಿನಲ್ಲಿ ಸಿಡಿದು ನಿಂತ
ಚಿಂತೆಗಳ ಮೇಲೆ ಸುಡುವ ಕೆಂಪು ಸೂರ್ಯ.

ನಾ ಬದುಕುವ ಭೂಮಿಯಲ್ಲಿ-
ಸಹಿದ ಬೆನ್ನೆಲುಬುಕಟ್ಟಿದ ಸಾವಿರಾರು ಹೊಟ್ಟೆಗಳು
ಬಿಸಿಯಾದ ತಲೆಗಳಲ್ಲಿ ನಿರಾಶೆಯ ಕೆಂಪು ಕಣ್ಣುಗಳು
ಎಲ್ಲೆಲ್ಲೂ ತುಳಿದು ಉಸಿರಾಡುವ ಗೋಮುಖ ವ್ಯಾಘ್ರಗಳು
ಹಸಿದ ರಣಕೊಕ್ಕು ತೆರೆದು ಹಾರಾಡುವ ರಣಹದ್ದುಗಳು
ಇಂದ್ರಿಯಗಳಿಲ್ಲದ ಸಂಪ್ರದಾಯ ದೇಹಗಳಲ್ಲಿ
ನಾರುವ ಚಿಂತನೆಗಳಿಂದ ಸದಾ ಸುರಿವ ಕೀವು ರಕ್ತ.

ನಾ ಉಸಿರಾಡುವ ನೆಲದಲ್ಲಿ-
ತಡೆಯಲಾರದ ಖಾರದ ಹೊಗೆ ಕೆಮ್ಮು ಕಣ್ಣೀರು
ದುರ್ನಾತ ಕುಡಿದು ಅನ್ಯಾಯವಾಗಿ ಬಸುರಾದ ದೇಹಗಳು
ಬಸಿರು ಬೇನೆಯ ತಡೆಯಲಾರದೆ
ಒದ್ದಾಡಿ ತೀರಿ ಹೋಗುವ ನಿರಪರಾಧಿ ಜೀವಗಳು.

ನನ್ನ ಈ ನೆಲದಲ್ಲಿ-
ಇನ್ನಾದರೂ ಮಿಂಚು ಗುಡುಗು ಸಿಡಿದು
ಮೋಡ ಕರಗಿ ಮಳೆಯಾಗಲಿ
ಭೂಮಿ 'ಘಂ'-ಎಂದು
ಹಸಿರು ಮರದಲ್ಲಿ ಮೊಗ್ಗು ಅರಳಿ
ಹೊಸ ಆಶಯದ ಯುಗದ ಪಕ್ಷಿ ದನಿ ಎತ್ತಿ ಹಾಡಲಿ
ಪ್ರಕೃತಿಯಲ್ಲಿ ಹುಟ್ಟು ಸಾವು ಸಹಜವಾಗಿ
ಮನುಷ್ಯತ್ವದ ಸುಂದರ ಚರಿತ್ರೆ ಬರೆಯಲಿ.

○ ಡಾ|| ಬಾನಂದೂರು ಕೆಂಪಯ್ಯ

ಬದಲಿಗೆ ತನ್ನ ತತ್ವಗಳ ಪಾಲನೆಗೆ ಒತ್ತು ನೀಡುತ್ತಾನೆ. ನನ್ನ ತತ್ವಗಳನ್ನು ಯಾರು ಅತ್ಯುತ್ತಮವಾಗಿ ಪಾಲಿಸುತ್ತಾರೋ ಅವರು ನನ್ನನ್ನು ಹೆಚ್ಚಿನದಾಗಿ ಪುರಸ್ಕರಿಸಿದಂತಾಗುತ್ತದೆ. ಯಾರು ಧರ್ಮವನ್ನು ಕಾಣುತ್ತಾರೋ ಅವರು ನನ್ನನ್ನು ಕಾಣುತ್ತಾರೆ.

ವಿಗ್ರಹಗಳನ್ನು ಕುರಿತು, ಕೌಂಟ್ ಕೆವಸರ್‌ಲಿಂಗ್ ಈ ರೀತಿ ಹೇಳುತ್ತಾರೆ. "ಈ ಪ್ರಪಂಚದಲ್ಲಿ ಬುದ್ಧನ ವಿಗ್ರಹಕ್ಕಿಂತಲೂ ಮಿಗಿಲಾದ ಅಮೋಘವಾದದ್ದನ್ನು ನಾನು ಕಾಣಲಿಲ್ಲ. ಅವನ್ನು ಕಣ್ಣಿಗೆ ಗೋಚರಿಸುವ ಆಧ್ಯಾತ್ಮಿಕದ ಸರ್ವ ಶ್ರೇಷ್ಠ ಪರಿಪೂರ್ಣತೆಯ ಸಾಕಾರಮೂರ್ತಿಯಾಗಿದ್ದಾನೆ".

ಇನ್ನು ಹೇಳುವುದಾದರೆ, ಬೌದ್ಧಧರ್ಮದಲ್ಲಿ ಬಿನ್ನಹ ಕೋರಿಕೊಳ್ಳುವ ಇತ್ಯಾದಿ ಪ್ರಾರ್ಥನೆಗಳು ಇಲ್ಲ. ಬುದ್ಧನನ್ನು ಎಷ್ಟೇ ಪ್ರಾರ್ಥಿಸಿದರು ನಮ್ಮನ್ನು ನಾವು ರಕ್ಷಿಸಿಕೊಳ್ಳಲಾಗುವುದಿಲ್ಲ. ತನ್ನನ್ನು ಪ್ರಾರ್ಥಿಸುವುದರಿಂದ ಬುದ್ಧನು ಯಾರಿಗೂ ನೆರವನ್ನು ನೀಡುವುದಿಲ್ಲ. ಕೋರಿಕೊಳ್ಳುವ ಪ್ರಾರ್ಥನೆಗಳ ಬದಲಾಗಿ ಧ್ಯಾನ ಮಾಡಬೇಕು. ಅದು ಸ್ವ ಸಂಯಮ, ಶುದ್ಧತೆ ಹಾಗೂ ಜ್ಞಾನೋದಯದತ್ತ ಕರೆದೊಯ್ಯುತ್ತದೆ. ಧ್ಯಾನವೆಂದರೆ ಪ್ರಶಾಂತ ಕಲ್ಪನಾ ರಾಜ್ಯದ ವಿಹಾರವಲ್ಲ ಮತ್ತು ಮನಸ್ಸನ್ನು ಶೂನ್ಯವಾಗಿರಿಸುವುದಲ್ಲ. ಅದೊಂದು ಕಾರ್ಯಶೀಲ ಪ್ರಯತ್ನ. ಅದು ದೇಹ ಮತ್ತು ಮನಸ್ಸಿಗೆ ಟಾನಿಕ್ (ಬಲವರ್ಧಕ ಪೇಯ)ನಂತೆ ಕೆಲಸ ಮಾಡುತ್ತದೆ. ಬುದ್ಧನು ಪ್ರಾರ್ಥನೆಯ ನಿಷ್ಪ್ರಯೋಜನೆ ಬಗ್ಗೆ ಹೇಳುವುದಲ್ಲದೆ ಗುಲಾಮು ಮನಸ್ಸನ್ನು ಹೀನಾಯ ಎಂದು ಕರೆಯುತ್ತಾನೆ. ಬೌದ್ಧರು ಯಾವತ್ತು ತಮ್ಮನ್ನು ರಕ್ಷಿಸಿಕೊಳ್ಳಲು ಪ್ರಾರ್ಥಿಸಬಾರದು. ಬದಲಿಗೆ ತಮ್ಮ ಕಾಲಿನ ಮೇಲೆ ನಿಂತು ತಮ್ಮನ್ನೆ ಆಶ್ರಯಿಸಿ ತಮ್ಮ ಸ್ವಾತಂತ್ರ್ಯವನ್ನು ಪಡೆಯಬೇಕು.

ಪ್ರಾರ್ಥನೆಗಳು ವೈಯಕ್ತಿಕ ನಿವೇದನೆ ಲಕ್ಷಣವನ್ನು ತೋರುತ್ತದೆ. ದೇವರೊಂದಿಗೆ ಸ್ವಾರ್ಥಕ್ಕಾಗಿ ಚೌಕಾಸಿ ನಿವೇದನೆಯಾಗುತ್ತದೆ. ತನ್ನ ಅಹಂನ್ನು ತೃಪ್ತಿಪಡಿಸಲು ಪ್ರಾಪಂಚಿಕ ವಸ್ತುಗಳನ್ನು ಹೊಂದಲು ಮಹಾದಾಸೆಯಿಂದ ಪ್ರಾರ್ಥಿಸುತ್ತಾರೆ. ಆದರೆ ಧ್ಯಾನ ಪರಿವರ್ತನೆ ಮಾಡುತ್ತದೆ.

ಇತರೆ ಧರ್ಮಗಳಲ್ಲಿರುವಂತೆ ಸರ್ವಶಕ್ತಿ ದೇವರು, ಅವರಿಗೆ ವಿಧೇಯವಾಗಿ ಹಾಗೂ ಭಯದಿಂದ ನಡೆದುಕೊಳ್ಳುವುದು ಇತ್ಯಾದಿ ಯಾವುದು ಬುದ್ಧ ಧರ್ಮದಲ್ಲಿ ಇಲ್ಲ. ಬುದ್ಧನು ಬ್ರಹ್ಮಾಂಡವನ್ನಾಳುವ ಸರ್ವಜ್ಞ, ಸರ್ವವ್ಯಾಪ್ತಿ ಎಂಬ ದೇವರ ಬಗ್ಗೆ ನಂಬುವುದಿಲ್ಲ. ಬೌದ್ಧ ಧರ್ಮದಲ್ಲಿ ದೈವಿಕವಾಗಿ ವ್ಯಕ್ತವಾದ ಜ್ಞಾನವಿಲ್ಲ. ಸ್ಫೂರ್ತಿ ಪಡೆದು ಬುದ್ಧನ ಸೀಮಾತೀತ ಕರುಣೆಯನ್ನು ತನ್ನ ದೇಹದಾಳದಷ್ಟು ಉಸಿರಾಡಿ ಆ ಮಹಾನ್ ಗುರುವಿನ ಶ್ರೇಷ್ಠದಾರಿಯನ್ನು ತುಳಿಯುವುದಕ್ಕಾಗಿ ಪ್ರಯತ್ನಿಸುತ್ತಾರೆ.

ದೇವದೂತರಿಲ್ಲ/ಪ್ರವಾದಿಗಳಿಲ್ಲ. ಮನುಷ್ಯನ ಬದುಕನ್ನು ನಿಯಂತ್ರಿಸುವ ಸ್ವೇಚ್ಛಾನುಸಾರ ಶಿಕ್ಷೆ ಇಲ್ಲವೆ ವರಗಳನ್ನು ಕೊಡುವ ಅಲೌಕಿಕ ಶಕ್ತಿಗೆ ಬೌದ್ಧರು ಅಡಿಯಾಳಾಗಿಲ್ಲ. ಬೌದ್ಧರು ದೈವಿಕವಾಗಿ ವ್ಯಕ್ತವಾದ ಜ್ಞಾನದಲ್ಲಿ ದೇವರಲ್ಲಿ ನಂಬಿಕೆ ಇಲ್ಲದಿರುವುದರಿಂದ ಸತ್ಯದ ಏಕಸ್ವಾಮ್ಯತೆ ಹೊಂದುವುದಿಲ್ಲ. ಹಾಗೂ ಇತರೆ ಮತ ಧರ್ಮಗಳನ್ನು ಖಂಡಿಸುವುದಿಲ್ಲ. ಆದರೆ ಬೌದ್ಧಧರ್ಮ ಮನುಷ್ಯ ದುಃಖದಿಂದ ಮುಕ್ತಿ ಪಡೆಯಬೇಕಾದರೆ ತನ್ನ ಸ್ವತಂತ್ರ ಪ್ರಯತ್ನದಿಂದ ಸಾಧ್ಯ ಎಂದು ಬೋಧಿಸುತ್ತದೆ. ಇದಕ್ಕೆ ದೈವದ ನೆರವಾಗಲಿ ಇಲ್ಲವೆ ಮಧ್ಯವರ್ತಿ ಪೂಜಾರಿಗಳು ಬೇಕಿಲ್ಲ. ಆದುದರಿಂದ ಬೌದ್ಧ ಧರ್ಮವನ್ನು ಖಡಾಖಂಡಿತವಾಗಿ ಒಂದು ಧರ್ಮವೆಂದು ಕರೆಯಲಾಗುವುದಿಲ್ಲ. ಕಾರಣ ಇದೊಂದು ವ್ಯವಸ್ಥಿತವಾದ ಪೂಜೆಗಳಿಂದ ಕೂಡಿದ ಮತ ಧರ್ಮವಲ್ಲ. ಹೊರ ನಡುವಳಿಕೆ ಮೂಲಕ ಮನುಷ್ಯರು ದೇವರ ಇರುವಿಕೆ ಬಗ್ಗೆ ಮಾನ್ಯತೆ ನೀಡುತ್ತಾ ಆ ದೇವರು ಅವರ ಬದುಕನ್ನು ನಿಯಂತ್ರಿಸುವುದಾಗಿ ಹಾಗೂ ಅವುಗಳಿಗೆ ವಿಧೇಯನಾಗಿ ಪ್ರೀತಿ ಹಾಗೂ ಗೌರವವನ್ನು ನೀಡಬೇಕೆಂಬುದರ ಮತಧರ್ಮದ ವ್ಯಾಪ್ತಿಯಲ್ಲಿ ಬೌದ್ಧಧರ್ಮ ಬರುವುದಿಲ್ಲ.

ಧರ್ಮದ ಅರ್ಥ ಒಂದು ತತ್ವಬೋಧನೆ ಜೀವನವನ್ನು ಕೇವಲ ಮೇಲ್ನೋಟದಲ್ಲಿ ನೋಡದೆ ಇಡಿಯಾಗಿ ನೋಡಿ, ಆ ಬೋಧನೆ ಮನುಷ್ಯನ ನಡವಳಿಕೆ ಮಾರ್ಗದರ್ಶನ ನೀಡಿ, ಬದುಕನ್ನು ಧೈರ್ಯದಿಂದ ಹಾಗೂ ಸಾವನ್ನು ಪ್ರಶಾಂತತೆಯಿಂದ ಎದುರಿಸುವಂತೆ ಮಾಡುವುದೋ ಅಥವಾ ಆ ಬದುಕಿನ ಎಲ್ಲಾ ಸಮಸ್ಯೆಗಳು/ಕಳಂಕವನ್ನು ನಿವಾರಿಸುವುದಾದರೆ ಅದು ನಿಜವಾಗಲೂ ಧರ್ಮಗಳ ಧರ್ಮವಾಗಿದೆ. ●

ಜಾತ್ಯಾತೀತರ ಮುಂದಿರುವ ಸವಾಲುಗಳು

ಮೂಲಾರ್ಥದಲ್ಲಿ ನಮ್ಮ ಸಂಸ್ಕೃತಿಯನ್ನು ವೈದಿಕ ಮತ್ತು ಶ್ರವಣಕ ಸಂಸ್ಕೃತಿ ಎಂದು ವಿಭಜಿಸಬಹುದು. ಶ್ರವಣರು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ವಿರೋಧಿಸಿದರು. ಹಿಂದುತ್ವ ಎಂಬ ಪರಿಕಲ್ಪನೆ ಹುಟ್ಟಿಕೊಂಡಿದ್ದು 20ನೇ ಶತಮಾನದಲ್ಲಿ ಸಾವರ್ಕರ್‌ರವರಿಂದ. ಬ್ರಿಟಿಷ್ ಸರ್ಕಾರದ ವಿರುದ್ಧ ಯಾವ ಚಟುವಟಿಕೆ ನಡೆಸುವುದಿಲ್ಲವೆಂದು ಹೇಳಿ ಜೈಲಿನಿಂದ ಹೊರಬಂದ ಸಾವರ್ಕರ್ ಹಿಂದುತ್ವದ ಕುರಿತು ಬರೆದರು. ನಾಜಿಗಳು, ಫ್ಯಾಸಿಸ್ಟರು ಮಾತ್ರ ತಮ್ಮ ನಾಡನ್ನು ತಂದೆ ನಾಡೆಂದು ಕರೆಯುತ್ತಿದ್ದುದು. ಸಾವರ್ಕರ್ ಪ್ರತಿಪಾದಿಸಿದ ಹಿಂದುತ್ವ ಬರೀ ಧರ್ಮವನ್ನು ಕುರಿತು ಹೇಳುವುದಿಲ್ಲ.

○ ರಾಂ ಪುಣ್ಯಾನಿ

ಗುಜರಾತ್ ನರಮೇಧ ನಮ್ಮೆಲ್ಲರ ಮನಸ್ಸಿನಲ್ಲಿ ಹಸಿಯಾಗಿದೆ. ಅಲ್ಲಿ ನಡೆದ ಕೋಮುಗಲಭೆ ಭಿನ್ನ ನಮೂನೆಯದು. ಕೋಮುವಾದ ಒಂದು ರಾಜಕೀಯ ಆಗಿ ಮಾರ್ಪಟ್ಟಿದೆ. ಗುಜರಾತಿನಲ್ಲಿ ಒಂದು ಕೋಮಿನ ಜನರ ಮೇಲೆ ನಡೆದ ಹಿಂಸಾಕಾಂಡದ ಮೂಲವನ್ನು ಬಾಬ್ರಿ ಮಸೀದಿ ಘಟನೆಯಲ್ಲಿ ಕಾಣಬಹುದು. ಭಾರತದ ರಾಜಕಾರಣದಲ್ಲಿ ಬಾಬ್ರಿ ಮಸೀದಿ ಘಟನೆ ಒಂದು ಮುಖ್ಯ ತಿರುವನ್ನು ನೀಡಿತು. ಈ ಘಟನೆಯ ನಂತರ ಕೋಮುವಾದಿ ರಾಜಕಾರಣ ಹೆಚ್ಚುತ್ತಾ ಹೋಯಿತು. ಗುಜರಾತ್ ನರಮೇಧ ಯಾಕೆ ನಡೆಯಿತು ಎಂಬುದಕ್ಕೆ ಉತ್ತರವನ್ನು ಬಾಬ್ರಿ ಮಸೀದಿ ಘಟನೆಯಲ್ಲಿ ಕಾಣಬಹುದು.

1996ರಲ್ಲಿ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂತು. ಇಲ್ಲಿನವರೆಗೂ ಶೇ. 24ಕ್ಕಿಂತ ಹೆಚ್ಚಿನ ಮತಗಳಿಸಿದ ಬಿ.ಜೆ.ಪಿ. ಸರ್ಕಾರ ಚುಕ್ಕಾಣಿ ಹಿಡಿಯಿತು. ಮಂದಿರ ವಿವಾದವನ್ನು ಅನೇಕ ಆಚರಣೆಗಳ ಮೂಲಕ (ಶಿಲಾನ್ಯಾಸ ಪೂಜೆ, ಮಂದಿರಕ್ಕೆ ಬೇಕಾದ ಕಲ್ಲುಗಳ ಪೂಜೆ ಇತ್ಯಾದಿ) ಜೀವಂತವಾಗಿಡಲು ಆಚಾರ್ಯರುಗಳು, ಮಹಾಜನರುಗಳು ನಿರಂತರವಾಗಿ ಪ್ರಯತ್ನಿಸಿದರು. ಆದರೂ ಬಿ.ಜೆ.ಪಿ. ಉತ್ತರ ಭಾರತದ ವಿಧಾನ ಸಭೆ ಚುನಾವಣೆಗಳಲ್ಲಿ ದಯನೀಯವಾಗಿ ಸೋತಿತು. ಇಂತಹ ಸಂದರ್ಭದಲ್ಲಿ ಗೋದ್ರಾ ಘಟನೆ ಸಂಭವಿಸಿತು.

ವಿಚಾರಣೆ ಪ್ರಾರಂಭವಾಗುವ ಮೊದಲೆ ಗೃಹ ಮಂತ್ರಿಗಳಿಂದ ಉತ್ತಮ ಮುಖ್ಯಮಂತ್ರಿ ಎಂಬ ಬಿರುದು ಪಡೆದ ಮುಖ್ಯಮಂತ್ರಿಯ ಘಟನೆ ನಡೆದ ಸ್ಥಳಕ್ಕೆ ಧಾವಿಸಿ ಕೆಲವೇ ಕ್ಷಣಗಳಲ್ಲಿ ಇದೊಂದು ಅಂತರರಾಷ್ಟ್ರೀಯ ಭಯೋತ್ಪಾದಕರ ಕೆಲಸ, ಐ.ಎಸ್.ಎ. ಕೈವಾಡವಿದೆ, ಬಿನ್ ಲ್ಯಾಡನ್‌ಗೆ ಸಂಬಂಧವಿದೆ ಇತ್ಯಾದಿ ಹೇಳಿಕೆ ನೀಡಿಬಿಟ್ಟರು. ಒರಿಸ್ಸಾದಲ್ಲಿ ಗ್ರಾಹಂ ಸ್ಟೈನ್ ಮತ್ತವರ ಮಕ್ಕಳನ್ನು ಜೀವಂತವಾಗಿ ಸುಟ್ಟು ಹಾಕಿದ ಘಟನೆಯನ್ನು ಅಂತರರಾಷ್ಟ್ರೀಯ ಚಿತಾವಣೆ ಎಂದು ಬಿರುದು ನೀಡಿದ್ದಲ್ಲದೆ ಭಜರಂಗದಳದವರನ್ನು ತಾವು ಬಲ್ಲೆವೆಂದು, ಅವರು ಅಂತಹ ಕೃತ್ಯವೆಸಗಲು ಸಾಧ್ಯವೇ ಇಲ್ಲವೆಂದು ಹೇಳಿದರು.

ಸಾಮಾನ್ಯವಾಗಿ ಯಾವ ಕೋಮುಗಲಭೆಯಲ್ಲಾಗಲಿ ಬಲಿಯಾಗುತ್ತಿದ್ದವರು ಬಡವರು. ಆದರೆ ಈಗಿನ ಕೋಮು ಗಲಭೆಯಲ್ಲಿ ಈ ನಿಯಮವನ್ನು ಮುರಿಯಲಾಗಿದೆ. ಎರಡೂ ಕೋಮಿನವರು ಹೋಗುತ್ತಿದ್ದ ಪೂಜಾ ಸ್ಥಳಗಳನ್ನು ವಿಶೇಷವಾಗಿ ಮದ್ರಾಸಗಳನ್ನು (ಸುಮಾರು 358) ನಾಶಪಡಿಸಲಾಗಿದೆ. ಗುಜರಾತಿನ ಹಿಂಸೆ ಹಿಂದುತ್ವದ ಪುನರುತ್ಥಾನವಾಗಿದೆ.

ಗುಜರಾತಿನ ಹಿಂಸೆಯ ವಿಶಿಷ್ಟತೆ ಏನೆಂದರೆ ಈ ಹಿಂಸೆಯನ್ನು ಯೋಜಿಸಿ ಕಾರ್ಯಗತ ಗೊಳಿಸಿದವರೆಲ್ಲರೂ (ಕಾರ್ಯಕರ್ತರಿಂದ ಹಿಡಿದು ಮುಖ್ಯಮಂತ್ರಿಯವರೆಗೂ) ಆರ್.ಎಸ್.ಎಸ್.ನಲ್ಲಿ ತರಬೇತಿಗೊಂಡವರು. ಈ ಹಿಂಸಾಕಾಂಡವು ಕೋಮುವಾದಿ ರಾಜಕಾರಣದ ಅಂಶ. ಧಾರ್ಮಿಕ ಕೋಮುವಾದದ ಏಕರೂಪಿ ಆಸಕ್ತಿಯೇ ಕೋಮುವಾದಿ ರಾಜಕಾರಣದ ಅಡಿಪಾಯ.

ಕೋಮುವಾದಿ ರಾಜಕಾರಣದ ಪ್ರಾರಂಭ :

ಪಾಳೆಗಾರಿಕೆ ವ್ಯವಸ್ಥೆ ಇಳಿಮುಖವಾಗಿ ಕೈಗಾರಿಕಾ ಸಂಸ್ಕೃತಿ ಜಾರಿಗೊಳ್ಳುತ್ತಿದ್ದ ಅದು ಮಧ್ಯಮ ವರ್ಗವನ್ನು ಸೃಷ್ಟಿಸಿತ್ತು. ಸ್ಥಳೀಯ ಕೈಗಾರಿಕೋದ್ಯಮ ವರ್ಗ ತಮ್ಮ ಆಧುನಿಕ ಶಿಕ್ಷಣದ ಹಿನ್ನೆಲೆಯೊಂದಿಗೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷ ಕಟ್ಟಿದರು. ಸ್ಥಳೀಯ ಕೈಗಾರಿಕೋದ್ಯಮಿಗಳನ್ನು, ಸ್ಥಳೀಯ ಶಿಕ್ಷಿತ ಜನರನ್ನು ಪ್ರೋತ್ಸಾಹಿಸುವುದು ಜಾರಿಗೊಂಡಿತು. ಇದಕ್ಕೆ ಪ್ರತಿಯಾಗಿ ಯುನೈಟೆಡ್ ಇಂಡಿಯಾ ಪೆಟ್ರಿಯೊಟಿಕ್ ಅಸೋಸಿಯೇಷನ್ ಹುಟ್ಟಿಕೊಂಡಿತು. ಈ ಸಂಘವು ರಾಜರು, ನವಾಬರುಗಳನ್ನೊಳಗೊಂಡಿತ್ತು.

ಈ ಸಂಘವು ಆಳುವ ಅರಸರಿಂದ ಏನನ್ನಾದರೂ ಒತ್ತಾಯಿಸುವುದು ಅಪರಾಧವೆಂಬ ಮೌಲ್ಯವನ್ನು ಎತ್ತಿ ಹಿಡಿಯುವಂತಹುದಾಗಿತ್ತು. ಬ್ರಿಟಿಷರನ್ನು ಒಡೆದು ಮಹಾಸಭಾ ಮತ್ತು ಮುಸ್ಲಿಂಲೀಗ್ ಹುಟ್ಟಿಕೊಂಡವು. ಹಿಂದೂ ಮಹಾಸಭಾದವರು ತಮಗೆ 5000 ವರ್ಷದ ಇತಿಹಾಸವಿದೆಯೆಂದು ಮುಸ್ಲಿಂರ ಇತಿಹಾಸ ಇತ್ತೀಚಿನದೆಂಬ ವಾದ ಪ್ರಾರಂಭಿಸಿದರು. ಆದರೆ ಇವರಿಬ್ಬರೂ ಆಳರಸರ ವರ್ಗದವರೆಂಬ ಸತ್ಯ ಮರೆಯಾಯಿತು.

ಇದರೊಟ್ಟಿಗೆ ದಮನಿತ ಜನರು ಸಂಘಟಿತರಾಗುತ್ತಿದ್ದ ಪ್ರಕ್ರಿಯೆಯೂ ನಡೆಯುತ್ತಿತ್ತು. ಅಂಬೇಡ್ಕರ್, ಜ್ಯೋತಿಬಾಪುಲೆಯಂತಹವರ ಪ್ರಯತ್ನಗಳು ದಮನಿತ ಲಿಂಗ, ಜಾತಿಗಳ ನಡುವೆ ಬದಲಾವಣೆಯನ್ನುಂಟು ಮಾಡಿತ್ತು.

ಹೀಗೆ ಭಾರತ ಒಂದು ರಾಷ್ಟ್ರವಾಗಿ ರೂಪ ಪಡೆಯುವ ಪ್ರಕ್ರಿಯೆಯಲ್ಲಿ ಮೂರು ಮುಖ್ಯ ಅಂಶಗಳನ್ನು ನಾವು ಗಮನಿಸಬೇಕು.

1. ಹೊಸ ಮಧ್ಯಮ ವರ್ಗವೊಂದು ರೂಪಗೊಂಡಿದ್ದು.
2. ಬ್ರಿಟಿಷರ ವಿರುದ್ಧ ಹುಟ್ಟಿಕೊಂಡ ಪ್ರತಿಭಟನೆ.
3. ದಮನಿತರಲ್ಲಿ ಬದಲಾವಣೆಯ ಪ್ರಕ್ರಿಯೆ.

ದೇಶ ವಿಭಜನೆಗೊಂಡಿದ್ದು ದೇಶದ ರಾಜಕೀಯದ ಮೇಲೆ ಪರಿಣಾಮ ಬೀರಿತು. ಇಲ್ಲಿನ, ಸಂಬಳ ಪಡೆಯುವ ಮುಸ್ಲಿಂ ವರ್ಗವೂ ಮಹಾತ್ವಾಕಾಂಕ್ಷೆಯಿಂದ ಪಾಕಿಸ್ತಾನಕ್ಕೆ ಹೋದರೂ ಅಲ್ಲಿ ಹೆಚ್ಚೆಚ್ಚು ಅಭದ್ರತೆಗೊಳಪಟ್ಟರು.

ತಮ್ಮ ಹಕ್ಕುಗಳಿಗಾಗಿ ಮುಹಜೀರ್ ಸಂಘ ಮಾಡಿಕೊಂಡರು. ಧರ್ಮದ ಆಧಾರದ ಮೇಲೆ ದೇಶ ರಚನೆಯಾದರೂ ಒಂದೇ ಧರ್ಮದಲ್ಲಿನ ಆರ್ಥಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳೂ ಮುಖ್ಯ ಪಾತ್ರವಹಿಸುತ್ತವೆ ಎಂಬುದಕ್ಕೆ ಬಾಂಗ್ಲಾದೇಶ ವಿಭಜನೆಯೇ ಸಾಕ್ಷಿ.

ನಾವು ಗಮನಿಸಬೇಕಾದ ಮುಖ್ಯ ಅಂಶವೆಂದರೆ ಹಿಂದೂಗಳ ಪ್ರತಿನಿಧಿಗಳೆಂದುಕೊಳುವವರು ಶೇ. 24ಕ್ಕಿಂತ ಹೆಚ್ಚಿನ ಮತ ಪಡೆದಿಲ್ಲ. ಒಟ್ಟು ಮುಸ್ಲಿಂ ಸಮುದಾಯದಲ್ಲಿ ಶೇ. 3.6ಕ್ಕಿಂತ ಹೆಚ್ಚು ಮತ ಮುಸ್ಲಿಂ ಲೀಗ್‌ಗೆ ಸಿಕ್ಕಿಲ್ಲ.

ಹಿಂದೂ ಧರ್ಮಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ ಎನ್ನುತ್ತಾರೆ. ಆದರೆ ಹಿಂದು ಎಂಬ ಪದ ಕ್ರಿ.ಪೂ. 6ರ ಮುಂಚಿನ ಯಾವ ಪವಿತ್ರ ಗ್ರಂಥಗಳಲ್ಲೂ ಇಲ್ಲ. ಹಿಂದು ಎಂಬ ಪದ ಅರಬರಿಂದ ಪ್ರಾರಂಭವಾಯಿತು. ಅವರು ಸಿಂಧು ಎಂದು

ಉಚ್ಛರಿಸಲು ಬರದಿದ್ದುದರಿಂದ ಹಿಂದೂ ಎಂದು ಕರೆದರು.

ಮೂಲಾರ್ಥದಲ್ಲಿ ನಮ್ಮ ಸಂಸ್ಕೃತಿಯನ್ನು ವೈದಿಕ ಮತ್ತು ಶ್ರವಣಿಕ ಸಂಸ್ಕೃತಿ ಎಂದು ವಿಭಜಿಸಬಹುದು. ಶ್ರವಣರು ಶ್ರೇಣೀಕೃತ ಜಾತಿ ವ್ಯವಸ್ಥೆಯನ್ನು ವಿರೋಧಿಸಿದರು. ಹಿಂದುತ್ವ ಎಂಬ ಪರಿಕಲ್ಪನೆ ಹುಟ್ಟಿಕೊಂಡಿದ್ದು 20ನೇ ಶತಮಾನದಲ್ಲಿ ಸಾವರ್ಕರ್‌ರವರಿಂದ, ಬ್ರಿಟಿಷ್ ಸರ್ಕಾರದ ವಿರುದ್ಧ ಯಾವ ಚಟುವಟಿಕೆ ನಡೆಸುವುದಿಲ್ಲವೆಂದು ಹೇಳಿ ಜೈಲಿನಿಂದ ಹೊರಬಂದ ಸಾವರ್ಕರ್ ಹಿಂದುತ್ವದ ಕುರಿತು ಬರೆದರು. ನಾಜಿಗಳು, ಫ್ಯಾಸಿಸ್ಟರು ಮಾತ್ರ ತಮ್ಮ ನಾಡನ್ನು ತಂದೆ ನಾಡೆಂದು ಕರೆಯುತ್ತಿದ್ದುದು. ಸಾವರ್ಕರ್ ಪ್ರತಿಪಾದಿಸಿದ ಹಿಂದುತ್ವ ಬರೀ ಧರ್ಮವನ್ನು ಕುರಿತು ಹೇಳುವುದಿಲ್ಲ.

ಸಾವರ್ಕರ್ ಹುಟ್ಟುಹಾಕಿದ ರಾಷ್ಟ್ರೀಯ ಸ್ವಯಂ ಸೇವಾ ಸಂಘ ನಾಗಪುರದಲ್ಲಿ ಪ್ರಾರಂಭಿಸುವುದರ ಹಿಂದೆ ಒಂದು ಉದ್ದೇಶವಿತ್ತು. ನಾಗಪುರ, ವಿದರ್ಭ ಇತ್ಯಾದಿ ಪ್ರದೇಶಗಳಲ್ಲಿ ಬ್ರಾಹ್ಮಣ ವಿರೋಧಿ ಚಳುವಳಿ ಗಟ್ಟಿಯಾಗಿತ್ತು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಒಂದು ಚಳುವಳಿಯಾಗಿ ರೂಪಗೊಂಡಿತ್ತು. ಬ್ರಾಹ್ಮಣದ ಪ್ರಭುತ್ವ ಇಳಿಮುಖಗೊಂಡಿತ್ತು.

ಹೀಗೆ ಬ್ರಾಹ್ಮಣದ ಪ್ರಭುತ್ವವನ್ನು ಪುನರ್ ಸ್ಥಾಪಿಸಲು ಆರ್.ಎಸ್.ಎಸ್. ಪ್ರಾರಂಭವಾಯಿತು. ಅದಕ್ಕೆ ಯಾವುದೇ ಪ್ರಜಾಸತ್ತಾತ್ಮಕ ರಚನೆಗಳಿಲ್ಲ. ಮುಂದಿನ ಮುಖ್ಯಸ್ಥನಾರೆಂದು ಹಿಂದಿನ ಅಥವಾ ಸಾಯುತ್ತಿರುವ ಮುಖ್ಯಸ್ಥ ಹೆಸರು ಬರೆದು ಸೂಚಿಸುತ್ತಾರೆ. ಆರ್.ಎಸ್.ಎಸ್.ನ ಎರಡನೇ ಮುಖ್ಯಸ್ಥರಾಗಿದ್ದ ಗೋಲ್ವಾಲ್ಕರ್. "ಹೂ ಇಸ್ ಎ ಹಿಂದು" ಎಂಬ ಪುಸ್ತಕ ಬರೆದರು. ಅದರಲ್ಲಿ ಹಿಂದುಗಳೆಂದರೆ ಭಾರತದಲ್ಲಿ ವಿವಾದರಹಿತ, ಪ್ರಶ್ನಾತೀತ ಸ್ಥಾನವುಳ್ಳವರು.

ಆರ್ಯರು ಹೊರಗಿನಿಂದ ಬಂದವರಲ್ಲ. ಇಲ್ಲಿಯ ಮೂಲ ನಿವಾಸಿಗಳೆಂದು ವಾದಿಸಲಾಯಿತು. ಬ್ರಿಟಿಷರು ಭಾರತಕ್ಕೆ ಬಂದಾಗ ಕೆಲವು ಹಿಂದೂಗಳು ಅವರನ್ನು ಸ್ವಾಗತಿಸಿದರು. ಎಷ್ಟೋ ವರ್ಷಗಳ ನಂತರ ಸಹೋದರರ ಪುನರ್ ಮಿಲನವೆಂದು ಸಂತೋಷಿಸಿದರು. (ಮಧ್ಯ ಏಶಿಯಾದಿಂದ ಆರ್ಯರು ಭಾರತಕ್ಕೆ, ಯುರೋಪಿಗೆ ವಲಸೆ ಹೋದರು. ಯುರೋಪಿಗೆ ಹೋದ ಆರ್ಯರು ಬ್ರಿಟಿಷರಾಗಿ ಭಾರತಕ್ಕೆ ಬಂದಾಗ ಸಹಜವಾಗಿ ಇಲ್ಲಿನ ಆರ್ಯರಿಗೆ ಸಂತೋಷವಾಗಿರಬೇಕು!)

ಗೋಲ್ವಾಲ್ಕರ್ ಅವರು ತಮ್ಮ ಬಂಚ್ ಆಫ್ ಥಾಟ್ಸ್ ಪುಸ್ತಕದಲ್ಲಿ ಮನುವನ್ನು ಬಹುದೊಡ್ಡ ನ್ಯಾಯ ರಚನಕಾರನೆಂದು ಕರೆದಿದ್ದಾರೆ. ಇದು ಹಿಂದು ರಾಷ್ಟ್ರವೆಂದು ಈ ರಾಷ್ಟ್ರಕ್ಕೆ ಮುಸ್ಲಿಂರಿಂದ, ಕ್ರಿಶ್ಚಿಯನ್‌ರಿಂದ, ಮಾರ್ಕ್ಸ್‌ವಾದಿಗಳಿಂದ ಬೆದರಿಕೆ ಇದೆ ಎಂದು ಹೇಳುತ್ತಾರೆ. ಹೀಗೆ ಆರ್.ಎಸ್.ಎಸ್. ಸಿದ್ಧಾಂತದ ಅಡಿಪಾಯ ಸದ್ದಿಲ್ಲದೆ ರೂಪಗೊಂಡಿತು.

ದಿನಾಂಕ 11-08-2002ರಂದು 'ಶಾಂತಿಗಾಗಿ ನಾವು' ವೇದಿಕೆಯವರು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ರಾಂ ಪುಣ್ಯಾನಿಯವರು 'ಜಾತ್ಯಾತೀತರ ಮುಂದಿರುವ ಸವಾಲುಗಳು' ಕುರಿತು ಮಾತನಾಡಿದರು. ಹಲವಾರು ವರ್ಷಗಳಿಂದ ಕೋಮುವಾದಿ ವಿರೋಧಿ ಹೋರಾಟದಲ್ಲಿ ಸಕ್ರಿಯವಾಗಿರುವ ಪುಣ್ಯಾನಿಯವರ ಭಾಷಣದ ಸಾರಾಂಶ ಇದು.

ಕೃಪೆ : ಮಾನಸ

1952ರಲ್ಲಿ ಆರ್.ಎಸ್.ಎಸ್. ಭಾರತೀಯ ಜನಸಂಘವನ್ನು ಪ್ರಾರಂಭಿಸಿತು. ಆರ್.ಎಸ್.ಎಸ್. ನಂತಹ ಸಂಘಟನೆಗಳು ಮಹಿಳಾ ಸಮಾನತೆಯ ವಿರೋಧಿಗಳೆಂಬುದಕ್ಕೆ ಉದಾಹರಣೆಯಾಗಿ ಈ ಘಟನೆಯನ್ನು ತೆಗೆದುಕೊಳ್ಳಬಹುದು.

1936ರಲ್ಲಿ ಮತಿಬಾಯಿ ಕೇಳ್ಕರ್ ಹೆಗ್ಡೆವಾರರಿಗೊಂದು ಪತ್ರ ಬರೆದು ರಾಷ್ಟ್ರ ನಿರ್ಮಾಣದಲ್ಲಿ ಮಹಿಳೆಯರಿಗೂ ಅವಕಾಶ ಕೊಡಬೇಕೆಂದು ಕೇಳಿದರು. ಬಹಳ ಯೋಚಿಸಿದ ನಂತರ ಹೆಗ್ಡೆವಾರರು ಮಹಿಳೆಯರ ಪ್ರತ್ಯೇಕವಾಗಿ ರಾಷ್ಟ್ರ ಸೇವಿಕಾ ಸಂಘ ಪ್ರಾರಂಭಿಸಬಹುದೆಂದು ಸೂಚಿಸಿದರು. ಪುರುಷರದು ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಪುರುಷರು ಸ್ವಯಂ ಪ್ರೇರಣೆಯಿಂದ ಬಂದವರು, ಮಹಿಳೆಯರು ರಾಷ್ಟ್ರ ಸೇವಿಕೆಯರು. ಸ್ವಯಂ ಪ್ರೇರಣೆಯಿಂದಲ್ಲ ಅನುಮತಿ ಪಡೆದು ಸೇವೆಗೆ ನಿಂತವರು. ಸ್ವಾತಂತ್ರ್ಯ, ಸಮಾನತೆ ಎಂಬಂತಹ ಮೌಲ್ಯಗಳನ್ನಾಧರಿಸದೆ, ದ್ವೇಷ, ಅಸಮಾನತೆಯಂತಹ ಇತ್ಯಾತ್ಮಕ ಅಂಶಗಳನ್ನಾಧರಿಸಿ ಹಿಂದುತ್ವ ರೂಪಗೊಂಡಿತು.

ಈ ಇತ್ಯಾತ್ಮಕ ಅಂಶಗಳು ನಮ್ಮ ಸಾಮಾಜಿಕ ಮನಸ್ಸಿನ ಭಾಗವಾಗಿಬಿಟ್ಟಿವೆ. ರಾಮಮಂದಿರ ವಿವಾದವೆ ಹಿಂದುತ್ವ ರಾಜಕಾರಣದ ಬಂಡವಾಳವಾಯಿತು. ತಮಾಷೆ ಎಂದರೆ ಆನಂದ ಪಟವರ್ಧನ್ ತಮ್ಮ ರಾಮ್‌ಕೆ ನಾಮ್ ಸಿನಿಮಾಕ್ಕೆ ಸಂಬಂಧಪಟ್ಟಂತೆ ಅಯೋಧ್ಯೆಯಲ್ಲಿ 49 ಬೇರೆ ಬೇರೆ ದೇವಸ್ಥಾನದ ಪೂಜಾರಿಗಳನ್ನು ಸಂದರ್ಶಿಸಿದಾಗ ಪ್ರತಿಯೊಬ್ಬ ಪೂಜಾರಿಯೂ ತಮ್ಮ ದೇವಸ್ಥಾನವೇ ನಿಜವಾದ ರಾಮಜನ್ಮಸ್ಥಾನವೆಂದು ಹೇಳಿದ್ದರು.

ಇದೇ ಹಿಂದುತ್ವವಾದಿಗಳ ಕೋಮುವಾದಿ ರಾಜಕಾರಣಕ್ಕೆ ಗುಜರಾತ್ ಒಂದು ಪ್ರಯೋಗಾಲಯವಾಗಿದೆ. 1980ರಲ್ಲಿ ಗುಜರಾತಿನಲ್ಲಿ ನಡೆದ ಗಲಭೆ ದಲಿತರ ವಿರೋಧಿಸಿ ನಡೆದದ್ದು. 1985ರಿಂದಲೂ ರಾಮಮಂದಿರವಿಲ್ಲದೆ ನಮ್ಮ ಆಧ್ಯಾತ್ಮಿಕ ಆಸಕ್ತಿಗಳು ಸಂತೃಪ್ತಿ ಹೊಂದವು ಎಂಬ ಭಾವನೆಯನ್ನು ನಿರಂತರವಾಗಿ ಬಿತ್ತುತ್ತ ಬಂದರು. ಶ್ರೀಮಂತ ರೈತರು, ಶ್ರೀಮಂತ ವರ್ಗಗಳು, ಕೈಗಾರಿಕೋದ್ಯಮಿಗಳ ಬೆಂಬಲ ಪಡೆಯುತ್ತಾ ಅಲ್ಪಸಂಖ್ಯಾತರನ್ನು ರಾಕ್ಷಸರೆಂಬಂತೆ ಚಿತ್ರಿಸುತ್ತಾ ಬಂದರು. ಗಲಭೆ, ಹತ್ಯೆ, ಆಸ್ತಿ ನಷ್ಟ ಮಾಡುವ ಮೂಲಕ ಅವರಲ್ಲಿ ಅಭದ್ರತೆ ಮೂಡಿಸಿ ಅವರು ಹೆಚ್ಚೆಚ್ಚು ಕಠಿಣರಾಗುವಂತೆ ಮಾಡುವುದೇ ಕೋಮುವಾದ ರಾಜಕಾರಣದ ಉದ್ದೇಶ. ಅಭದ್ರತೆ ಹೆಚ್ಚಿದಂತೆ ಕಠಿಣರಾಗುತ್ತಾ ಹೋಗಿ ಹಿಂಸೆ ಹೆಚ್ಚಾಗುತ್ತದೆ.

ಮುಂಬೈನಲ್ಲಿ ಕೋಮುವಾದದ ವಿರುದ್ಧ ಕೆಲಸ ಮಾಡುತ್ತಿದ್ದ ಮಹಿಳಾ ಸಂಘಟನೆ ಆವಾಜ್ ಎ ನಿಸ್ವಾನ್ ಕಾರ್ಯಕರ್ತರು ಸಮುದಾಯದೊಳಗೆ ತಮ್ಮ ಕೆಲಸಕ್ಕೆ ಪ್ರತಿರೋಧವಿರುವುದನ್ನು ಹೇಳಿದ್ದರು. ಈ ಸಂಘಟನೆಯು ಬುರ್ಖಾ, ಬಹುಪತ್ನಿತ್ವ, ತಲಾಖ್ ವಿರುದ್ಧ ನಿರಂತರವಾಗಿ ಹೋರಾಡುತ್ತಾ ಬಂದಿದೆ.

ಕೋಮುವಾದಿ ರಾಜಕಾರಣಕ್ಕೆ ಹಿಂಸೆಯೇ ಆಹಾರ, ಹಿಂಸೆ ಹುಟ್ಟಿ ಹಾಕಲು ಗುಮಾನಿ ಹಬ್ಬಿಸುವುದರಲ್ಲಿ ನಿಸ್ಸೀಮರು. ಪುಣೆಯ ಪಾಸ್ವಾಡದಲ್ಲಿ ನಡೆದ ಗಲಭೆಗೆ ಮೂಲ ಗುಮಾನಿ ಮುಸ್ಲಿಂನೊಬ್ಬ ಮನೆ ಕಟ್ಟಿದ, ಆ ಮನೆಗೊಂದು ಬೇಸ್‌ಮೆಂಟ್ ಇದೆ. ಆ ಬೇಸ್‌ಮೆಂಟ್‌ನಲ್ಲಿ ಶಸ್ತ್ರಾಸ್ತ್ರ ಸಂಗ್ರಹಿಸುತ್ತಿದ್ದಾನೆ. ಯಾಕೆಂದರೆ ದೇವಸ್ಥಾನದ ಮೇಲೆ ದಾಳಿ ಮಾಡಿಸಲು, ಈ ದಾಳಿಗೆ ಬಿನ್‌ಲಾಡನ್ ಬೆಂಬಲವಿದೆ. ಅವನು ಇಲ್ಲಿಗೆ ಬರುತ್ತಾನಂತೆ, ಹೀಗೆ ಈ ಅಂತೆ ಕಂತೆಗಳೆ ಅಂತಿಮವಾಗಿ ಹಿಂಸೆಯ ರೂಪ ಪಡೆಯಿತು.

ಗುಜರಾತ್ ಹಿಂಸಾಕಾಂಡ ಕುರಿತಂತೆ ಮಧ್ಯಮ ವರ್ಗ ವ್ಯಕ್ತಪಡಿಸಿದ "ಅವರಿಗೆ ತಕ್ಕ ಶಾಸ್ತಿಯಾಯಿತು" ಎಂಬ ಪ್ರತಿಕ್ರಿಯೆ ಆಘಾತಕಾರಿಯಾದುದು. ನಮ್ಮಂತಹ ಅರೆ ಜಾತ್ಯಾತೀತ ಸಮಾಜದಲ್ಲಿ ಕೋಮುವಾದವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಪ್ರಜಾಸತ್ತಾತ್ಮಕ ಸಮಾಜದ ನಿರ್ಮಾಣ ತುಂಬಾ ಮುಖ್ಯ. ಪ್ರಜಾಸತ್ತಾತ್ಮಕತೆ ಮತ್ತು ಜಾತ್ಯಾತೀತತೆ ಬೇರೆ ಬೇರೆಯಲ್ಲ.

ಸರಿಯಾದ ಸಮಯದಲ್ಲಿ ಕೋಮುವಾದವನ್ನು ಎದುರಿಸದಿದ್ದರೆ ಪರಿಣಾಮ ಅಪಾಯಕಾರಿ. ಕೋಮುವಾದಿ ಪಕ್ಷಗಳು ತಾವೆ ಸ್ವತಃ ಅಥವಾ ಪಕ್ಷಗಳೊಂದಿಗಿನ ಮೈತ್ರಿಯಿಂದ ಅಧಿಕಾರಕ್ಕೆ ಬರುವುದು ಅಪಾಯಕಾರಿ. ಅಧಿಕಾರಕ್ಕೆ ಬಂದ ಕೂಡಲೆ ತಮ್ಮ ಅಜೆಂಡಾಗಳನ್ನು ಜೀವಂತವಾಗಿಡಲು ಸಾಕಷ್ಟು ರಚನೆಗಳು ಅವರಿಗೆ ಸಿಕ್ಕಿಬಿಡುತ್ತವೆ.

ಕೋಮುವಾದದ ವಿರುದ್ಧ ಹೋರಾಟವು ಹಲವು ಲೇಯರ್‌ಗಳನ್ನೊಳಗೊಂಡ ಹೋರಾಟ, ಸಭೆಯ ಮಿಥ್ಯೆಗಳಿಗೆ ಹೊಸ ಜೀವ ಕೊಡುವ ಮೂಲಕ ದ್ವೇಷ ಭಾವನೆಯನ್ನು ಮಾನಸಿಕ ಸ್ಥಿತಿಯಾಗಿಸುವುದರಿಂದಲೆ ಅಮಾನುಷವಾದ ಕ್ರೌರ್ಯವೂ ಸಮರ್ಥಿಸಲ್ಪಡುತ್ತದೆ. ಹಿಂದಿ ಪದ್ಯವೊಂದನ್ನು ಹೇಳಿ ರಾಮ್‌ರವರು ತಮ್ಮ ಮಾತು ಮುಗಿಸಿದರು. ಅಲ್ಪ ಸಂಖ್ಯಾತ ಹತ್ಯೆಯಾಗಿ ನೆತ್ತರ ಮಳೆಯಾಯಿತು. ಮುಂದಿನ ವರ್ಷ ಓಟಿನ ಒಳ್ಳೆಯ ಫಸಲು ಸಿಗಬಹುದು. ●



ಮೇರಾ ಭಾರತ್ ಮಹಾನ್

ಪೊಲೀಸ್, ತಹಶೀಲ್ ನೌಕರರಿಂದಲೆ ದಲಿತ ಮಹಿಳೆಯ ಬೆತ್ತಲೆ ಮೆರವಣಿಗೆ

ಪ್ರತಾಪಗಢ : ಸೆ 21 (ಪಿಟಿಐ)-ಉತ್ತರಪ್ರದೇಶದ ಪ್ರತಾಪಗಢ ಜಿಲ್ಲೆಯಲ್ಲಿ ಪೊಲೀಸರು ಮತ್ತು ತಹಶೀಲ್ ಕಚೇರಿಯ ನೌಕರರು ಸೇರಿ ದಲಿತ ಮಹಿಳೆಯೊಬ್ಬಳ ನಗ್ನ ಮೆರವಣಿಗೆ ಮಾಡಿದ್ದಾರೆ ಎನ್ನಲಾಗಿದೆ. ತನ್ನನ್ನು ಒಂದು ರಾತ್ರಿಯ ಮಟ್ಟಿಗೆ ಪೊಲೀಸ್ ಲಾಕಪ್‌ನಲ್ಲಿ ಸಹ ಇರಿಸಲಾಗಿತ್ತು ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಆಯೋಗ ಮತ್ತು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ದೂರಿನಲ್ಲಿ ಆ ಮಹಿಳೆ ತಿಳಿಸಿದ್ದಾಳೆ.

ಈ ಘಟನೆ ನಿನ್ನೆ ಕಟ್ಟಾ ಮಾನಪುರಹಳ್ಳಿಯಲ್ಲಿ ನಡೆದಿದೆ ಎನ್ನಲಾಗಿದೆ.

ಪೊಲೀಸರು ಮತ್ತು ತಹಶೀಲ್ ನೌಕರರು ತನ್ನ ಬೆತ್ತಲೆ ಮೆರವಣಿಗೆ ಮಾಡಿ ನಂತರ ತನ್ನನ್ನು ಇಬ್ಬರು ಸಂಬಂಧಿ ಮಹಿಳೆಯರ ಜೊತೆ ಲಾಕಪ್‌ನಲ್ಲಿ ಕೂಡಿ ಹಾಕಿದರು ಎಂದು ಆ ವಿಧವೆ ಮಹಿಳೆ ತಿಳಿಸಿದ್ದಾಳೆ. ಮುಂಬೈನಲ್ಲಿ ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುವ ಆಕೆಯನ್ನು ಇಂದು ನ್ಯಾಯಾಲಯ ಬಿಡುಗಡೆ ಮಾಡಿದೆ.

'ತನ್ನ ಮನೆ ಇರುವ ಜಾಗವನ್ನು ತಹಶೀಲ್ದಾರರು ಬೇರೆಯವರಿಗೆ ನೀಡಿದ್ದಾರೆ. ನ್ಯಾಯಾಲಯದ ತಡೆಯಾಜ್ಞೆ ಇರುವ ಹೊರತಾಗಿಯೂ ಪೊಲೀಸರು ತನ್ನನ್ನು ಬಲವಂತವಾಗಿ ಅಲ್ಲಿಂದ ತೆರವುಗೊಳಿಸುವ ಯತ್ನ ನಡೆಸಿದ್ದಾರೆ' ಎಂದು ಆರೋಪಿಸಿರುವ ಆಕೆ, ಪೊಲೀಸ್ ಅಧಿಕಾರಿ ಮತ್ತು ತಹಶೀಲ್ದಾರರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ. (ಪ್ರಜಾವಾಣಿ)

ಹರಿಜನ ಮಹಿಳೆಗೆ ಚಪ್ಪಲಿ ಹಾರ ಹಾಕಿ ಮೆರವಣಿಗೆ

ಜಮ್‌ಶೆಡ್‌ಪುರ : ಸೆ. 27 (ಪಿಟಿಐ)-ಪರ ಪುರುಷನೊಂದಿಗೆ ಮಾತನಾಡಿದಳೆಂಬ ಕಾರಣಕ್ಕಾಗಿ ಹರಿಜನ ಮಹಿಳೆಯೊಬ್ಬಳ ತಲೆ ಬೋಳಿಸಿ, ಕೊರಳಿಗೆ ಚಪ್ಪಲಿ ಹಾರ ಹಾಕಿ, ಅರೆ ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದ ಅಮಾನವೀಯ ಘಟನೆ ಇಲ್ಲಿಯ ಬರ್ಮಾಮೈನ್ಸ್ ಹರಿಜನ ಕೇರಿಯಲ್ಲಿ ನಡೆದಿದೆ.

ಈ ಮೆರವಣಿಗೆ ಮುಂದೆ ನಿಂತವನು ಸ್ವತಃ ಆಕೆಯ ಪತಿ. "ತನ್ನ ಗಂಡನ ಸ್ನೇಹಿತ ಸಂತೋಷ ಎಂಬುವವರೊಂದಿಗೆ ಮಾತನಾಡಿದ ಒಂದೇ ಕಾರಣಕ್ಕಾಗಿ ತನ್ನ ಗಂಡ ಉಮೇಶ್ ಮುಖಿ ಮತ್ತು ಕೇರಿಯ ಮುಖ್ಯಸ್ಥ ರಮೇಶ ಮುಖಿ ಇತರ ಮೂವರು ಕಳೆದ ಭಾನುವಾರ ತನ್ನನ್ನು ಅರೆಬೆತ್ತಲೆಗೊಳಿಸಿ, ಕೂದಲು ತೆಗೆಸಿ, ಚಪ್ಪಲಿ ಹಾರ ಹಾಕಿ ಮೆರವಣಿಗೆ ಮಾಡಿದರು" ಎಂದು ಬಲಿಪಶುವಾದ ನಿಶಾ ಮುಖಿ ಬರ್ಮಾ ಮೈನ್ಸ್ ಪೊಲೀಸ್ ಠಾಣೆಯಲ್ಲಿ ನಿನ್ನೆ ದೂರು ದಾಖಲಿಸಿದ್ದಾಳೆಂದು ಪೊಲೀಸರು ತಿಳಿಸಿದ್ದಾರೆ.

ನಿಶಾ ಪತಿ ಉಮೇಶ್ ಅವರೊಂದಿಗೆ 5 ಮಂದಿಯನ್ನು ನಿನ್ನೆ ಪೊಲೀಸರು ಬಂಧಿಸಿ ಮುಖ್ಯ ಮ್ಯಾಜಿಸ್ಟ್ರೇಟ್ ಅವರ ಮುಂದೆ ಹಾಜರು ಪಡಿಸಿದರು. ಆರೋಪಿಗಳನ್ನು ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿದೆ. (ಪ್ರಜಾವಾಣಿ)

ಆತ್ಮೀಯರೇ,

ನಿಮ್ಮೂರಿನಲ್ಲಿ ನಡೆದ ಇಂತಹ ಹೇಯ ಘಟನೆಗಳು ಮಾಧ್ಯಮಗಳ ಗಮನಕ್ಕೆ ಬಾರದೇ ಹೋಗಬಹುದು. ಅಂತಹ ಘಟನೆಗಳನ್ನು 'ಸಂವಾದ'ಕ್ಕಾಗಿ ತಪ್ಪದೇ ಬರೆದು ಕಳಿಸಿ. ಮಹಾನ್ ರಾಷ್ಟ್ರದ ಮಾನ ಎತ್ತಿ ಹಿಡಿವ ಕಾರ್ಯದಲ್ಲಿ ಕೈಜೋಡಿಸಿ. —ಸಂಪಾದಕ

ಜಗತ್ತಿಗೆಲ್ಲ ತಾನು ಮಹಾ ಅಹಿಂಸಾವಾದಿ ರಾಷ್ಟ್ರವೆಂದೂ ಮಾನವ ಹಕ್ಕುಗಳಿಗೆ ಚ್ಯುತಿ ಬಾರದಂತೆ ನಡೆಯುತ್ತಿರುವುದಾಗಿಯೂ ಸದಾ ಬೊಗಳೆ ಬಿಡುವ ನಮ್ಮ ಭಾರತಮಾತೆಯ ಹೆಮ್ಮೆಯ ದಾಖಲೆಗಳು ಇವು! ಐದು ಸಾವಿರ ವರ್ಷಗಳ ಭವ್ಯ ಪರಂಪರೆಯ ಭಾರತ, ಸಾಂಸ್ಕೃತಿಕವಾಗಿ ಎಷ್ಟೊಂದು ಅಧೋಗತಿಗೆ ಇಳಿದಿದೆ ಎನ್ನುವುದಕ್ಕೆ ಇಲ್ಲಿನ ದಾಖಲೆಗಳೇ ಸಾಕ್ಷಿ. ಭಾರತದ ಭವ್ಯ ಪರಂಪರೆಯನ್ನು ಎತ್ತಿ ಹಿಡಿಯುವುದಕ್ಕಾಗಿಯೇ ಈ ಅಂಕಣ ಆರಂಭಿಸಲಾಗಿದೆ. 'ತನ್ನಂತೆ ಪರರ ಬಗೆ'ಯದ ಅಸಮಾನ ವ್ಯವಸ್ಥೆಗೆ ಹಿಡಿದ ಕೈಗನ್ನಡಿ ಇದು.

—ಸಂಪಾದಕ

ದಲಿತ ಮಹಿಳೆಯನ್ನು ಬೆತ್ತಲೆ ಮಾಡಿ ಥಳಿಸಿದ ಗ್ರಾ. ಪಂ. ಸದಸ್ಯ

ರಾಯಚೂರು : ಅ. 8- ದಲಿತ ಮಹಿಳೆಯೊಬ್ಬಳನ್ನು ಗ್ರಾಮ ಪಂಚಾಯತ್ ಸದಸ್ಯರೊಬ್ಬರು ಬೆತ್ತಲೆ ಮಾಡಿ ಥಳಿಸಿ ಜೀವ ಬೆದರಿಕೆ ಹಾಕಿದ ಘಟನೆ ದೇವದುರ್ಗ ತಾಲ್ಲೂಕಿನ ಯರಮಸಾಳ ಗ್ರಾಮದಿಂದ ತಡವಾಗಿ ಬೆಳಕಿಗೆ ಬಂದಿದೆ. ಗ್ರಾ.ಪಂ. ಸದಸ್ಯ ಸಾಬಣ್ಣ ಪದ್ದಣ್ಣ ಎಂಬಾತ ಇತರೆ ಐದು ಜನರೊಂದಿಗೆ ಸೇರಿಕೊಂಡು ಮಹಿಳೆಯೊಬ್ಬರ ಮನೆಗೆ ನುಗ್ಗಿ ಅ. 1 ರಂದು ಮನಬಂದಂತೆ ಹೊಡೆದು ಬೆತ್ತಲೆಗೊಳಿಸಿ ಕೊಲ್ಲುವುದಾಗಿ ಹೆದರಿಸಿದ್ದಾರೆ. ಅಲ್ಲದೆ ಮನೆಯಲ್ಲಿದ್ದ 3 ತೊಲ ಚಿನ್ನ, 32 ಸಾವಿರ ರೂಪಾಯಿ ಹಣವನ್ನು ಲೂಟಿ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನೆ ಕುರಿತು ಮಹಿಳೆ, ಸ್ಥಳೀಯ ಪಿಐಎಸ್‌ಐ ಸುಭಾಷ್ಚಂದ್ರ ಅವರಿಗೆ ದೂರು ನೀಡಿದರೂ ದಾಖಲಿಸಿಕೊಂಡಿಲ್ಲ. ದೂರು ದಾಖಲೆಗೆ 8 ಸಾವಿರ ಕೊಡಬೇಕೆಂದು ಕೇಳಿದಾಗ ಹಣ ಕೊಟ್ಟಿದ್ದಾಳೆ. ಆದರೆ ದೂರು ದಾಖಲಿಸಿಕೊಳ್ಳದೆ ಬೆದರಿಸಿ ಕಳುಹಿಸಲಾಗಿದೆ ಎನ್ನಲಾಗಿದೆ. ಸ್ಥಳೀಯ ವಕೀಲರೊಬ್ಬರು ಮಹಿಳೆ ಪರ ನ್ಯಾಯಾಲಯಕ್ಕೆ ಮೊರೆ ಹೋಗಿದ್ದಾರೆ. (ಪ್ರಜಾವಾಣಿ)

M.A.G.(2) PRB.DECL 65/02-03 ತೆರೆದ-ಅಂಚೆ

ಗೆ,